೩. ನಿಯಮ ೬೯ರ ಮೇರೆಗೆ.

ವಿಷಯ: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂಗಾರು ಮಳೆಯ ಅಭಾವದಿಂದಾಗಿ ಉಂಟಾಗಿರುವ ಬರಗಾಲ ಪರಿಸ್ಥಿತಿ ಬಗ್ಗೆ (ಮುಂದುವರೆದ ಚರ್ಚೆ)

+ ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ಒಂದು ದಶಕದ ನಂತರ ಅತ್ಯಂತ ಗಂಭೀರವಾದೊಂದು ಸಮಸ್ಯೆ ನಮ್ಮ ರಾಜ್ಯದಲ್ಲಿ ಎದುರಾಗಿದೆ. ಈ ಸಮಸ್ಯೆ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಮತ್ತು ಮುಂದಿನ ದಿನಗಳಲ್ಲಿ ಸರ್ಕಾರ ಮಾಡಬೇಕಾಗಿರುವ ಕೆಲಸ-ಕಾರ್ಯಗಳ ಬಗ್ಗೆ ಹಲವಾರು ವಿಚಾರಗಳನ್ನು ಪ್ರಸ್ತಾಪಿಸುವುದಕ್ಕೆ ನಿನ್ನೆಯಿಂದ ಚರ್ಚೆಯನ್ನು ಮುಂದುವರೆಸುತ್ತಿದ್ದೇವೆ. ಸದನದಲ್ಲಿರುವಂಥ ಎಲ್ಲಾ ಮಂತ್ರಿಗಳೂ ಮತ್ತು ಆಡಳಿತ ಪಕ್ಷದವರೆಲ್ಲರೂ ಗಮನಹರಿಸಬೇಕಾಗಿರುವಂಥ ಪ್ರಮುಖ ಅಂಶಗಳನ್ನು ಪ್ರಸ್ತಾಪಿಸುವುದಕ್ಕೆ ಇಚ್ಛಿಸುತ್ತಿದ್ದೇನೆ. ಇಡೀ ರಾಜ್ಯ ಬರಗಾಲಪೀಡಿತವಾಗಿದ್ದು ರಾಜ್ಯವನ್ನು ಬರಗಾಲಪೀಡಿತ ರಾಜ್ಯವೆಂದು ಘೋಷಿಸಬೇಕು ಮತ್ತು ಇದಕ್ಕೆ ಅಗತ್ಯ ಪರಿಹಾರ ಕಾರ್ಯಕ್ಕಾಗಿ ತುರ್ತಾಗಿ ಕೇಂದ್ರಕ್ಕೆ ಹೋಗಬೇಕೆಂದು ಒಂದೆಡೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಮಂತ್ರಿಗಳು ಹೇಳುತ್ತಿದ್ದರೆ, ಮತ್ತೊಂದೆಡೆ ವಿಪರ್ಯಾಸದ ಸಂಗತಿಯೆಂದರೆ, ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿರುವ ಇತರ ಮಂತ್ರಿಗಳು ಈ ಕುರಿತು ವಿವಿಧ ರೀತಿಯ ಹೇಳಿಕೆಗಳನ್ನು ರಾಜ್ಯದ ಬೇರೆ ಬೇರೆ ಮೂಲೆಗಳಿಂದ ಕೊಡುತ್ತಿರುವುದನ್ನು ಕಂಡು ನನಗಂತೂ ಬಹಳ ಆಶ್ಚರ್ಯವಾಗುತ್ತಿದೆ. ಬಿಜಾಪುರ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು 'ಉತ್ತರ ಕರ್ನಾಟಕದ ಭಾಗದಲ್ಲಿ ಇನ್ನೂ ಬರಗಾಲ ಬಂದಿಲ್ಲ, ರಾಜ್ಯಕ್ಕೆ ಇನ್ನೂ ಬರಗಾಲ ಬಂದಿಲ್ಲ, ಆದುದರಿಂದ, ರಾಜ್ಯವನ್ನು ಬರಗಾಲಪೀಡಿತ ರಾಜ್ಯವೆಂದು ಘೋಷಿಸುವುದಕ್ಕೆ ಆಗುತ್ತಿಲ್ಲ' ವೆಂದು ಹೇಳಿಕೆ ನೀಡುತ್ತಿರುವುದನ್ನು ನೋಡುತ್ತಿದ್ದೇವೆ. ಉಸ್ತುವಾರಿ ಮಂತ್ರಿಗಳ ಈ ಮಾತು ಕೇಳಿ ಕಂದಾಯ ಮಂತ್ರಿಗಳಿಗೂ ಆಶ್ಚರ್ಯವಾಗಿರಬಹುದು. ಸಣ್ಣ ಕೈಗಾರಿಕಾ ಸಚಿವರಾದ ಹಾಗೂ ಬಿಜಾಪುರ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಎಸ್.ಆರ್.ಕಾಶಪ್ಪನವರ್ ಅವರು ತಮ್ಮ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಇವೊತ್ತು ಆಲೋಚಿಸಬೇಕಾಗಿದೆಯಲ್ಲದೆ, ಇದೇ ದೃಷ್ಟಿಕೋನದಲ್ಲಿ ರಾಜ್ಯದಲ್ಲಿನ ಬರ ಪರಿಹಾರ ಕಾರ್ಯವನ್ನು ಕೈಗೊಳ್ಳುತ್ತಾರೆಂದರೆ ಸರ್ಕಾರದ ಆಡಳಿತ ವ್ಯವಸ್ಥೆ ಹೇಗಿದೆ ಎಂಬುದನ್ನೂ ಆಲೋಚಿಸಬೇಕಾಗಿದೆ. ಅವರು ಪತ್ರಿಕೆಗಳಿಗೆ ನೀಡಿರುವ ಹೇಳಿಕೆ ಹೀಗಿದೆ: ''ಬಿಜಾಪುರ ಜಿಲ್ಲೆಯೂ ಸೇರಿದಂತೆ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳನ್ನು ಬರಗಾಲಪೀಡಿತವೆಂದು ಈಗಲೇ ಘೋಷಿಸುವುದು ಸಾಧ್ಯವಾಗುವುದಿಲ್ಲವೆಂದು ಸಣ್ಣ ಕೈಗಾರಿಕೆಗಳ ಸಚಿವರಾದ ಎಸ್.ಆರ್.ಕಾಶಪ್ಪನವರ್ ಹೇಳಿದರು. ನಗರದಲ್ಲಿ

ಸೋಮವಾರ ಸುದ್ದಿಗಾರರೊಡನೆ ಮಾತನಾಡಿದ ಅವರು ಈ ಭಾಗ ಹೆಚ್ಚಾಗಿ ಹಿಂಗಾರು ಮಳೆ ಮೇಲೆ ಅವಲಂಬಿತವಾಗಿರುವುದರಿಂದ ಮುಂಗಾರಿನ ವೈಫಲ್ಯಕ್ಕಾಗಿ ಬರಗಾಲವೆಂದು ಘೋಷಣೆ ಮಾಡಲಿಕ್ಕಾಗದು ಎಂದು ಹೇಳಿದ್ದಾರೆ''. ಇದನ್ನು ಓದಿ ನನಗೆ ಆಶ್ಚರ್ಯವಾಗುತ್ತಿದೆ.

ಶ್ರೀ ಅಪ್ಪಾಜಿ ಎಸ್.ನಾಡಗೌಡ: ಸನ್ಮಾನ್ಯ ಅಧ್ಯಕ್ಷರೇ,........

SRI D.V.SADANANDA GOWDA: I am not going to yield to anybody. Let him speak after I conclude. ಅಧ್ಯಕ್ಷರೆ, ತಾವು ಇದಕ್ಕೆ ಅವಕಾಶ ಕೊಡಬಾರದು.

ಶ್ರೀ ಅಪ್ಪಾಜಿ ಎಸ್.ನಾಡಗೌಡ: ಪತ್ರಿಕೆಯಲ್ಲಿ ಬಂದಿರುವ ಹೇಳಿಕೆಯನ್ನು ಸದನದಲ್ಲಿ ಪ್ರಸ್ತಾಪಿಸಿದರೆ ಹೇಗೆ?

ಶ್ರೀ ಡಿ.ವಿ.ಸದಾನಂದಗೌಡ: ನಾನು ಪ್ರಸ್ತಾಪಿಸುತ್ತಿದ್ದರೆ ತಮಗೇಕೆ ಅದರ ಬಗ್ಗೆ ಹೊಟ್ಟೆಕಿಚ್ಚು? ತಾವು ಅನಂತರ ಹೇಳಿ ಮಾನ್ಯ ಕಾಶಪ್ಪನವರು ಹೇಳಿರುವ ವಿಚಾರಗಳ ಬಗ್ಗೆ ನೀವು ಆಲೋಚಿಸಬೇಕು

ಅಧ್ಯಕ್ಷರು: ತಾವು ಮಂತ್ರಿಗಳ ಮೇಲೆ ಆರೋಪ ಮಾಡಬೇಕಿದ್ದಲ್ಲಿ ಆ ಕುರಿತು ಮೊದಲೇ ಬರೆದು ಕಳುಹಿಸಬೇಕು.

ಶ್ರೀ ಡಿ.ವಿ.ಸದಾನಂದಗೌಡ: ಇದು ಆರೋಪವಲ್ಲ. ಪತ್ರಿಕೆಗಳಲ್ಲಿ ಮಂತ್ರಿಗಳ ಹೇಳಿಕೆ ವರದಿಯಾಗಿರುವುದನ್ನು ಸದನದಲ್ಲಿ ಓದಿ ಹೇಳುತ್ತಿದ್ದೇನಷ್ಟೆ. ನಾನು ಅವರ ಮೇಲೆ ಆರೋಪ ಮಾಡುತ್ತಿಲ್ಲ. ಅವರ ಹೇಳಿಕೆಗಳನ್ನು ಪತ್ರಿಕಾ ವರದಿಯ ಆಧಾರದ ಮೇಲೆ ಸದನದಲ್ಲಿ ಪ್ರಸ್ತಾಪಿಸುತ್ತಿದ್ದೇನೆ. I am not going to yield to anybody. ಈ ರೀತಿ ಪರಿಸ್ಥಿತಿ ಆಡಳಿತ ವ್ಯವಸ್ಥೆಯಲ್ಲಿದ್ದರೆ ಅವರು ಹೇಗೆ ಬರಗಾಲದ ಸಮಸ್ಯೆನ್ನು ನಿಭಾಯಿಸುತ್ತಾರೆ ಎಂಬುದೇ ನನ್ನ ಮನದ ಚಿಂತನೆ. ಒಂದು ಟೀಮ್‌ನಲ್ಲಿರುವವರೆಲ್ಲರೂ 'ಏಕ ಮನಸ್ಸು, ವಿಚಾರದ ಕಡೆಗೆ ಮುಂದು ಹೋಗುವವರಾಗಿರಬೇಕು. ಬರಗಾಲದ ಬಗ್ಗೆ ಆಡಳಿತ ಯಂತ್ರ ಈ ರೀತಿ ವ್ಯವಸ್ಥೆ ಮಾಡುತ್ತಿದೆಯೆಂದರೆ ನಾನು ಹೆಚ್ಚು ಏನನ್ನು ಹೇಳುವ ಅವಶ್ಯಕತೆ ಇಲ್ಲ, ಇದರ ಬಗ್ಗೆ ಜನರು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಜಿಲ್ಲಾ ಪಂಚಾಯಿತಿ ಚುನಾವಣೆಯಾಯಿತು, ತಾಲ್ಲೂಕು ಪಂಚಾಯಿತಿ ಚುನಾವಣೆಯಾಯಿತು, ನಗರ ಪಾಲಿಕೆಗಳ ಚುನಾವಣೆಯಾಯಿತು, ಎಲ್ಲವನ್ನೂ ಜನರೇ ಮಾಡಿದ್ದು.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಬೈರೇಗೌಡರು ಇಂಥ ಕೊಳಕು ಜಾಗದಲ್ಲಿ ದೇವರು ಇರುತ್ತಾರೆಯೇ ಎಂಬ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದರು. ಅದಕ್ಕೆ ಅವರಿಗೆ ಉತ್ತರ ಸಿಗಲಿಲ್ಲ. ಬಹುಶಃ ಇದಕ್ಕೂ ಉತ್ತರಕೊಡಲು ಸ್ವಲ್ಪ ದಿನವಾಗುತ್ತದೆ. ಹೊಸ ಷರಟು ಹಾಕಿದ ತಕ್ಷಣ ಚೆನ್ನಾಗಿರುತ್ತದೆ. ಕೊಳೆಯಾದ ಮೇಲೆ ಅದನ್ನು ತೆಗೆದು ಬೇರೆ ಹಾಕಬೇಕಾಗುತ್ತದೆ. ಆಡಳಿತ ವ್ಯವಸ್ಥೆಯಲ್ಲಿರುವಂಥ ಈ ರೀತಿ ಭಿನ್ನಾಭಿಪ್ರಾಯ, ದ್ವಿಮುಖ ಧೋರಣೆಗಳು ರಾಜ್ಯದಲ್ಲಿರುವ ಯಾವುದೇ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲಾರದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಿನ್ನೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಮಾತನಾಡುತ್ತಾ ಮೆಕ್ಕೆ ಜೋಳ ಖರೀದಿಯಲ್ಲಿ ನಾವು ಎಲ್ಲಾ ಹಣವನ್ನು ಪಾವತಿ ಮಾಡಿದ್ದೇವೆ, ಯಾವುದೇ ಬಾಕಿ ಇಲ್ಲವೆಂದು ಹೇಳಿದರು. ಇವತ್ತು ಬೆಳಿಗ್ಗೆ ಹೊನ್ನಾಳಿ ತಾಲ್ಲೂಕಿನ ರೈತರು ಬಂದು ಅಲ್ಲಿ ಸುಮಾರು 8 ಕೋಟಿ 86 ಲಕ್ಷ ರೂ.ಗಳಷ್ಟು ಮೆಕ್ಕೆ ಜೋಳವನ್ನು ಖರೀದಿ ಮಾಡಿದ್ದು ಅದರಲ್ಲಿ 4 ಕೋಟಿ ರೂ. ಮಾತ್ರ ಹಣ ಬಿಡುಗಡೆಯಾಗಿದೆ ಇನ್ನೂ 4.46 ಕೋಟಿ ರೂಪಾಯಿ ಖರೀದಿ ಹಣವನ್ನು ಕೊಟ್ಟಿಲ್ಲವೆಂದು ದೂರಿರುತ್ತಾರೆ. ತಾವು ಇದರ ಬಗ್ಗೆ ದಯಮಾಡಿ ಪರಿಶೀಲನೆ ಮಾಡಿನೋಡಿ. ತಮ್ಮ ಹೇಳಿಕೆಗಳು ಮತ್ತು ಕಾರ್ಯಾಚರಣೆಗಳು ವ್ಯತಿರಿಕ್ತವಾಗಿರುವ ಹಿನ್ನೆಲೆಯಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಏನು ನಿಜವಾಗಿ ಪಾವತಿ ಮಾಡಬೇಕಾಗಿರುವುದನ್ನು ಮಾಡದೆ ಅದನ್ನು ಮಾಡಿದ್ದೇವೆಂದು ಹೇಳುವ ವ್ಯವಸ್ಥೆಯೇನಿದೆ ಅದೇ ವ್ಯವಸ್ಥೆ ಬರಪರಿಹಾರದಲ್ಲೂ ಆಗುವ ಸಾಧ್ಯತೆಗಳು ಇದೆ ಎಂಬ ದೃಷ್ಟಿಯಿಂದ ನಾನು ಇದನ್ನು ಉಲ್ಲೇಖ ಮಾಡಬೇಕಾಗಿದೆ. ಇವತ್ತೂ ಬರಪರಿಹಾರಕ್ಕೆ ಹಲವಾರು ವಿಚಾರಗಳನ್ನು ನಾವು ಅನುಷ್ಠಾನಗೊಳಿಸಿದರೆ ಪ್ರಾಯಶಃ ಬರಪರಿಹಾರದ ಕಾರ್ಯವನ್ನು ಯಶಸ್ವಿಯಾಗಿ ನಡೆಸಬಹುದು. ರಾಷ್ಟ್ರೀಯ ಕೃಷಿ ವಿಮೆ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಿದರೆ ಇದೆಲ್ಲದಕ್ಕೂ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಅಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರವೇ ಎಲ್ಲಾ ಕೆಲಸವನ್ನು ಮಾಡಬೇಕು ಎಂಬ ಒತ್ತಡವಿರುವುದಿಲ್ಲ. ಆ ನಿಟ್ಟಿನಲ್ಲಿ ಕೃಷಿ ವಿಮೆಯ ಯೋಜನೆಯನ್ನು ಮಾಡಿದ್ದೇ ಆದರೆ ರೈತರುಗಳು ವಿಮೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇದರ ಬಗ್ಗೆ ಮಾನ್ಯ ಕೃಷಿ ಸಚಿವರು ಮಾರ್ಚ್‌ನಲ್ಲಿ ನಡೆದ ಅಧಿವೇಶನದ ಸಮಯದಲ್ಲಿ ಮಾತನಾಡುತ್ತಾ 2000-2001ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಮೆಗೆ 30 ಕೋಟಿ ಹಣವನ್ನು ಒದಗಿಸಲಾಗಿದೆಯೆಂದು ಹೇಳಿದ್ದರು. ಆದರೆ ಅನಂತರ ಇದರಲ್ಲಿ ಎಷ್ಟು ಹಣವನ್ನು ಮಾಡಲಾಗಿದೆಯೆಂದು ಕೇಳಿದ್ದಕ್ಕೆ, 29.3.2001ರಂದು ನೀಡಿದ ಉತ್ತರದಲ್ಲಿ ಕೇವಲ 12.94 ಕೋಟಿ ರೂಪಾಯಿಯನ್ನು ಮಾತ್ರ ಖರ್ಚು ಮಾಡಲಾಗಿದೆಯೆಂದು ಹೇಳಿದ್ದರು. ಇದಕ್ಕೆ ನಾನು ಏಕೆ ಒತ್ತು ಕೊಡುತ್ತೇನೆಂದರೆ, ಈ ವರ್ಷ 121 ತಾಲ್ಲೂಕಿನಲ್ಲಿ ಬರದ ಪರಿಸ್ಥಿತಿ ಇದೆ, ಈಗಲಾದರೂ ರಾಜ್ಯದ ಎಲ್ಲಾ ಸಹಕಾರಿ

ಸಂಘಗಳು, ಪಿ.ಎಲ್.ಡಿ.ಬ್ಯಾಂಕುಗಳು, ಡಿ.ಸಿ.ಸಿ. ಬ್ಯಾಂಕುಗಳಲ್ಲಿ ರೈತರು ಮಾಡಿದಂಥ ಸಾಲವನ್ನು ಕವರ್ ಮಾಡುವ ರೀತಿಯಲ್ಲಿ ರೈತರುಗಳ ರಿಸ್ಕ್‌ಗಳನ್ನು ವಿಮಾ ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡರೆ ಪ್ರಾಯಶಃ ಮುಂದಿನ ದಿವಸಗಳಲ್ಲಾದರೂ ಎಲ್ಲದಕ್ಕೂ ರಾಜ್ಯ ಸರ್ಕಾರವನ್ನು ಅವಲಂಬನೆ ಮಾಡುವ ಪ್ರಮೇಯ ಇರುವುದಿಲ್ಲ. ಆ ಎಲ್ಲಾ ರಿಸ್ಕ್ ಕವರೇಜನ್ನು ರಾಜ್ಯ ಸರ್ಕಾರ ಪಾವತಿ ಮಾಡಿದರೆ ಈ ರಿಸ್ಕ್‌ನ ಎಲ್ಲಾ ಮೊಬಲಗನ್ನು ರೈತರಿಗೆ ವಿಮಾ ಕಂಪನಿಯಿಂದ ನೇರವಾಗಿ ಬರಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಇದಕ್ಕೆ ಅತಿ ಹೆಚ್ಚಿನ ಒತ್ತು ಕೊಡಬೇಕು ಎಂಬುದು ನನ್ನ ಒತ್ತಾಯವಾಗಿದೆ. ಕಳೆದ ಸಾಲಿನಲ್ಲಿ 30 ಕೋಟಿಯನ್ನು ಇದಕ್ಕಾಗಿ ಇಟ್ಟದ್ದು ಸ್ವಾಗತಾರ್ಹವಾದ ವಿಚಾರ. ಆದರೆ ಆ ಹಣವು ಪೂರ್ಣವಾಗಿ ಖರ್ಚಾಗದೆ ಕೇವಲ 12-13 ಕೋಟಿ ಮಾತ್ರ ಅನುಷ್ಠಾನವಾಯಿತು.

ಶ್ರೀ ಟಿ.ಬಿ.ಜಯಚಂದ್ರ(ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಇದಕ್ಕಾಗಿ 30 ಕೋಟಿ ರೂ. ಅನುದಾನವನ್ನು ಒದಗಿಸುವುದರ ಜೊತೆಗೆ ಮಾನ್ಯ ಮುಖ್ಯ ಮಂತ್ರಿಯವರು 100 ಕೋಟಿ ರೂ.ಗಳನ್ನು ರೈತರ ವಿಮಾ ಯೋಜನೆಯಲ್ಲಿ ತೊಡಗಿಸಬೇಕು ಎಂದು ಹೇಳಿದ್ದು ತಮಗೆ ಗೊತ್ತಿದೆ. ನಾವು ಕೊಟ್ಟಿರುವ 30 ಕೋಟಿ ರೂಗಳಲ್ಲಿ ಖರ್ಚಾಗಿರುವುದು ಸುಮಾರು 12 ಕೋಟಿ ರೂ. ಉಳಿದ ಹಣ ನಮ್ಮಲ್ಲೇ ಲಭ್ಯವಿದೆ. ಅದು ಇನ್ನೂ ವಿಮಾ ಕಂಪನಿಯ ವ್ಯಾಪ್ತಿಯಲ್ಲೇ ಇದೆ. ತಾಲ್ಲೂಕು ಒಂದು ಘಟಕವಾಗಿದ್ದರಿಂದ ನಮಗೆ ವಿಮಾ ಕಂಪನಿಯಿಂದ ಕ್ಲೇಮ್ಸ್ ಜಾಸ್ತಿ ಬರುತ್ತಿರಲಿಲ್ಲ. ಆದ್ದರಿಂದ ನಾವು ಈ ಸಲ ಕೆಲವು ಬೆಳೆಗಳಿಗೆ ಹೋಬಳಿ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದೇವೆ. ಆದ್ದರಿಂದ ರೈತರಿಗೆ ಈ ಸಲ ಹೆಚ್ಚಿನ ಲಾಭವಾಗುವ ಸಾಧ್ಯತೆ ಇದೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಾನು ಖಂಡಿತವಾಗಿ ಸ್ವಾಗತಿಸುತ್ತೇನೆ. ಆದರೆ ಆ ಕೆಲಸ ಇನ್ನೂ ಚುರುಕುಗೊಳ್ಳಬೇಕಾಗುತ್ತದೆ. ನೂರು ಕೋಟಿ ರೂ ಕೊಡುವ ವಿಚಾರ ಸ್ವಾಗತಾರ್ಹವಾದುದು. ಆದರೆ ಈಗಾಗಲೇ ಅದನ್ನು ಮಾಡಿದ್ದರೆ ಬಹುಶಃ ಈ ಸದನದಲ್ಲಿ ಬರಗಾಲದ ಬಗ್ಗೆ ಇಷ್ಟೊಂದು ಗಂಭೀರವಾಗಿ ಚರ್ಚೆ ಮಾಡುವ ಅವಶ್ಯಕತೆ ಇರುತ್ತಿರಲಿಲ್ಲ. ವಿಮಾ ಕಂಪನಿಗಳೇ ಬರಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡುತ್ತಿದ್ದವು. ಹೋಬಳಿ ಮಟ್ಟಕ್ಕೆ ಇದನ್ನು ವಿಸ್ತಾರ ಮಾಡುವುದಾಗಿ ಹೇಳಿದ್ದೀರಿ, ಅಲ್ಲೂ ಸಾಕಾಗುವುದಿಲ್ಲ. ಇದನ್ನು ಗ್ರಾಮ ಮಟ್ಟಕ್ಕೆ ವಿಸ್ತರಣೆ ಮಾಡಿದರೆ ಬರಗಾಲದ ಎಲ್ಲಾ ಸಂದರ್ಭಗಳಲ್ಲೂ ಯಶಸ್ವಿಯಾಗಿ ಎದುರಿಸಲು ಸಾಧ್ಯವಾಗುತ್ತದೆ. ಯಾವುದೇ ಗ್ರಾಮದಲ್ಲಿ ಶೇಕಡ ಐವತ್ತಕ್ಕಿಂತ ಹೆಚ್ಚು ಬೆಳೆ ನಾಶವಾದರೆ ಬೆಳೆ ವಿಮೆ ಜಾರಿಗೆ ಬಂದರೆ ಪ್ರಾಯಶಃ ಎಲ್ಲಾ ನಷ್ಟವನ್ನು ತುಂಬಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಈ ವಿಮೆ ಯೋಜನೆಯನ್ನು ಅತ್ಯಂತ

ಜರೂರಾಗಿ ಅನುಷ್ಠಾನಕ್ಕೆ ತರಬೇಕು. ಆವರ್ತ ನಿಧಿಯನ್ನು 75 ರಿಂದ 400 ಕೋಟಿ ರೂ.ಗೆ ಏರಿಸಿದ್ದೇವೆಂದು ಸರ್ಕಾರದ ಘೋಷಣೆ ಬಹಳವಾಗಿತ್ತು. ಆವರ್ತ ನಿಧಿಯನ್ನು 400 ಕೋಟಿ ರೂ.ಗೆ ಏರಿಸಿದ್ದೀರಾ? ಈಗಿನ ಅದರ ಪರಿಸ್ಥಿತಿಯೇನು? ಈ ಸಲದ ಬರಗಾಲಕ್ಕೆ ಆವರ್ತ ನಿಧಿಯ ಉಪಯೋಗವಾಗುತ್ತದೆಯೇ? ಇವುಗಳ ಬಗ್ಗೆ ತಾವು ಹೇಳಬೇಕಾಗುತ್ತದೆ. ಏಕೆಂದರೆ ನಾವು ಮಾತು ಮಾತಿಗೆ ಕೇಂದ್ರದ ಕಡೆಗೆ ಬೊಟ್ಟುಮಾಡಿ ತೋರಿಸುತ್ತೇವೆ. ಕೇಂದ್ರದಿಂದ ತಕ್ಷಣಕ್ಕೆ ಯಾವುದೇ ಹಣವು ಬಿಡುಗಡೆಯಾಗುವುದಿಲ್ಲವೆಂದು ಇಟ್ಟುಕೊಳ್ಳಿ, ಆಗ ರಾಜ್ಯ ಸರ್ಕಾರದವರು ಕೈಕಟ್ಟಿ ಕುಳಿತುಕೊಳ್ಳುತ್ತೀರ? ಇದರಲ್ಲಿ ತಮ್ಮ ಜವಾಬ್ದಾರಿ ಏನು ಎಂಬುದನ್ನು ಹೇಳಿ. ತಮ್ಮ ಜವಾಬ್ದಾರಿಯನ್ನು ಕೇಂದ್ರದ ಮೇಲೆ ಹೇರಿ ಕೇಂದ್ರದ ಮೇಲೆ ಗೂಬೆ ಕೂರಿಸುವಂಥ ಕೆಲಸ ಸರಿಯಲ್ಲ. ಆವರ್ತ ನಿಧಿಯನ್ನು 400 ಕೋಟಿ ರೂ. ಮಾಡುವುದಾಗಿ ಹೇಳಿದ್ದಿರಿ, ಅದನ್ನು ಮಾಡಿದ್ದೀರ? ಅದರಲ್ಲಿ ಇಂತಿಷ್ಟು ಹಣವನ್ನೇನಾದರೂ ಬಿಡುಗಡೆ ಮಾಡಿದ್ದೀರ? ಈಗಾಗಲೆ 12 ಕೋಟಿ ರೂ. ಬಿಡುಗಡೆ ಮಾಡಿರುವುದಾಗಿ ಹೇಳಿದ್ದೀರಿ, ಇನ್ನೂ ಸಾಕಷ್ಟು ಮೊತ್ತವನ್ನು ಬಿಡುಗಡೆ ಮಾಡಬೇಕು, ಆದರೆ ತಾವು ಬಿಡುಗಡೆ ಮಾಡಲಿಲ್ಲ. ತಾವು ಬಿಡುಗಡೆ ಮಾಡಿದ್ದನ್ನು ಕೇಂದ್ರ ಸರ್ಕಾರ ರೀಇಂಬರ್ಸ್ ಮಾಡುತ್ತದೆ. ಯೋಜನಾ ಆಯೋಗದ ಸಭೆ ಇರಬಹುದು, ಹಣಕಾಸು ಆಯೋಗದ ಸಭೆ ಇರಬಹುದು, ಈ ಸಭೆಯ ಸಂದರ್ಭದಲ್ಲಿ ರಾಜ್ಯದ ಸಚಿವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಉಪಸ್ಥಿತರಿರುತ್ತಾರೆ. ಇದರಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಮೊತ್ತದ ಹಣ **calamity fund** ರೂಪದಲ್ಲಿ ಬರಬೇಕು ಎಂಬುದಕ್ಕೆ ವ್ಯವಸ್ಥೆ ಇರುತ್ತದೆ. ಸಂವಿಧಾನಿಕವಾಗಿರುವ ಆ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಮಾಡಲೇ ಬೇಕಾಗುತ್ತದೆ, ಅವರು ಹಣವನ್ನು ಕೊಡಲು ಆಗುವುದಿಲ್ಲವೆಂದು ಹೇಳಲಾಗುವುದಿಲ್ಲ. ವಿಳಂಬವಾಗುವುದು ಯಾರಿಂದ ಎಂಬುದು ಇಲ್ಲಿರುವ ಜಿಜ್ಞಾಸೆಯುಳ್ಳ ವಿಚಾರ.

ಶ್ರೀ ಜೆ.ಟಿ.ಪಾಟೀಲ್: ಮಾನ್ಯ ಸದಾನಂದಗೌಡರು ಮಾತನಾಡುವ ರೀತಿಯನ್ನು ನೋಡಿದರೆ ಕೇಂದ್ರ ಸರ್ಕಾರದ ರಕ್ಷಣೆಗೆ ಹೊರಟಂತೆ ಕಾಣುತ್ತದೆ. ಇದುವರೆಗಿನ ಇತಿಹಾಸದಲ್ಲಿ ರಾಜ್ಯ ಸರ್ಕಾರಗಳು ಬರಗಾಲದ ಪರಿಸ್ಥಿತಿಯಲ್ಲಿ, ಇನ್ನಿತರ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಪರಿಹಾರ ಕೋರಿ ಎಷ್ಟೇ ಮನವಿಗಳನ್ನು ಸಲ್ಲಿಸಿದರೂ ಇನ್ನೂವರೆಗೆ ಹಣಕಾಸು ಬಿಡುಗಡೆಯಾಗಿಲ್ಲ. ತಾವು ಕೇಂದ್ರ ಸರ್ಕಾರಕ್ಕೆ ರಕ್ಷಣೆಗೆ ಹೊರಟಿದ್ದೀರೇನೋ ಎಂದು ಕೇಳಬಯಸುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ತಾನು ಮಾಡಬೇಕಾದಂಥ ಕೆಲಸದ ಕಡೆಗೆ ರಾಜ್ಯ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ತನ್ನ ಕೈಲಾದ ಕೆಲಸವನ್ನು ಮಾಡಬೇಕು. ನಮ್ಮ ರಾಜ್ಯದ ವ್ಯವಸ್ಥೆ ಒಂದು ರೀತಿಯಲ್ಲಿ ಎಲ್ಲವನ್ನು ಕೇಂದ್ರಕ್ಕೆ ಬೊಟ್ಟು ಮಾಡಿ

ತೋರಿಸುವಂತಾಗಿದೆ. ಇದು ಆಗಬಾರದು. ತಾವು ರೈತರಿಗೆ ಪರೋಕ್ಷವಾಗಿ ಒಂದು ಹೆಚ್.ಪಿ.ಗೆ 300ರೂಪಾಯಿ ರಿಂದ 600ಕ್ಕೆ, 600 ರಿಂದ 900ಕ್ಕೆ ಹೆಚ್ಚು ಮಾಡುವಂಥ ಕೆಲಸ ಮಾಡುತ್ತಿದ್ದೀರಿ. ಮೇ ತಿಂಗಳಿನಿಂದ ರೈತರಿಗೆ 12 ಗಂಟೆಗಳ ಕಾಲ ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡಲು ನಾವು ಕಟಿಬದ್ಧರಾಗಿದ್ದೇವೆ ಎಂದು ನೀವು ಹೇಳಿದ್ದೀರಿ ಆ ರೀತಿ ನೀವು ವಿದ್ಯುತ್ ಪೂರೈಕೆ ಮಾಡಿದ್ದೀರಾ? ಅಂದು ನಮ್ಮದು ಇದು ಪವಿತ್ರ ಪ್ರತಿಜ್ಞೆ ಎಂಬ ಮಾತನ್ನು ಸರ್ಕಾರ ಹೇಳಿತ್ತು. ಯಾವುದೋ ಒಂದು ಮೀಟಿಂಗ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ವಿದ್ಯುತ್ ಪೂರೈಕೆ ಮಾಡದಿದ್ದರೆ ಅಧಿಕಾರಿಗಳ ತಲೆಗಳು ಉರುಳುತ್ತವೆ ಎಂದು ಹೇಳಿದ್ದನ್ನು ಪತ್ರಿಕೆಯೊಂದರಲ್ಲಿ ನಾನು ಓದಿದ್ದೇನೆ. ಯಾವುದಾದರೂ ಅಧಿಕಾರಿಗಳ ತಲೆಗಳು ಉರುಳಿದವೇ? ಇಲ್ಲ. ರೈತರು ನೇಣು ಹಾಕಿಕೊಂಡು ಅಥವಾ ವಿಷ ಕುಡಿದು ತಮ್ಮ ತಲೆಗಳು ಉರುಳುವಂತೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಿಮ್ಮ ಪವಿತ್ರ ಪ್ರತಿಜ್ಞೆ ಎಲ್ಲಿ ಹೋಯಿತು? ರಾಜ್ಯದಲ್ಲಿನ ಎಷ್ಟು ಜಿಲ್ಲೆಗಳಲ್ಲಿ ನಿರಂತರವಾಗಿ 12 ಗಂಟೆಗಳ ಕಾಲ ವಿದ್ಯುತ್ ಪೂರೈಕೆಯನ್ನು ನೀವು ಮಾಡಿದ್ದೀರಿ? ಕೇವಲ ಪ್ರತಿಜ್ಞೆಗಳನ್ನು ಮಾಡಿ ಅದನ್ನು ಅನುಷ್ಠಾನಗೊಳಿಸದೇ ಕೇವಲ ಪ್ರಚಾರ ಪಡೆದುಕೊಳ್ಳುವ ತಂತ್ರದಿಂದ ಯಾವುದೇ ಬರ ಪರಿಹಾರವಾಗಲಿಕ್ಕೆ ಸಾಧ್ಯವಿಲ್ಲ. ಈ ರೀತಿಯ ವ್ಯವಸ್ಥೆ ಒಳ್ಳೆಯದಲ್ಲ. ಎಲ್ಲಾ ರೀತಿಯಲ್ಲೂ ಕೂಡ ತೊಂದರೆ ನೀಡುವಂತಹ ಕೆಲಸಗಳನ್ನೇ ನೀವು ಮಾಡಿದ್ದೀರಿ. ಎಲ್ಲೆಲ್ಲಿ ಎಷ್ಟೆಷ್ಟು ಅವರೇಜ್ ಕರೆಂಟ್ ಖರ್ಚಾಗುತ್ತದೆ ಎನ್ನುವುದನ್ನು ಫೈಲರ್ ಮೀಟರ್ ಅಳವಡಿಸಿಕೊಳ್ಳುವುದರ ಮೂಲಕ ನೀವು ಪತ್ತೆ ಹಚ್ಚಿದ್ದಿರಿ. ಆವರೇಜ್ 8 ಸಾವಿರ ಯೂನಿಟ್‌ಗಳಷ್ಟು ವಿದ್ಯುತ್ ಖರ್ಚಾಗುವುದು ಸರ್ಕಾರದ ಗಮನಕ್ಕೆ ಇದರಿಂದ ಬಂತು. ಬೆಳಗಾವಿ ಮತ್ತು ಕೋಲಾರ ಭಾಗಗಳಲ್ಲಿ ಸುಮಾರು 19 ಸಾವಿರ ಯೂನಿಟ್‌ಗಳಷ್ಟು ವಿದ್ಯುತ್ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಎರಡೂವರೆ ಸಾವಿರ ಯೂನಿಟ್‌ಗಳು ಖರ್ಚಾಗುತ್ತದೆ ಎಂಬುದು ಬೆಳಕಿಗೆ ಬಂತು. ಇದಾದ ತಕ್ಷಣವೇ ಸರ್ಕಾರ ಆ ಭಾಗದಲ್ಲಿ ಬೇ ಬೆಳೆಯುತ್ತಿರುವಂತಹ ರೈತರ ಮೇಲೆ ಪ್ರಹಾರ ಮಾಡುವಂತಹ ಪ್ರಯತ್ನಗಳನ್ನು ಮಾಡಿತು. ತೆಂಗು ಮತ್ತು ಅಡಿಕೆ ಬೆಳೆಗಳನ್ನು ಕಮರ್ಷಿಯಲ್ ಕ್ರಾಪ್ ಎಂದು ಮಾಡಿದಿರಿ. ಹಾರ್ಸ್ ಪವರ್ ಜಾಸ್ತಿ ಮಾಡುವಂತಹ ಕೆಲಸಗಳನ್ನು ನೀವು ಮಾಡಿದಿರಿ. 300 ರೂಪಾಯಿ ಇದ್ದುದನ್ನು 600 ರೂಪಾಯಿಗಳು ಎಂದು ನೀವು ಮಾಡಿದಿರಿ. ಏಕಗಂಟಿನಲ್ಲಿ ಕಟ್ಟದಿದ್ದರೆ ಡಿಸ್‌ಕನೆಕ್ಟ್ ಮಾಡುತ್ತೇವೆಂದು ಹೇಳಿದಿರಿ. ಅದನ್ನು 900 ರೂಪಾಯಿಗಳಿಗೆ ಏರಿಸುವ ಚಿಂತನೆ ಕ್ಯಾಬಿನೆಟ್‌ನಲ್ಲಿ ನಡೆದಿದೆ ಎಂದು ತಿಳಿದು ಬಂದಿದೆ. ರೈತರ ವಿಚಾರಗಳನ್ನು ನೀವು ಬಹಳಷ್ಟು ಲಘುವಾಗಿ ಪರಿಗಣಿಸಿದ್ದೀರಿ. ಇವತ್ತಿನ ಬರಗಾಲದ ಪರಿಸ್ಥಿತಿಯಲ್ಲೂ ಸಹಾ ರೈತ ಇದ್ದ ಬೋರ್‌ವೆಲ್ ನೀರನ್ನು ಉಪಯೋಗ ಮಾಡಿಕೊಳ್ಳಲು ಅವನಿಗೆ ಸರ್ಕಾರ ಕರೆಂಟ್ ಕೊಡುತ್ತಿಲ್ಲ. ಇದ್ದ ಕರೆಂಟನ್ನೇ ಉಪಯೋಗ ಮಾಡಿಕೊಳ್ಳೋಣ ಎಂದರೆ ಅದನ್ನೂ

ಕೂಡ ನೀವು ಡಿಸ್‌ಕನೆಕ್ಟ್ ಮಾಡುತ್ತೀರಿ. ಈ ರೀತಿಯಲ್ಲಿ ರೈತರ ಸಮಸ್ಯೆಗೆ ಸ್ಪಂದಿಸದಂತಹ ಸರ್ಕಾರ ಬಹುಶಃ ಬರ ಪರಿಹಾರ ಹೇಗೆ ಮಾಡುತ್ತದೆ ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ. ನಾನು ಮೊನ್ನೆ ಕೆ.ಪಿ.ಟಿ.ಸಿ.ಎಲ್.ನ ಛೇರ್ಮನ್ ಬಳಿಗಾರ್ ಅವರಲ್ಲಿಗೆ ಹೋಗಿದ್ದೆ. ಅವರು ಟ್ಯಾರೀಫ್ ರಿವಿಷನ್ ಬಗ್ಗೆ ಕೈ ಚೆಲ್ಲಿ ಕುಳಿತರು. ಈ ಸರ್ಕಾರ ರೈತರ ಮೇಲೆ ನಿರಂತರವಾಗಿ ಗದಾಪ್ರಹಾರ ಮಾಡುತ್ತಿದೆ. ಬರ ಬಂದ ಮೇಲಾದರೂ ಕೂಡ ಕನಿಷ್ಟ ಪಕ್ಷ 600 ರೂಪಾಯಿಗಳ ಕೆಇಬಿ ಬಿಲ್ ಅನ್ನು ಕಟ್ಟುವುದನ್ನು ಸ್ಥಗಿತ ಮಾಡಿ. ಹಿಂದಿನ ಧಾರಣೆಯಾದ 300 ರೂಪಾಯಿಗಳ ಪ್ರಕಾರವಾದರು ಪೇಮೆಂಟ್ ಮಾಡುವಂತಹ ವ್ಯವಸ್ಥೆಯನ್ನು ಮಾಡಿ. ನಾನು ಕೆಪಿಟಿಸಿಎಲ್‌ಗೆ ಹೋದಾಗ ಅವರು ಟ್ಯಾರೀಫ್ ರಿವಿಷನ್ ಪವರ್ಸ್ ಯಾರಿಗೂ ಇಲ್ಲವೆಂದು ಹೇಳಿದ್ದರು. ಟ್ಯಾರೀಫ್ ರಿವಿಷನ್ ಪವರ್ಸ್ ಕೆಇಆರ್‌ಸಿ, ಕೆಪಿಟಿಸಿಎಲ್ ಅಥವಾ ಸರ್ಕಾರಕ್ಕೂ ಕೂಡ ಇಲ್ಲವೆಂದು ಅವರು ಹೇಳಿದ್ದರು. ಟ್ಯಾರೀಫ್ ರಿವಿಷನ್ ಏನಾದರೂ ಮಾಡಬೇಕಾದರೆ ಅದಕ್ಕಾಗಿ ಹೈಕೋರ್ಟ್ ಮುಂದೆ ಹೋಗುವುದೇ ಈಗಿರುವ ಏಕೈಕ ಮಾರ್ಗವೆಂದು ಅವರು ಹೇಳಿದ್ದರು. ಈ ರೀತಿಯ ಪರಿಸ್ಥಿತಿ ಯಾರಿಗೂ ಕೂಡ ಬರಬಾರದು. ಈ ರೀತಿಯ ಒಂದು ಪರಿಸ್ಥಿತಿಯನ್ನು ಸೃಷ್ಟಿ ಮಾಡಿಕೊಂಡವರು ನಾವೇ. ಯಾವ ಒಂದು ವ್ಯವಸ್ಥೆ ಸರಿಯಾಗಿ ಇರಬೇಕು ಎಂದು ಜನ ಆಲೋಚನೆ ಮಾಡುತ್ತಿದ್ದರೋ ಆ ಒಂದು ವ್ಯವಸ್ಥೆ ಸರಿಯಾಗದ ರೀತಿಯಲ್ಲಿ ಮಾಡಿಕೊಂಡವರು ನಾವೇ ಅಲ್ಲವೇ? ಟ್ಯಾರಿಫ್ ರಿವೈಸ್ ಮಾಡಲಿಕ್ಕೆ ನಮಗ್ಯಾರಿಗೂ ಪವರ್ಸ್ ಇಲ್ಲ, ರೈತರು ಕೋರ್ಟ್‌ಗೆ ಹೋಗಬೇಕು ಎಂದು ಹೇಳುವಂತಹ ಸರ್ಕಾರದ ಧೋರಣೆ ಎಷ್ಟರಮಟ್ಟಿಗೆ ಸರಿ? ಇದರ ಬಗ್ಗೆ ಚಿಂತನೆ ಮಾಡುವಂತಹ ಅವಶ್ಯಕತೆ ಇಲ್ಲವೇ? ಯಾವುದೇ ರೈತ ಯಾವುದೇ ಸಂದರ್ಭದಲ್ಲಿ ತಾನು ಬಿಲ್ ಪೇಮೆಂಟ್ ಮಾಡುವುದಿಲ್ಲ ಎಂದು ಹೇಳಿದರೆ, ಅವನ ಪಂಪ್‌ಸೆಟ್ಟಿಗೆ ನೀಡಿರುವ ವಿದ್ಯುತ್ ಅನ್ನು ತಾತ್ಕಾಲಿಕವಾಗಿಯಾದರೂ ಡಿಸ್‌ಕನೆಕ್ಟ್ ಮಾಡಬೇಡಿ. ಈಗಾಗಲೇ 600 ರೂಪಾಯಿಗಳಿಗೆ ಏನು ಬಿಲ್ ಕಳುಹಿಸಿದ್ದೀರಿ, ಅದನ್ನು ಬಿಟ್ಟು 300 ರೂಪಾಯಿಗಳ ಪ್ರಕಾರ ಹಣವನ್ನು ವಸೂಲು ಮಾಡುವಂತಹ ಕೆಲಸವನ್ನು ನೀವು ತಕ್ಷಣವೇ ಮಾಡಿ. ಸಾಧ್ಯವಾದರೆ ಪೂರ್ತಿ ಪೇಮೆಂಟ್ ಮಾಡಲು ಮುಂದಿನ ಬೆಳೆ ಬರುವವರೆಗೆ ಅವಕಾಶ ಕೊಡಿ. ಮುಂದಿನ ಬೆಳೆ ಬಂದ ನಂತರವೇ ಪೇಮೆಂಟ್ ಅನ್ನು ಸ್ವೀಕರಿಸಿ. ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲವೇ?

(ಈ ಹಂತದಲ್ಲಿ ಮಾನ್ಯ ಜಿ.ರಾಜೂಗೌಡರವರು ಪೀಠವನ್ನು ಅಲಂಕರಿಸಿದರು)

ವಿದ್ಯುತ್ ಪೂರೈಕೆ ಒಂದು ಮನಾಪಲಿ ಸೇವೆ. ನಾವು ವಿದ್ಯುತ್ ಬೇಕೆಂದರೆ ಕೆಪಿಟಿಸಿಎಲ್‌ಗೇ ಹೋಗಬೇಕು. ಅದನ್ನು ಬಿಟ್ಟು ನಾವು ವಿದ್ಯುತ್ ಖರೀದಿ ಮಾಡಲಿಕ್ಕೆ

ಬೇರೊಂದು ಕಡೆ ಹೋಗಲಿಕ್ಕಾಗುವುದಿಲ್ಲ. ಇಂತಹ ಒಂದು ಮನಾಪಲಿ ಸೇವೆಯಲ್ಲೂ ಕೂಡ ನಿಮ್ಮ ಅಸಹಾಯಕತೆಯನ್ನು ತೋರಿಸಿದರೆ ನಾವು ಎಲ್ಲಿಗೆ ಹೋಗಬೇಕು ಹೇಳಿ? ಸರ್ಕಾರದಿಂದ ಏನೂ ಆಗುವುದಿಲ್ಲ ಎಂದು ಕೈ ಕಟ್ಟಿ ಕುಳಿತುಕೊಳ್ಳುವುದಲ್ಲದೇ? ಎಲ್ಲರೂ ಕೋರ್ಟಿಗೆ ಹೋಗಿ ಎಂದು ಹೇಳುವುದು ಸರಿಯೇ? ಈ ಮನಾಪಲಿ ಸೇವೆಯಲ್ಲೂ ಕೂಡ ನಿಮ್ಮ ವಿಶಿಷ್ಟವಾದಂತಹ ಅಧಿಕಾರ ಚಲಾವಣೆಗೆ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದಕ್ಕೆ ನಿಮಗೆ ಆಗುವುದಿಲ್ಲ ಎನ್ನುವುದಾದರೆ ಹೇಗೆ? ನಾನು ಅದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಕೆಪಿಟಿಸಿಎಲ್ ಶೇಕಡ 23ರಷ್ಟು ವಿದ್ಯುತ್ ಏರಿಸುವ ಪ್ರಸ್ತಾವನೆ ಇಟ್ಟಾಗ ಕೆಇಆರ್‌ಸಿ ಅದನ್ನು ಶೇಕಡ 17ಕ್ಕೆ ಮೊಟಕುಗೊಳಿಸಿತು. ಶೇಕಡ 23 ರಷ್ಟು ವಿದ್ಯುತ್ ಏರಿಸುವ ಅಗತ್ಯವಿಲ್ಲವೆಂದು ಕೆಇಆರ್‌ಸಿ ಹೇಳಿತು. ಆಗ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ಒಂದು ವರ್ಷದವರೆಗೆ ಯಾವುದೇ ಏರಿಕೆಯನ್ನೂ ಸಹ ಮಾಡುವುದಿಲ್ಲ ಎಂದು ಸದನದಲ್ಲಿ ಹೇಳಿದರು. ಅವರು ಆ ರೀತಿ ಹೇಳಿದ ನಂತರ ಅಧಿವೇಶನ ಮುಗಿಸಿಕೊಂಡು ನಾವೆಲ್ಲಾ ನಮ್ಮ ನಮ್ಮ ಊರಿಗೆ ತಲಪುವಷ್ಟರಲ್ಲಿ 300 ರೂಪಾಯಿಗಳಿಂದ 600 ರೂಪಾಯಿಗಳಿಗೆ ಏರಿಸಿದ ದರದಲ್ಲಿ ಬಿಲ್ ಬಂದಿತ್ತು. ಇದೆಂಥ ವಿಪರ್ಯಾಸ? ರೈತರ ಪರವಾಗಿ ನಾವಿದ್ದೇವೆ ಎಂದು ನೀವು ಹೇಳಿಕೊಳ್ಳುತ್ತೀರಿ. ಈ ರೀತಿಯ ಪ್ರಹಾರಗಳನ್ನು ರೈತರ ಮೇಲೆ ಮಾಡುವುದನ್ನು ತಕ್ಷಣ ನಿಲ್ಲಿಸಿ, ಇದರಿಂದ ಖಂಡಿತವಾಗಿ ನಿಮಗೆ ತೊಂದರೆಯಾಗುತ್ತದೆ. 900 ರೂಪಾಯಿಗಳಿಗೆ ಏರಿಸುವಂತಹ ಇರಾದೆಯೇನಾದರೂ ಸರ್ಕಾರಕ್ಕಿದ್ದಲ್ಲಿ ಅದನ್ನೂ ಸಹಾ ಕೈಬಿಡಬೇಕೆಂಬ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ಯಾವುದೇ ಟ್ಯಾರೀಫ್ ರಿವೈಸ್ ಮಾಡಬಾರದು, ಡಿಸ್‌ಕನೆಕ್ಟ್ ಮಾಡಬಾರದು, ಸಾಧ್ಯವಾದರೆ ಈಗಾಗಲೇ ಏನು ನೋಟೀಸ್‌ಗಳನ್ನು ಕೊಟ್ಟಿದ್ದೀರಿ, ಆ ಮೊತ್ತವನ್ನು ಮುಂದಿನ ಬೆಳೆ ಬಂದ ನಂತರ ವಸೂಲು ಮಾಡುವಂತಹ ಕೆಲಸವನ್ನು ಮಾಡುವ ಮೂಲಕ ರೈತರಿಗೆ ಸಹಕಾರಿಯಾಗಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಪ್ರಮುಖವಾದಂತಹ ಅಂಶವನ್ನು ಈಗಾಗಲೇ ಎಲ್ಲರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರೂ ಕೂಡ ಸಹ ಅದರ ಬಗ್ಗೆ ಒಂದೆರಡು ಮಾತುಗಳನ್ನು ಪ್ರಸ್ತಾಪ ಮಾಡುವಂತಹ ಅವಶ್ಯಕತೆ ಇದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಈಗಾಗಲೇ ಸರ್ಕಾರದ ಕಡೆಯಿಂದ ಹೇಳಿಕೆಗಳು ಬಂದಿವೆ. ನಾವು ರೈತರ ಸಾಲ ಮನ್ನಾ ಮಾಡಿ ಎಂದು ಕೇಳಿದಾಗಲೆಲ್ಲಾ ನೀವು ಎಲ್ಲಿ ಮಾಡಿದ್ದೀರಿ? ನೀವು ಮಾಡದಿರುವಾಗ ನಮ್ಮನ್ನು ಏಕೆ ಕೇಳುತ್ತೀರಿ ಎಂದು ಹೇಳುತ್ತಿರುತ್ತೀರಿ. ನೀವೂ ಕೂಡ ಸ್ವಲ್ಪ ಅಕ್ಕಪಕ್ಕದ ರಾಜ್ಯಗಳಲ್ಲಿ ಮಾಡಿರುವುದನ್ನು ನೋಡುವುದು ಒಳ್ಳೆಯದು. ನಾನೇನೂ ಶಹಭಾಸ್‌ಗಿರಿ ಕೊಟ್ಟು ಮಾತನಾಡುತ್ತಿಲ್ಲ. ಈಗಾಗಲೇ ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಹೊಸ ಸರ್ಕಾರ ಬಂದ ಮೇಲೆ ರೈತರ ಎಲ್ಲಾ ರೀತಿಯ ಸಾಲಗಳ

ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ ಎಂದು ನನಗೆ ತಿಳಿದು ಬಂದಿದೆ. ಇದಕ್ಕಿಂತಲೂ ವಿಶೇಷವಾದುದು ಏನೆಂದರ, 1997 ರ ಇಸವಿಯವರೆಗೆ ಯಾರೆಲ್ಲಾ ಸುಸ್ತಿ ಬಡ್ಡಿ ಸಮೇತ ಸಮರ್ಪಕವಾಗಿ ಪಾವತಿಗಳನ್ನು ಮಾಡಿದ್ದಾರೋ ಅಂತಹವರ ಸುಸ್ತಿ ಬಡ್ಡಿಗಳನ್ನು ಹಿಂತಿರುಗಿಸಬೇಕು ಎನ್ನುವಂತಹ ನಿರ್ಧಾರವನ್ನು ಅಲ್ಲಿ ಕೈಗೊಳ್ಳಲಾಗಿದೆ. ನಮ್ಮಲ್ಲಿ ಈಗ ಬರ ಬಂದಿದೆ. ನಿಮಗೂ ಸಹ ಇಂತಹ ಮಾತುಗಳನ್ನು ಹೇಳಲಿಕ್ಕೆ ಸ್ವಲ್ಪ ಬರ ಬಂದಂತಿದೆ. ಇದು ಬರಬಾರದು. ನೀವು ಯಾವಾಗಲೂ ನಮ್ಮದು ರೈತರ ಪರವಾಗಿ ಇರತಕ್ಕಂಥ ಸರ್ಕಾರ ಎಂದು ಘೋಷಣೆ ಮಾಡುತ್ತೀರಿ. ಮಾತು ಮಾತಿಗೂ ಮೊನ್ನೆ ನಡೆದ ಚುನಾವಣೆ ಬಗ್ಗೆ ಹೇಳುತ್ತೀರಿ. ಏಕಕ್ಕಾಗಿ ಈ ರೈತರ ಬಡ್ಡಿ ಮನ್ನಾ ಮಾಡುವ ಬಗ್ಗೆ ಮಾತನಾಡಲಿಕ್ಕೆ ನಿಮಗೆ ಬರ ಬಂದಿದೆ? ಈಗಾಗಲೇ 252 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡುತ್ತಿದ್ದೇವೆ ಎಂದು ಸರ್ಕಾರ ಹೇಳಿಕೊಂಡಿದೆ. ಬಹುಶಃ ಯಾವ ಮಾಸ್ಟರ್ ನಿಮಗೆ ಅಂಕಿ ಅಂಶಗಳನ್ನು ನೋಡಿ ಲೆಕ್ಕಾಚಾರ ಮಾಡುವುದನ್ನು ಕಲಿಸಿದರೋ ಗೊತ್ತಿಲ್ಲ. ನಮ್ಮ ಹಿಂದಿನ ಸಹಕಾರಿ ಸಚಿವರ ಲೆಕ್ಕದಲ್ಲಿ ಹೇಳುವುದಾದರೆ ಸರ್ಕಾರ ಬಡ್ಡಿ ಮನ್ನಾ ಮಾಡುತ್ತಿರುವ ಮೊತ್ತ ಕೇವಲ 4 ಕೋಟಿ 60 ಲಕ್ಷ ರೂಪಾಯಿಗಳು ಮಾತ್ರ. ಹೀಗಿರುವಾಗ ಏಕಕ್ಕಾಗಿ ಬಹಳ ದೊಡ್ಡ ದೊಡ್ಡ ಘೋಷಣೆಗಳನ್ನು ಮಾಡಿಕೊಳ್ಳುತ್ತೀರಿ? ದೀರ್ಘಾವಧಿ ಸಾಲಗಳನ್ನು ಮಧ್ಯಮಾವಧಿ ಸಾಲಗಳನ್ನಾಗಿ ನೀವು ಏಕೆ ಪರಿವರ್ತನೆ ಮಾಡಬಾರದು?

1.00 ಪಿ.ಎಂ.

ಆ ಪರಿವರ್ತನೆಗಳನ್ನು ಮಾಡಿ ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಸರ್ಕಾರದ ವತಿಯಿಂದ ಏಕೆ ಮಾಡಬಾರದು? ಆ ಕೆಲಸ ಮಾಡುವ ಅವಶ್ಯಕತೆ ಇದೆ. ಆ ವ್ಯವಸ್ಥೆ ತಕ್ಷಣ ಮಾಡಿದರೆ ಮಾತ್ರ ಎಲ್ಲಾ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ಮಾಡುವುದಕ್ಕೆ ಸಾಧ್ಯ. ರೈತರಿಗೆ ಸಮಸ್ಯೆ ಆದ ಸಂದರ್ಭ ಇದೆ. ಅದರ ಜೊತೆಯಲ್ಲಿ ಈಗಾಗಲೇ ಈ ಸದನದಲ್ಲಿ ಹೊಸದಾಗಿ ವಿಷಯ ಸಮಿತಿಗಳ ವ್ಯವಸ್ಥೆ ಜಾರಿಗೆ ಬಂದಿದೆ. ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ವಿಷಯ ಸಮಿತಿಯಲ್ಲಿ ಚರ್ಚೆ ಮಾಡಿ ಸರ್ವ ಸದಸ್ಯರ ಸಹಕಾರದಿಂದ ಹೊಸ ಸೂಚನೆಗಳನ್ನು ಸರ್ಕಾರಕ್ಕೆ ಕೊಡುವುದು ಮಾಡಿದ್ದಾರೆ. ಬಹುಶಃ ಬರ ಪರಿಹಾರದ ಸಂದರ್ಭದಲ್ಲಿ ಕೃಷಿ ಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಕೃಷಿ ಮತ್ತು ತೋಟಗಾರಿಕೆ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಇಲಾಖಾ ವಿಷಯ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲನೆ ಮಾಡಿದರೆ ಒಳ್ಳೆಯದು. ಈಗಾಗಲೇ ಅದರ ವರದಿ ಎಲ್ಲ ಕಡೆ ವಿತರಣೆಯಾಗಿದೆ. ಸದನದಲ್ಲೂ ಕೂಡ ಮಂಡನೆಯಾಗಿದೆ. ಬಹಳ ಚೆನ್ನಾಗಿ ಹೇಳಿದ್ದಾರೆ. ಇದು ಕೇವಲ ಯಾವುದೇ ಒಂದು ಪಕ್ಷದಿಂದ ಕೊಟ್ಟ ಸಲಹೆ ಸೂಚನೆಗಳು ಅಲ್ಲ. ಈ ಸದನದಲ್ಲಿ ಅಧ್ಯಕ್ಷರ

ನೇತೃತ್ವದಲ್ಲಿ ಸರ್ವ ಪಕ್ಷಗಳ ಸದಸ್ಯರ ಸಮ್ಮತಿಯಿಂದ ವರದಿ ಕೊಟ್ಟಿದ್ದಾರೆ. ಸನ್ಮಾನ್ಯ ಶ್ರೀ ಸಿ.ಬೈರೇಗೌಡರು ಯಶಸ್ವಿ ಕೃಷಿ ಮಂತ್ರಿಗಳಾಗಿ ಕೆಲಸ ಮಾಡಿದವರು. ಇದು ಬೈರೇಗೌಡರ ಸಲಹೆ ಮಾತ್ರವಲ್ಲ, ಈ ಸದನದಲ್ಲಿರುವಂತಹ ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರೂ ಸೇರಿ ಸಲಹೆ ಕೊಟ್ಟಿದ್ದಾರೆ. ಅವರು ಕೊಟ್ಟ ವರದಿಯ ಪುಟ 13ನ್ನು ತಾವು ನೋಡಬೇಕು.

''ರಾಜ್ಯ ಮತ್ತು ದೇಶದಲ್ಲಿ ಕಳೆದ ಬೆಳೆ ಕಾಲಾವಧಿಯಲ್ಲಿ ಕೃಷಿ ಉತ್ಪಾದನೆಯಲ್ಲಿ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದ್ದರೂ ಸಹ ಕೃಷಿ ಉತ್ಪನ್ನಗಳ ಆಮದು ಕಡಿಮೆ ಆಗಿದೆ. ರಾಜ್ಯದಲ್ಲಿ ಮತ್ತು ದೇಶದಲ್ಲಿ ಕೃಷಿ ಉತ್ಪನ್ನಗಳ ಬೆಲೆ ಕುಸಿದು ರೈತರ ಆರ್ಥಿಕ ಪರಿಸ್ಥಿತಿ ಕುಸಿದಿದೆ. ಈ ಕಾರಣದಿಂದ ರೈತರ ಆತ್ಮಹತ್ಯೆಗಳು ಆಗುತ್ತಿವೆ. ಈ ಪರಿಸ್ಥಿತಿ ಉಂಟಾಗಲು ನಿಜವಾದ ಕಾರಣ ಏನು ಎಂಬುದು ಸರ್ಕಾರಕ್ಕಾಗಲೀ, ಆರ್ಥಿಕ ತಜ್ಞರಿಗಾಗಲಿ, ವೈಜ್ಞಾನಿಕವಾಗಿ ಪತ್ತೆ ಹಚ್ಚಲು ವಿಫಲರಾಗಿರುವ ಬಗ್ಗೆ ಸಮಿತಿಯು ತನ್ನ ಅಸಂತೋಷವನ್ನು ವ್ಯಕ್ತಪಡಿಸುತ್ತದೆ. ಆದುದರಿಂದ, ಕೂಡಲೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ನಿಜವಾದ ಕಾರಣ ಏನು ಎಂಬುದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಸರ್ಕಾರ ಕೂಡಲೇ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.''

ಎಂದು ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ. ಅದರ ಬಗ್ಗೆ ಚರ್ಚೆಯಾಗಿದೆ. ಈಗಾಗಲೇ ನಮ್ಮ ನಾಯಕರು ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಬಗ್ಗೆ ಹೇಳಿದ್ದಾರೆ. ಎನ್‌ಕ್ವೈರಿ ಮಾಡುವ ಕೆಲಸ ಮಾಡಲಿಲ್ಲ. ಪುಟ 15ರಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸಮಿತಿಯು ಎಷ್ಟು ಚೆನ್ನಾಗಿ ವಿಷಯಗಳನ್ನು ವಿಮರ್ಶೆ ಮಾಡಿದೆ, ಆ ಸಮಿತಿಯ ಸಲಹೆಗಳನ್ನು ಸ್ವೀಕಾರ ಮಾಡಿದರೆ ಖಂಡಿತ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಅದರ ಸಾರಾಂಶ ಈ ರೀತಿ ಇದೆ:

''ರೈತರು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ತೆಗೆದುಕೊಂಡ ಸಾಲದ ಬಗ್ಗೆ ಸಮಿತಿಯು ಕಾಲಾವಕಾಶದ ಅಭಾವದಿಂದ ಪೂರ್ಣವಾಗಿ ಚರ್ಚೆಯನ್ನು ಮಾಡಲು ಸಾಧ್ಯವಾಗಲಿಲ್ಲ. ಆದಕಾರಣ, ರೈತರು ಬ್ಯಾಂಕುಗಳಲ್ಲಿ ಪಡೆದ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒಂದು ಬಾರಿಗೆ ಮನ್ನಾ ಮಾಡಲು ಮತ್ತು ಇನ್ನು ಮುಂದೆ ಎಲ್ಲಾ ಅವಧಿಯ ಸಾಲಗಳ ಮೇಲೆ ಶೇಕಡ 10 ಕ್ಕಿಂತ ಹೆಚ್ಚು ಬಡ್ಡಿಯನ್ನು ವಿಧಿಸಬಾರದೆಂದು ಶಿಫಾರಸ್ಸು ಮಾಡುತ್ತದೆ.''

ಈ ಸಲಹೆಯನ್ನು ಬೈರೇಗೌಡರು ಒಬ್ಬರೇ ಹೇಳಿದ್ದರೆ ಅದು ಅವರ ಭಾವನೆ ಎಂದು ಹೇಳಬಹುದಿತ್ತು. ಆದರೆ ಈ ಸಮಿತಿಯಲ್ಲಿ ಹೆಚ್ಚಿನ ಅಂಶ ರೂಲಿಂಗ್

ಬೆಂಚಿನಲ್ಲಿ ಕೂತ ಸದಸ್ಯರಿದ್ದಾರೆ. ಇದು ಎಲ್ಲಾ ಸದಸ್ಯರ ಭಾವನೆ. ಇದನ್ನು ಅನುಷ್ಠಾನ ಮಾಡಿದಾಗ ಈ ಬರ ಪರಿಹಾರ ಕಾರ್ಯಕ್ಕೆ ಮತ್ತಷ್ಟು ಒತ್ತು ಕೊಡುವ ಕೆಲಸ ಮಾಡುವುದಕ್ಕೆ ಸರ್ಕಾರದವರಿಗೆ ಸಾಧ್ಯ ಇದೆ. ತೆಂಗಿನ ಬೆಲೆ ಮತ್ತು ರೈತರ ಸಮಸ್ಯೆ ಬಗ್ಗೆ ಈಗಾಗಲೇ ಬಹಳ ದೊಡ್ಡ ಹೋರಾಟ ನಡೆದಿದೆ. ಒಂದು ಕಡೆ ಆಡಳಿತ ಪಕ್ಷದವರು ಸ್ವಪ್ರತಿಷ್ಠೆಯಾಗಿ ಸರ್ಕಾರದಿಂದ ಏನೂ ಕೆಲಸ ಮಾಡುವುದಕ್ಕಾಗಲಿಲ್ಲ. ಪರ್ಯಾಯ ವ್ಯವಸ್ಥೆ ಮಾಡಿ ಎಂದು ಹೇಳಿದರೆ ಅದೂ ಮಾಡುವುದಕ್ಕಾಗಲಿಲ್ಲ. ಈ ರೀತಿ ಅವ್ಯವಸ್ಥೆಯಾಗಿದೆ ಎಂದು ಈ ಸಮಿತಿ ಶಿಫಾರಸ್ಸು ಮಾಡುತ್ತದೆ. ನುಸಿ ಪೀಡೆಯನ್ನು ತಡೆಯಲು ಸಾಧ್ಯವಿಲ್ಲವೆಂದು ಅರಿತು ಪರ್ಯಾಯವಾಗಿ ಎಲ್ಲ ತೆಂಗು ಬೆಳೆಗಾರರು ಏಕ ಕಾಲದಲ್ಲಿ ನೀರಾ ಇಳಿಸುವುದರ ಮೂಲಕ ನುಸಿ ತಡೆಗಟ್ಟಬಹುದು. ಎಷ್ಟು ಮರಗಳಲ್ಲಿ ನೀರಾ ಇಳಿಸುತ್ತೀರಿ, ಅಷ್ಟು ಗಿಡಗಳಲ್ಲಿ ನುಸಿ ರೋಗ ಕಡಿಮೆಯಾಗುತ್ತದೆ ಎಂದು ಕೀಟ ಶಾಸ್ತ್ರ ವಿಜ್ಞಾನಿಗಳು ಹೇಳಿರುವ ಹಿನ್ನೆಲೆಯಲ್ಲಿ ಸರ್ಕಾರ ತಡ ಮಾಡದೆ ನೀರಾ ಇಳಿಸುವುದರ ಬಗ್ಗೆ ಒಪ್ಪಿಗೆ ನೀಡಲು ಪರಿಶೀಲನೆ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಎಲ್ಲಾ ಭಾಗಗಳಲ್ಲಿ ಈ ಸಲಹೆ ಅನುಷ್ಠಾನ ಮಾಡಿದರೆ ತೆಂಗು ಬೆಳೆಯುವ ರೈತ ನಿಟ್ಟುಸಿರು ಬಿಡಬಹುದು ಎಂದು ಹೇಳಿ, ಬರ ಪರಿಹಾರ ಕಾರ್ಯದಲ್ಲಿ ಈ ಎಲ್ಲಾ ಸಲಹೆಗಳನ್ನು ಸ್ವೀಕಾರ ಮಾಡಬೇಕು. ಸ್ವ ಪ್ರತಿಷ್ಠೆಯಾಗಿ ಯಾವುದೇ ಸಲಹೆಗಳನ್ನು ಇಟ್ಟುಕೊಳ್ಳಬೇಡಿ. ಸಾಮಾನ್ಯ ಮನುಷ್ಯನ ಜೀವನದ ಮೇಲೆ ತಮ್ಮ ರಾಜಕೀಯ ಚದುರಂಗದಾಟವನ್ನು ಆಡುವುದು ಸರ್ಕಾರ ನಿಲ್ಲಿಸಬೇಕು. ಸಹಕಾರಿ ಇಲಾಖೆಯ ವಿಷಯ ಸಮಿತಿಯು ಸಾಕಷ್ಟು ಸಲಹೆಗಳನ್ನು ಕೊಟ್ಟಿದೆ. ನಾನು ಅವುಗಳನ್ನು ಓದುವುದಕ್ಕೆ ಇಷ್ಟಪಡುವುದಿಲ್ಲ. ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುವ ವಿಚಾರಗಳನ್ನು, ಅಲ್ಪಾವಧಿ ಸಾಲಗಳನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವ ವಿಚಾರ ಕೊಟ್ಟಿದೆ. ಈ ಎಲ್ಲಾ ಸಲಹೆಗಳನ್ನು ಸ್ವೀಕಾರ ಮಾಡಬೇಕು. ಈ ಸಲಹೆಗಳನ್ನು ಸ್ವೀಕಾರ ಮಾಡಿ ನಮ್ಮ ರೈತರಿಗೆ ಸಂಕಷ್ಟದಿಂದ ಪಾರು ಮಾಡುವ ಕೆಲಸವನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಸದಾನಂದಗೌಡರು ಸರ್ಕಾರ ಬರ ಪರಿಹಾರದ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರವನ್ನು ಅವರ ಪಕ್ಷ ಆಳುತ್ತಿದೆ ಮಾನ್ಯ ವಾಜಪೇಯಿಯವರಿಗೆ ವಿರೋಧ ಪಕ್ಷದ ನಾಯಕರು ಇವರು ಇಬ್ಬರೂ ಸೇರಿ ಕೇಳಬಹುದು.

ಶ್ರೀ ಡಿ.ವಿ.ಸದಾನಂದಗೌಡ: ಸನ್ಮಾನ್ಯ ಚನ್ನಿಗಪ್ಪರವರು ಮತ್ತು ಅಭಯಚಂದ್ರರವರು ಹೇಳಿದ ಸಲಹೆಗಳ ಬಗ್ಗೆ ಒಂದು ವಾಕ್ಯ ಓದುತ್ತೇನೆ. ಇವತ್ತು ಕೇಂದ್ರ ಸರ್ಕಾರ ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಈ ರಾಜ್ಯಕ್ಕೆ ಕೊಟ್ಟ

ಅನುದಾನಗಳ ಪಟ್ಟಿ ಇದೆ ಓದಿದರೆ ಸಮಯ ಹಿಡಿಯುತ್ತದೆ. ಕಳೆದ 50 ವರ್ಷಗಳಿಂದ ಆರೋಗ್ಯ ಕ್ಷೇತ್ರ, ವಿದ್ಯಾ ಕ್ಷೇತ್ರ, ಮತ್ತು ಕೃಷಿ ಕ್ಷೇತ್ರ ಪ್ರತಿಯೊಂದಕ್ಕೂ ಅತ್ಯಂತ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿದ ಅಂಕಿ ಅಂಶಗಳ ಪಟ್ಟಿ ನನ್ನಲ್ಲಿ ಇದೆ. ಆದರೆ ಈ ರಾಜ್ಯ ತನ್ನ ನೈತಿಕ ಜವಾಬ್ದಾರಿಯಿಂದ ಹೇಗೆ ತಪ್ಪಿಸಿಕೊಂಡಿದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ದಿನಾಂಕ 4.7.2001 ರಂದು ಕೇಂದ್ರ ಸರ್ಕಾರ ಒಂದು ಪತ್ರ ಹೊರಡಿಸಿ ರಾಜ್ಯ ಸರ್ಕಾರಕ್ಕೆ ಏಕೆ ಹಣ ಬಿಡುಗಡೆ ಮಾಡಲಿಲ್ಲವೆಂದು ಕೊಟ್ಟಿದೆ.

"The release of central share of C.R.F. for 2000-2001 is pending for want of requisite information from the State Government."

ಇವರು ಮಾಹಿತಿ ಕೊಡದೆ ಇದ್ದುದ್ದರಿಂದ ಹಣ ಬಿಡುಗಡೆಯಾಗಿಲ್ಲ. ಇದು ಅಧಿಕೃತವಾಗಿ ಕೇಂದ್ರ ಸರ್ಕಾರದ ಕಛೇರಿಯಿಂದ ಬಂದಿರುವಂತಹ ಕಾಗದ. ಈ ರಾಜ್ಯ ಸರ್ಕಾರ ಇಲ್ಲಿಂದ ಮಾಹಿತಿ ಕೊಡುವುದಕ್ಕೆ ವಿಫಲವಾದ ಹಿನ್ನೆಲೆಯಲ್ಲಿ ಕೇಂದ್ರದಿಂದ ಹಣ ಬಿಡುಗಡೆಯಾಗಿಲ್ಲ. ಈ ಸಂದರ್ಭದಲ್ಲಿ ಯಾರು ಜವಾಬ್ದಾರಿ ನಿರ್ವಹಣೆ ಮಾಡಲಿಲ್ಲ ಹೇಳಿ.

SRI C.CHANNIGAPPA: It is the equal responsibility of the Central and State Governments to look after the welfare of the State. ನಿಮ್ಮ ಜವಾಬ್ದಾರಿ ಇದ, ಸರ್ಕಾರ ಎಕ್ಸಾಮಿನ್ ಮಾಡಬೇಕಾಗಿತ್ತು.

ಶ್ರೀ ಡಿ.ವಿ.ಸದಾನಂದಗೌಡ: ಈ ರಾಜ್ಯದಿಂದ ಆರಿಸಿ ಬಂದ ಲೋಕಸಭಾ ಸದಸ್ಯರು ಏನು ಮಾಡುತ್ತಾರೆ? ನಿಮ್ಮ ಪಕ್ಷದಿಂದ ಪ್ರತಿಪಕ್ಷದಲ್ಲಿ ಕೂತ ಪ್ರತಿಪಕ್ಷದ ಸದಸ್ಯರು ಕೇಂದ್ರ ಸರ್ಕಾರ ಹೆಚ್ಚು ಕಡಿಮೆ ಮಾಡಿದರೆ ಎಚ್ಚರಿಕೆ ಮಾಡುವ ಕೆಲಸ ಮಾಡಲಿಲ್ಲ.

ಗೊಂದಲ

ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಲೋಕ ಸಭೆಯಲ್ಲಿ ಪ್ರತಿ ಪಕ್ಷದಲ್ಲಿ ಕೂತ ಕಾಂಗ್ರೆಸ್‌ನ ಎಂ.ಪಿ.ಗಳು ಲೋಕಸಭೆಗೆ ಹೋಗುತ್ತಿಲ್ಲ. ಅವರ ಊರಿನಲ್ಲಿ ಕೂತು ರಾಜಕಾರಣ ಮಾಡುತ್ತಿದ್ದಾರೆ. ಲೋಕಸಭೆಯಲ್ಲಿ ಏನನ್ನು ಪ್ರತಿಪಾದನೆ ಮಾಡಬೇಕಾಗಿತ್ತು, ಅದನ್ನು ಪ್ರತಿಪಾದನೆ ಮಾಡುವ ಬದಲು ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ ಕೂತು

ರಾಜಕೀಯ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಅಂಕಿ ಅಂಶ ನಮ್ಮಲ್ಲಿ ಇದೆ. ಉಡುಪಿಯಲ್ಲಿ ಸರ್ಕಾರವನ್ನು ಊರಿಗೆ ತೆಗೆದುಕೊಂಡು ಹೋಗುತ್ತೇವೆ, ಎಂದು ಹೇಳುತ್ತಾರೆ. ಲೋಕಸಭಾ ಸದಸ್ಯರ ಸರ್ಕಾರವಾ?

ಶ್ರೀ ಸಿ.ಚನ್ನಿಗಪ್ಪ: ಇಂದಿರಾ ಆವಾಸ್ ಯೋಜನೆಗೆ ಹಣ ಬಿಡುಗಡೆಯಾಗಲಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ:ಇದು ಎಂ.ಪಿಗಳ ಸರ್ಕಾರ, ಶಾಸಕರ ಸರ್ಕಾರ ಎಂದು ನಮಗೆ ಗೊತ್ತಾಗಲಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಈ ರಾಜ್ಯಕ್ಕೆ ಬರಬೇಕಾದ ಕೇಂದ್ರದ ಮೊತ್ತ ಕೇಳುವ ಬದಲು ರಾಜಕಾರಣವನ್ನು ಪಂಚಾಯಿತಿ ಕಛೇರಿಗಳಲ್ಲಿ ಮಾಡುವ ಕೆಲಸವನ್ನು ಕಾಂಗ್ರೆಸ್‌ನ ಲೋಕಸಭಾ ಸದಸ್ಯರು ಇಡೀ ರಾಜ್ಯದ ಮೂಲೆ ಮೂಲೆಯಲ್ಲಿ ಮಾಡುತ್ತಿದ್ದಾರೆ. ನಾವು ಹೇಗೆ ರಾಜ್ಯ ಸರ್ಕಾರದ ಆಡಳಿತ ಯಂತ್ರವನ್ನು ಎಚ್ಚರ ಮಾಡುತ್ತೇವೆ, ಅವರು ಹಾಗೆ ಮಾಡಬೇಕು. ಅಲ್ಲಿಗೆ ಹೋಗುವುದಿಲ್ಲ, ಇಲ್ಲಿ ಹೇಳುತ್ತಾರೆ. ನೀವು ಕೇಂದ್ರ ಸರ್ಕಾರವನ್ನು ಎಚ್ಚರ ಮಾಡಬೇಕು. ಆಡಳಿತ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿರುವ ಅವರ ಲೋಕಸಭಾ ಸದಸ್ಯರನ್ನು ಎಚ್ಚರ ಮಾಡಬೇಕು. ಕೇಂದ್ರದಲ್ಲಿ ತಮ್ಮ ಬೇಡಿಕೆಯನ್ನು ಮಂಡನೆ ಮಾಡುವ ಕೆಲಸ ಮಾಡಲಿ. ಕೇಂದ್ರ ಸರ್ಕಾರ ತಪ್ಪು ಮಾಡಿದ್ದರೆ ಲೋಕಸಭೆಯಲ್ಲಿ ಮಾತನಾಡಲಿ. ಇಲ್ಲಿ ಕೂತು ಕಂದಾಯ ಮಂತ್ರಿಗಳು, ಕೃಷಿ ಮಂತ್ರಿಗಳು ಎಲ್ಲಾ ಕೇಂದ್ರ ಸರ್ಕಾರವನ್ನು ಬೊಟ್ಟು ಮಾಡಿ ತೋರಿಸುತ್ತಾರೆ. ಇವರಿಗೆ ನೈತಿಕ ಜವಾಬ್ದಾರಿ ಇಲ್ಲ. ಆ ಸ್ಥಾನದಲ್ಲಿ ಕೂತ ಮಂತ್ರಿಗಳು ಅವರ ಇಲಾಖೆಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಬೇಕು. ಈ ರೀತಿ ವಿಚಾರಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾದ ಕೆಲಸ ಮಾಡಬೇಕಾಗಿದೆ. ಎಚ್ಚೆತ್ತುಕೊಂಡು ಕೆಲಸಮಾಡುವ ಜವಾಬ್ದಾರಿ ಅವರ ಮೇಲಿದೆ. ಬರಪರಿಹಾರದಲ್ಲಿ ವಿಫಲರಾದ ರಾಜ್ಯ ಸರ್ಕಾರ, ಈಗಾಗಲೇ, ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ನಮ್ಮ ಪ್ರಮುಖ ಬೇಡಿಕೆಗಳೇನೆಂದರೆ, ರೈತರ ಸಾಲ ಮನ್ನಾ ಮಾಡುವುದು, ಮಧ್ಯಮಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತನೆ ಮಾಡುವುದು, ಕೆಇಬಿಯವರು ಹೆಚ್ಚು ಮಾಡಿರುವ ಟ್ಯಾರಿಫ್ ಅನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದು, ಯಾವುದೇ ಡಿಸ್ಕನೆಕ್ಷನ್ ಮಾಡದೆ ರೈತರ ಪಂಪ್‌ಸೆಟ್ಟುಗಳಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡುವುದು ಇದರ ಜೊತೆಗೆ ತಂಗಿನಿಂದ ನೀರಾ ಇಳಿಸುವ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟರೆ ತಕ್ಷಣ ಒಂದು ಕಡೆ ರೈತರ ಬರಪರಿಹಾರಕ್ಕೆ ರೈತರಿಗೆ ನಾವು ಸಹಕಾರ ಮಾಡಿದಂತಾಗುತ್ತದೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದನೆಗಳು.

+ ಶ್ರೀ ವೈ.ಕೆ.ರಾಮಯ್ಯ(ಕುಣಿಗಲ್): ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಮಳೆಯ ಅಭಾವದಿಂದ ಕರ್ನಾಟಕ ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಪರಿಸ್ಥಿತಿ ಕುರಿತು ಚರ್ಚೆ ಮಾಡುವುದಕ್ಕೆ ವಿರೋಧ ಪಕ್ಷದ ಸ್ನೇಹಿತರು ಕೊಟ್ಟಿರುವ ಸೂಚನೆ ಸ್ವಾಗತಾರ್ಹವಾದುದು. ಅವರೇ ಒಪ್ಪಿಕೊಂಡಿರುವ ಪ್ರಕಾರ ಈ ಪರಿಸ್ಥಿತಿ ಸೃಷ್ಟಿಯಾಗುವುದಕ್ಕೆ ಕಾರಣ ಮಳೆ ಬಾರದಿರುವುದು. ಇದು ಯಾವ ಒಬ್ಬ ವ್ಯಕ್ತಿ ಒಂದು ಸರ್ಕಾರ ಅಥವಾ ಒಂದು ಆಡಳಿತದ ವಿಫಲತೆಯಿಂದ ಸೃಷ್ಟಿಯಾದ ಪರಿಸ್ಥಿತಿಯಲ್ಲವೆಂಬುದನ್ನು ಅವರೆ ಒಪ್ಪಿಕೊಂಡಿದ್ದಾರೆ. ಮಳೆ ಬರಲಿಲ್ಲ ಬರಗಾಲ ಬಂದಿದೆ ಎನ್ನುವ ವಾದದ ಒಂದು ಭಾಗ ಮುಗಿಯಿತು. ಎರಡನೆಯ ಭಾಗ, ಬಂದಿರುವ ಬರಗಾಲದ ಪರಿಸ್ಥಿತಿಯನ್ನು ಸರ್ಕಾರ ಸರಿಯಾಗಿ ನಿಭಾಯಿಸುತ್ತಿಲ್ಲ, ವಿಫಲವಾಗಿದೆ ಎಂಬುದು ಅವರ ತಕರಾರು. ನಮಗೆ ಈ ಪ್ರದೇಶದಲ್ಲಿ ಮಳೆ ಬರುವುದೆ ಜೂನ್-ಜುಲೈ ತಿಂಗಳಲ್ಲಿ, ಜುಲೈ ತಿಂಗಳಲ್ಲಿ ಮಳೆ ಆರಂಭವಾಗಬೇಕಾಗಿತ್ತು ಆರಂಭವಾಗಿಲ್ಲ, ಈಗ ಮಳೆಗಾಲ ಎರಡೇ ತಿಂಗಳಿಗೆ ನಮಗೆ ಇಳಿದಿದೆ. ಎಲ್ಲದರಲ್ಲೂ ಸಮಗ್ರ ಬದಲಾವಣೆಯಾದಂತೆ ಮಳೆಗಾಲದಲ್ಲೂ ಬದಲಾವಣೆಯಾಗಿ ಇವತ್ತು ನಮ್ಮ ಮಳೆಗಾಲ ಸೆಪ್ಟಂಬರ್-ಅಕ್ಟೋಬರ್ ಎರಡು ತಿಂಗಳಿಗೆ ಇಳಿದಿದೆ. ನವೆಂಬರಿಗೆ ನಿಂತುಹೋಗುತ್ತದೆ. ನಮ್ಮ ಡ್ಯಾಮ್‌ಗಳಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ನೀರು ಜಾಸ್ತಿ ಇದೆ, ಮೊನ್ನೆ ಕಂದಾಯ ಮಂತ್ರಿಗಳು ಹಾಗೂ ನಾನು ಹೇಮಾವತಿ ಇತ್ಯಾದಿ ಡ್ಯಾಮ್‌ಗಳನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಇದನ್ನು ಗಮನಿಸಲಾಗಿದೆ. ಬರಗಾಲ ಪ್ರಾರಂಭವಾಗಿರುವುದು ಈಗ, ಬರಪರಿಹಾರ ಕೆಲಸ ಮಾಡಲಿಲ್ಲವೆಂದು ದೂರುವುದರ ಬದಲು, ಏನೇನು ಮಾಡಬೇಕೆಂದು ಸಲಹೆ ಸೂಚನೆ ಕೊಡುವುದು ಉತ್ತಮವೆಂದು ನನ್ನ ಸ್ನೇಹಿತರಿಗೆ ಹೇಳಬಯಸುತ್ತೇನೆ. ಆ ಸಾಲಿನಲ್ಲಿ ಕುಳಿತುಕೊಂಡಿರುವ ಅನೇಕ ದಿಗ್ಗಜರ ಜೊತೆಯಲ್ಲಿ ನಾನು ಜಗಳವಾಡಿದ್ದೇನೆ, ಪ್ರೀತಿಸಿದ್ದೇನೆ, ಅಧಿಕಾರ ಹಂಚಿಕೊಂಡಿದ್ದೇನೆ. ಅವರು ಒಂದು ಸತ್ಯವನ್ನು ಒಪ್ಪಿಕೊಳ್ಳಲೇಬೇಕು, ನಾನು ಶಾಸಕನಾಗಿ ಬಂದ ಮೇಲೆ ಇದು ಐದನೆಯ ಸರ್ಕಾರವಾಗಿದೆ. ಎಲ್ಲಾ ಸರ್ಕಾರವಿದ್ದಾಗಲೂ ಕೂಡ ನಿಯಮ 69ರ ಕೆಳಗೆ ಇಂತಹದೊಂದು ಸೂಚನೆ ಬಂದೇ ಬರುತ್ತದೆ, ಚರ್ಚೆ ನಡೆಯುತ್ತದೆ, ಆದರೆ ಪರಿಸ್ಥಿತಿ ಬದಲಾವಣೆಯಾಗಿದೆಯೇ ಎಂದು ನೋಡಿದರೆ, ಅತ್ಯಂತ ನೋವಿನಿಂದ ಯಾವ ಬದಲಾವಣೆಯು ಆಗಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇಲ್ಲಿ ಕುಳಿತಿರುವವರು ಅಲ್ಲಿ ಕುಳಿತರೆ ನಾವು ಅದನ್ನೇ ಮಾಡುತ್ತೇವೆ ಅಲ್ಲಿ ಕುಳಿತಿರುವವರು ಇಲ್ಲಿ ಬಂದರೆ ಅದನ್ನೇ ಮಾಡುತ್ತಾರೆ. ವಸ್ತುಸ್ಥಿತಿ ಬದಲಾವಣೆಯಾಗಿಲ್ಲ. ಬರಿ ಸೀಟುಗಳ ಬದಲಾವಣೆಯಾಗಿದೆ. ಸೀಟು ಬದಲಾವಣೆಯಾದ ತಕ್ಷಣ ನಮ್ಮ ನಿಲುವುಗಳಲ್ಲಿ ಬದಲಾವಣೆಯಾಗುವುದು ಸೂರ್ಯ ಚಂದ್ರರಷ್ಟು ಸತ್ಯ. ಇತ್ತೀಚಿನ ದಿನಗಳಲ್ಲಿ ನಾನು ಯಾರನ್ನು ದೂರುತ್ತಿಲ್ಲ ನನ್ನನ್ನು ಸೇರಿಸಿಕೊಂಡು ಹೇಳುತ್ತೇನೆ. ಈ ಪರಿಸ್ಥಿತಿಯಲ್ಲಿ

ಯಾವುದೇ ಬದಲಾವಣೆಯಾಗಿಲ್ಲ, ಆದುದರಿಂದ ಈ ಚರ್ಚೆ ನಮಗೆ ಯಾವ ಬದಲಾವಣೆಯನ್ನೂ ತಂದಿಲ್ಲ, ಹಾಗಾಗಿ ಈ ಚರ್ಚೆಯಿಂದಲೂ ಕೂಡ ಬರ ಕೂಡ ಕಡಿಮೆಯಾಗುವುದಿಲ್ಲ, ಪರಿಹಾರವೂ ಸಿಗುವುದಿಲ್ಲ, ಅದು ನನ್ನ ಅನಿಸಿಕೆ, ಹಾಗೂ ಅನುಭವ. ಆದುದರಿಂದ ಚರ್ಚೆಯ ಸ್ವರೂಪವನ್ನು ಬದಲಾವಣೆ ಮಾಡಬೇಕೆನ್ನುವುದು ನನ್ನ ಕೋರಿಕೆ. ಅದೇನೆಂದರೆ, ವಸ್ತುಸ್ಥಿತಿಯನ್ನು ಅರ್ಥಮಾಡಿಕೊಂಡು ಏನು ಮಾಡಿದರೆ ಇಂತಹ ಪರಿಸ್ಥಿತಿಯನ್ನು ನಿಭಾಯಿಸಬಹುದು? ಮಳೆ ಬಾರದಿರುವುದರಿಂದ ಬರೀ ರೈತರಿಗಷ್ಟೇ ಕಷ್ಟವಾಗಿಲ್ಲ, ಕುಡಿಯುವ ನೀರಿನ ತೊಂದರೆ ಎಲ್ಲರಿಗೂ ಬಂದಿದೆ, ಅದು ಸಮಾಜ ಎಲ್ಲಾ ವರ್ಗಕ್ಕೂ ತಟ್ಟಿದೆ. ಎಲ್ಲಾ ಸಂದರ್ಭದಲ್ಲೂ ಕೂಡ ಈ ರೈತನ ಬದುಕಿಗೆ ಪರಿಹಾರವನ್ನು ಒದಗಿಸಿಕೊಡುವುದಕ್ಕೆ ಎಲ್ಲಾ ಪಕ್ಷಗಳ ನಡುವೆ ಒಂದು ಸ್ಪರ್ಧೆ ನಡೆಯುತ್ತಿದೆ. ಆದುದರಿಂದ ನಿನ್ನೆ ಈ ಚರ್ಚೆಯನ್ನು ಕೇಳಿದ ಮೇಲೆ ಒಬ್ಬ ಬರಹಗಾರರನ್ನು ಸಂಪರ್ಕ ಮಾಡಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ, ರೈತರ ಹಿತವನ್ನು ಕಾಪಾಡುವಂತಹ ರಾಜಕೀಯ ನಾಟಕದ ಒಂದು ನಾಟಕವನ್ನು ಬರೆದುಕೊಡು, ಸ್ಪರ್ಧೆಯನ್ನು ಕಲಾಕ್ಷೇತ್ರದಲ್ಲಿ ಏರ್ಪಾಡು ಮಾಡುತ್ತೇವೆ, ಯಾವ ಪಕ್ಷದವರು ಸ್ಪರ್ಧೆಯಲ್ಲಿ ಚೆನ್ನಾಗಿ ಏಕ್ಟ್ ಮಾಡುತ್ತಾರೆ ಅವರಿಗೆ ಬಹುಮಾನವನ್ನು ಕೊಡೋಣ ಎಂದು ಹೇಳಿದೆ. ಆ ನಾಟಕಕ್ಕೆ ಹೆಸರಿಡಬೇಕೆಂದು ಮಾಡಿದ್ದೇನೆ, ಇದು ನನ್ನ ಸ್ವಂತ ಅಭಿಪ್ರಾಯ, ಇಲ್ಲಿ ಯಾರನ್ನು ತೆಗಳುವುದಕ್ಕಾಗಿ, ದೂಷಿಸುವುದಕ್ಕಾಗಿ ಹೇಳುತ್ತಿಲ್ಲ. ಬರ ಬಂದಿದೆ ರೈತ ಕಂಗಾಲಾಗಿದ್ದಾನೆ, ಮಳೆ ಏತಕ್ಕೆ ಬರಲಿಲ್ಲ ಎನ್ನುವುದರ ಬಗ್ಗೆ ಚರ್ಚೆಯಾಗಬೇಕೆ ಹೊರತು, ಮಳೆ ಬಾರದಿರುವುದಕ್ಕೆ ವಾಜಪೇಯಿ ಸರ್ಕಾರವಾಗಲಿ, ಅಥವಾ ಕೃಷ್ಣರವರ ಸರ್ಕಾರವಾಗಲಿ ಕಾರಣವಲ್ಲ ಅಥವಾ ನಾವ್ಯಾರೂ ಕಾರಣರಲ್ಲ. ಈ ಚರ್ಚೆಗಳು ತಾತ್ಕಾಲಿಕ ಪರಿಹಾರವನ್ನು ಕಂಡುಕೊಳ್ಳುವ ಗುರಿಯನ್ನು ಮುಟ್ಟದೆ ಶಾಶ್ವತವಾದ ಪರಿಹಾರವನ್ನು ಮುಟ್ಟುವುದಕ್ಕೆ ಪ್ರಯತ್ನ ಮಾಡಬೇಕೆನ್ನುವುದು ನನ್ನ ಒಂದು ಅಭಿಪ್ರಾಯ. ನೀರಿನ ಲಭ್ಯತೆ ನಮ್ಮೆಲ್ಲರ ಮನಸ್ಸನ್ನು ಕಲಕುವಷ್ಟು ಕಡಿಮೆಯಾಗುತ್ತಿರುವುದು ಕೇವಲ ಕರ್ನಾಟಕ, ಭಾರತಕ್ಕೆ ಸೀಮಿತವಾಗಿಲ್ಲ, ಇದು ಪ್ರಪಂಚಕ್ಕೆ ಅನ್ವಯಿಸುವಂಥದ್ದು. ದಾವೋಸ್‌ನಲ್ಲಿ ನಡೆದ ಇನ್ನು ಎರಡು ದಶಕಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಏನಾಗುತ್ತದೆ ಎಂಬುದರ ಚರ್ಚೆಯನ್ನು ಓದಿದರೆ ಅಥವಾ ಗಂಭೀರವಾಗಿ ಚಿಂತನೆಯನ್ನು ಮಾಡಿದರೆ ಕುಡಿಯುವ ನೀರಿನ ಲಭ್ಯತೆ ದಿನೇ ದಿನೇ ಪ್ರಪಂಚದಲ್ಲಿ ಕಡಿಮೆಯಾಗುತ್ತಿರುವುದು ಪ್ರಪಂಚದ ಪರಿಸ್ಥಿತಿಯಾಗಿದೆ. ವಿಶ್ವಸಂಸ್ಥೆಯ ಉಪಾಧ್ಯಕ್ಷರು, ಒಬ್ಬರು "There will be a war between the nations and there will be a fight between the nations for drinking water." ಎಂದು ಹೇಳಿದ್ದಾರೆ. ಆದುದರಿಂದ ನೀರಿನ ಲಭ್ಯತೆ ಕಡಿಮೆಯಾಗುವುದಕ್ಕೆ ಕಾರಣವೇನೆಂಬುದರ ಬಗ್ಗೆ ಕೇವಲ ಈ ರೈತರ ಹಿತವನ್ನು

ಕಾಪಾಡುವ ನಾಟಕದ ಸ್ಪರ್ಧೆಯಾಗಿ ಮಾಡಿಕೊಳ್ಳದೆ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ನಾವು ಚರ್ಚೆ ಮಾಡಬೇಕಾಗುತ್ತದೆ. ಆ ವಿಷಯದ ಆಳವಾದ ಚರ್ಚೆಗೆ ಇಲ್ಲಿ ಅವಕಾಶವಿಲ್ಲದಿರುವುದರಿಂದ ಮಳೆ ಬಾರದೆ ಬರಗಾಲ ಬಂದಿದೆ ಅದಕ್ಕೆ ಪರಿಹಾರ ಮಳೆ ಬರುವಂತೆ ಮಾಡಬೇಕು. ಕೃಷ್ಣ ಅವರ ಸರ್ಕಾರವನ್ನು ದೂಷಿಸಿದರೆ ಪರಿಹಾರ ಬರುವುದಿಲ್ಲ. ಮಾನ್ಯ ವಾಜಪೇಯಿ ಅವರ ಸರ್ಕಾರವನ್ನು ದೂಷಿಸಿದರೆ ಪರಿಹಾರ ಬರುವುದಿಲ್ಲ. ಹಿಂದೆ ನಮ್ಮ ಮಂತ್ರಿಗಳೊಬ್ಬರು ಕೆರೆಯೊಳಗೆ ಪರ್ಜನ್ಯ ಜಪ ಮಾಡಿಸಿದ್ದರು. ಅವರು ಮದುವೆ ಆಗಿರಲಿಲ್ಲ. ಮಾನ್ಯ ಲಕ್ಷ್ಮಿಸಾಗರ್ ರವರು ಒಂದು ಸಾರಿ ಪರ್ಜನ್ಯ ಜಪವನ್ನು ತಿಪ್ಪಗೊಂಡನಹಳ್ಳಿಯಲ್ಲಿ ಮಾಡಿಸಿದ್ದರು. ನಾನು ಹೇಳುತ್ತೇನೆ ಪರ್ಜನ್ಯ ಜಪ ಮಾಡಿದರೂ ಮಳೆ ಬರುವುದಿಲ್ಲ. ಸರ್ಕಾರಗಳನ್ನು ದೂಷಿಸಿದರೂ ಮಳೆ ಬರುವುದಿಲ್ಲ. ಪತ್ರಿಕೆಯಲ್ಲಿ ಫೋಟೋ ಬಂದಿತ್ತಲ್ಲಾ ಆ ತರಹ ಕತ್ತೆಗಳನ್ನು ಮದುವೆ ಮಾಡಿಸಿದರೂ ಮಳೆ ಬರುವುದಿಲ್ಲ. ಮಳೆ ಬರಬೇಕಾದರೆ ಸ್ವಾಭಾವಿಕವಾಗಿ ನಮ್ಮ ಪರಿಸರವಾದಿ ಸ್ನೇಹಿತರ ಭಾಷಣವನ್ನು ನಾನು ಕೇಳುತ್ತಿದ್ದೆ ಮಳೆ ಬರುವುದಕ್ಕೆ ಮೂಲವಾದ ಸಂಪತ್ತು ಏನಿತ್ತು ಅದರ ಮೇಲೆ ಅತ್ಯಾಚಾರವನ್ನು ಮಾಡುತ್ತಿದ್ದೇವೆ. We have committed a rape. ಆ ಅತ್ಯಾಚಾರವನ್ನು ನಿಲ್ಲಿಸಬೇಕಾಗುತ್ತದೆ. ಕಾಡುಗಳನ್ನು ನಾವು ನಾಶ ಮಾಡುತ್ತಿದ್ದೇವೆ. ಮಳೆ ಬರುವುದಕ್ಕೆ ಆಕರ್ಷಣೆ ಮಾಡಬೇಕಾದಂತಹ ಮರಗಳನ್ನು ನಾಶ ಮಾಡುತ್ತಿದ್ದೇವೆ. ಆದುದರಿಂದ ಇವತ್ತು ಅವರ ಮೇಲೆ ಇವರು, ಇವರ ಮೇಲೆ ಅವರು ಮಾತನಾಡುವುದು ಬಿಟ್ಟು ಮಳೆ ಬಾರದೆ ಇರುವುದರಿಂದ ಮೂಲಭೂತವಾಗಿ ಬಂದಿರುವಂತಹ ಅಭಾವದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇಂತಹ ಶಾಶ್ವತ ಪರಿಹಾರಗಳ ಬಗ್ಗೆ ಚಿಂತನೆ ಮಾಡಬೇಕು. ಮಳೆಬಾರದೆ ಇರುವುದಕ್ಕೆ ಮೂಲ ಕಾರಣ ಕಾಡು ನಾಶವಾಗುತ್ತಿರುವುದು. ಅದರ ಬಗ್ಗೆ ನಮ್ಮ ಪರಿಸರ ವಾದಿಗಳು ಚರ್ಚೆ ಮಾಡಲಿ. ಅದಕ್ಕೆ ನನ್ನದು ಏನು ಅಭ್ಯಂತರವೇನಿಲ್ಲ. ಆದರೆ ನನ್ನ ವಾದ ಏನೆಂದರೆ ಪರಿಸರವಾದಿಗಳಲ್ಲಿ ಅತ್ಯಂತ ಗೌರವ ಇಟ್ಟುಕೊಂಡು ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಕೈಗಾವನ್ನು ನಾವು ಕಟ್ಟಲೇಬೇಕಾಗುತ್ತದೆ, ಡ್ಯಾಂಗಳನ್ನು ನಾವು ಕಟ್ಟಲೇಬೇಕಾಗುತ್ತದೆ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲೇಬೇಕಾಗುತ್ತದೆ. ಆದರ ಅಭಿವೃದ್ಧಿಯ ರಥದ ಚಕ್ರಕ್ಕೆ ಸಂಪೂರ್ಣವಾದಂತಹ ನಿಲುಗಡೆಯನ್ನು ಮಾಡಿ ಪರಿಸರವನ್ನು ಉಳಿಸಿಕೊಳ್ಳುವುದು ಇವತ್ತಿನ ಪರಿಸ್ಥಿತಿಯಲ್ಲಿ ನಮಗೆ ಸಾಧ್ಯವಿಲ್ಲ. ನಾವು ನಮ್ಮ ಕಾಡುಗಳನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಜನಸಂಖ್ಯೆ ಒತ್ತಡದಿಂದಾಗಿ ನಮ್ಮ ಕಾಡುಗಳು ಇವತ್ತು ಉಳಿಯುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಕಾರಣವೇನೆಂದರೆ ನಮಗೆ ಹೆಣ ಸುಡುವುದಕ್ಕೆ ಸ್ಮಶಾನ ಬೇಕಾಗುತ್ತದೆ. ಮನೆ ಕಟ್ಟಲು ನಿವೇಶನ ಕೊಡಬೇಕಾಗುತ್ತದೆ. ಹೊಟ್ಟೆಗೆ ಬೆಳೆದುಕೊಂಡು ತಿನ್ನಲು ಜಮೀನು ಕೊಡಬೇಕಾಗುತ್ತದೆ. ಇಂತಹ ಒತ್ತಡ ಇರುವಂತಹ ಪರಿಸ್ಥಿತಿಯಲ್ಲಿ ನಮ್ಮ

ವ್ಯವಸ್ಥಿತವಾದಂತಹ ಕಾಡು ಏನಿದೆ ಅದನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ನನ್ನ ದೃಷ್ಟಿಯಲ್ಲಿ ನಮಗೆ ಇರುವಂತಹ ಒಂದೇ ಒಂದು ಮಾರ್ಗವೇನೆಂದರೆ ನಾಡನ್ನು ಕಾಡನ್ನಾಗಿ ಮಾಡುವಂತಹ ಪರಿಸ್ಥಿತಿಯನ್ನು ನಾವು ಮಾಡಬೇಕಾಗುತ್ತದೆ. ಇದರ ಬಗ್ಗೆ ಅವರ ಮೇಲೆ ಇವರು, ಇವರ ಮೇಲೆ ಅವರು ಚರ್ಚೆ ಮಾಡುತ್ತಾ ದೂಷಿಸುವುದು ಬಿಟ್ಟು, ಇದರ ಬಗ್ಗೆ ಏನು ಮಾಡಬೇಕೆಂದು ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನಮ್ಮ ರೈತರ ಸಂಕಷ್ಟದ ಬಗ್ಗೆ ನಾವೆಲ್ಲರೂ ಚರ್ಚೆ ಮಾಡಿ ಮಾತನಾಡುತ್ತೇವೆ. ರೈತರ ಸಂಕಷ್ಟಕ್ಕೆ ಏನು ಕಾರಣ? ರೈತನ ಬದುಕು ಹಸನಾಗಬೇಕಾದರೆ ಉತ್ತಮ ಬೆಳೆ ಬರಬೇಕು, ಉತ್ತಮವಾದಂತಹ ಬೆಲೆ ಸಿಗಬೇಕು. ಉತ್ತಮವಾದಂತಹ ಬೆಳೆ ಬೆಳೆಯುವಂತಹ ಸಂದರ್ಭದಲ್ಲಿ ಇವತ್ತು ನಮ್ಮ ಎಲ್ಲಾ ಬೆಳೆಗಳಿಗೆ ರೋಗ ಅಂಟಿಕೊಂಡಿದೆ. ನಮ್ಮ ಹುಡುಗರು ಐದು ಸಾವಿರ ಕಾಯಿ ತುಂಬಿಸಿಕೊಂಡು ಹೋಗಿ ಮಾರಿ ಎಂಟೂವರೆ ಸಾವಿರ ರೂಪಾಯಿ ದುಡ್ಡು ತಂದಿದ್ದಾರೆ. ಇನ್ನು ಎಲ್ಲಿ ಹೋಗಿ ಸಾಯಬೇಕು. ತೆಂಗಿನ ಗಿಡಕ್ಕೆ ನುಸಿ ರೋಗ ಬಂದಿದೆ. ಇಲ್ಲಿ ನಮ್ಮ ಸದಸ್ಯರಾದ ಮಾನ್ಯ ವೆಂಕಟರಾಮಪ್ಪನವರು ಇದ್ದಾರೋ ಇಲ್ಲವೋ ಗೊತ್ತಿಲ್ಲ, ಪಾವಗಡದಲ್ಲಿ ಕಡ್ಲೆಗಿಡಕ್ಕೆ ಕಪ್ಪುತಲೆ ರೋಗ ಬಂದಿದೆ. ಇನ್ನು ಮಾವಿನ ಗಿಡದಲ್ಲಿ ಸುಳಿಯೊಳಗಡೆಯಿಂದ ಕಾಂಡದವರೆಗೂ ಪೂರ್ತಿ ಕೊರೆದುಕೊಂಡು ಹೋಗಿ ಗಿಡ ಪೂರ್ತಿ ಸಾಯುವಂತಹ ರೋಗ ಬಂದಿದೆ. ಅದು ಯಾವ ರೋಗವೋ ನನಗೆ ಗೊತ್ತಿಲ್ಲ. ಹೂವಿಗೂ ರೋಗ. ಹೀಗೆ ನಾವು ಬೆಳೆಯುವಂತಹ ಪ್ರತಿಯೊಂದು ಬೆಳೆಗೂ ಕೂಡ ರೋಗ ಹತ್ತಿ ಬೆಳೆ ನಾಶವಾಗುವಂತಹ ಪರಿಸ್ಥಿತಿ ಬಂದಿದೆ. ನಾನು ಮತ್ತು ಮಾನ್ಯ ಬೈರೇಗೌಡರು ಎರಡು ದಿವಸ ಈ ರಾಜ್ಯದ ವಿಜ್ಞಾನಿಗಳನ್ನು ಮತ್ತು ಆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಕೂರಿಸಿಕೊಂಡು, ನೀವು ಈ ರೋಗಗಳಿಗೆ ಏನು ಪರಿಹಾರ ಸೂಚಿಸುತ್ತೀರಿ? ನಮ್ಮ ರೈತನನ್ನು ರಕ್ಷಣೆ ಮಾಡುತ್ತೀರಾ ಎಂದು ಕೇಳಿದೆವು. ಅವರು ಕಾಂಗ್ರೆಸ್ಸಿನವರು ಅಲ್ಲ, ಆಡಳಿತ ಪಕ್ಷದವರು ಅಲ್ಲ, ಏನು ಹೇಳಿದರು ಅವರು, 'ನಾವು ಏನೂ ಮಾಡುವ ಸ್ಥಿತಿಯಲ್ಲಿ ಇಲ್ಲ' Do you know what he said? 'We have to live with this situation. We have done our best.' ಚಿರಂಜೀವಿ ಸಿಂಗ್ ಸಾಹೇಬರು ಹೇಳುತ್ತಾರೆ, "We have done our best." ಎಂದು ನಾವು ಇದಕ್ಕಿಂತ ಇನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ನುಸಿ ರೋಗದ ಬಗ್ಗೆಯಾಗಲಿ ಮತ್ತೊಂದು ರೋಗದ ಬಗ್ಗೆಯಾಗಲಿ ನಾವು ಶ್ರಮವನ್ನು ಪಟ್ಟಿದ್ದೇವೆ, ನಮ್ಮ ಇತಿಮಿತಿ ಅಷ್ಟೇ ಇರುವುದು, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಇವತ್ತು ರೈತ ಬೆಳೆದಂತಹ ಬೆಳೆಗೆ ಉತ್ತಮವಾದಂತಹ ಬೆಳೆಯನ್ನು ತೆಗೆದುಕೊಳ್ಳುವುದಕ್ಕೆ ಪರಿಹಾರವನ್ನು ಒದಗಿಸಬೇಕಾದ ಆಡಳಿತ ಯಂತ್ರ, ಅದು ಕೇಂದ್ರ, ಅಥವಾ ರಾಜ್ಯದ್ದು ಇರಲಿ. ಆ ರೋಗಗಳಿಗೆ ಮದ್ದನ್ನು

ಕಂಡುಹಿಡಿಯಬೇಕಾದಂತಹ ವಿಜ್ಞಾನಿಗಳು ಇವತ್ತು ವಿಫಲರಾಗಿರುವುದರಿಂದ ಇದನ್ನು ಒಬ್ಬ ರಾಜಕಾರಣಿ ಮತ್ತೊಂದು ರಾಜಕಾರಣಿಯನ್ನು ದೂಷಿಸುವುದಾಗಲಿ, ಒಂದು ಸರ್ಕಾರ ಮತ್ತೊಂದು ಸರ್ಕಾರವನ್ನು ದೂಷಿಸುವುದರಿಂದ ಆಗಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. That is why I said, "What is the hard fact?". What is the reality? Let us come to the ground without playing utopia. ಅಲ್ಲಿ ಹಾರಾಡುವುದು ಬಿಟ್ಟು ಭೂಮಿಯ ಮೇಲೆ ಬರೋಣ. ಇವತ್ತು ರೈತನ ಬೆಳೆಗೆ ಬಂದಿರುವಂತಹ ರೋಗ, ಆ ಬೆಳೆ ಅವನ ಕೈಗೆ ಹತ್ತದೆ ಇರುವುದಕ್ಕೆ ಕಾರಣ ಯಾವುದೆಂದರೆ ಆ ರೋಗ. ಆ ರೋಗ ನಿವಾರಣೆ ಮಾಡಬೇಕಾಗಿರುವವರು ಯಾರು? ಆ ವಿಜ್ಞಾನಿಗಳು. ಇದರ ಬಗ್ಗೆ ನಾವು ಚಿಂತನೆ ಮಾಡಿ ಉತ್ತಮವಾದಂತಹ ಬೆಳೆ ನಮ್ಮ ರೈತನ ಕೈಗೆ ಸಿಗುವುದಕ್ಕೆ ವ್ಯವಸ್ಥೆ ಮಾಡಿದರೆ ಅರ್ಧ ಸಮಸ್ಯೆ ಪರಿಹರಿಸಿದಂತಾಗುತ್ತದೆ. ಇನ್ನು ಬಹಳ ಮುಖ್ಯವಾದಂತಹ ಕೆಲಸ ಮಾಡಬೇಕಾಗಿರುವುದು ರೈತ ಬೆಳೆಯುವಂತಹ ಬೆಳೆಗೆ ಉತ್ತಮವಾದಂತಹ ಬೆಲೆ ಸಿಗಬೇಕು. ಈಗ ಮಾತನಾಡಿದಂತಹ ಎಲ್ಲಾ ನನ್ನ ಸ್ನೇಹಿತರು irrespective of party ಹೇಳಿದ್ದಾರೆ, ಬೆಲೆ ಕುಸಿದಿದೆ. Now, you must be prepared to face. ಈ ಬೆಲೆ ಕುಸಿತಕ್ಕೆ ಕಾರಣವೇನು? ಬೆಳೆ ಬಾರದೆ ಇರುವುದಕ್ಕೆ ರೋಗ ಕಾರಣ. ಅದಕ್ಕೆ ವಿಜ್ಞಾನಿಗಳು ಔಷಧ ಕಂಡುಹಿಡಿಯಬೇಕು. ಆದರೆ ಬೆಲೆ ಕಡಿಮೆಯಾಗುತ್ತಿದೆಯಲ್ಲಾ ಅದಕ್ಕೆ ಯಾರು ಕಾರಣ? ಈ ರಾಷ್ಟ್ರದಲ್ಲಿ ಕೇಂದ್ರಸರ್ಕಾರ ಆಮದು ಮಾಡಿಕೊಳ್ಳುವಂತಹ ಅನಿಷ್ಟ ಪದ್ಧತಿಯನ್ನು ಅಳವಡಿಸಿಕೊಂಡು ಈ ನಾಡಿನ, ಈ ರಾಷ್ಟ್ರದ ರೈತನ ಗೋರಿಯನ್ನು ತೋಡಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ: ಅದನ್ನು ಮಾಡಿದವರು ನರಸಿಂಹರಾಯರು ಎಂದು ಕೇಳಿದ್ದೇನೆ. ಅವತ್ತು ನರಸಿಂಹರಾಯರು ಡಬ್ಲ್ಯೂಟಿಒಗೆ ಫೌಂಡೇಷನ್ ಸ್ಟೋನ್ ಹಾಕಿದವರು.

ಶ್ರೀ ಆರಗ ಜ್ಞಾನೇಂದ್ರ: ಗೋರಿ ಅಗೆದದ್ದು, ತೋಡಿದ್ದು, ನರಸಿಂಹರಾಯರು ಮತ್ತು ಮನ್ ಮೋಹನ್‌ಸಿಂಗ್ ಅವರು. ಮಾನ್ಯ ರಾಮಯ್ಯನವರಂತಹ ಹಿರಿಯರು ಮಾತನಾಡುವಾಗ ಅದನ್ನೆಲ್ಲಾ ಪ್ರಸ್ತಾಪ ಮಾಡುತ್ತಾರೆ ಎಂದು ಅಂದುಕೊಂಡಿದ್ದೇವೆ. ಏಕೆಂದರೆ ರೈತರ ಬಗ್ಗೆ ಯೋಚನೆ ಮಾಡುವವರು ಅವರು.

ಶ್ರೀ ವೈ.ಕೆ.ರಾಮಯ್ಯ: ಮಾನ್ಯ ಸದಸ್ಯರಲ್ಲಿ ನನ್ನ ಕೋರಿಕೆ ಇಷ್ಟೆ. ಯಾವುದೇ ಒಂದು ವಾದವನ್ನು ಪ್ರಸ್ತಾಪ ಮಾಡಿದಾಗ ಅದಕ್ಕೆ ತಕ್ಕಂತೆ ಒಂದು ಆಧಾರ ಇಲ್ಲದೆ ಅದನ್ನು ನಾನು ಮಾಡುವುದಿಲ್ಲ. ನನ್ನ ಮಾತನ್ನು ಪೂರ್ತಿಯಾಗಿ ಕೇಳಿದ ಮೇಲೆ ನಿಮಗೆ ಆಧಾರ

ಸಿಗದೆ ಇದ್ದರೆ ನೀವು ಪ್ರಶ್ನೆ ಮಾಡಬಹುದು. I feel, I am sufficient and efficient to answer your question. I feel I am confident. ಹೇಳಲಾ, ರಾಜಕೀಯ ಚದುರಂಗದಾಟ. ಯಾವುದು ಸ್ವಾಮಿ ರಾಜಕೀಯ ಚದುರಂಗದಾಟ? ಈಗತಾನೆ ಮಾತನಾಡಿದಂತಹ ನಮ್ಮ ಸದಸ್ಯರು ಹೇಳಿದರು. ಯಾರು ಆಡುವುದಿಲ್ಲ ಇದನ್ನು? ಯಾವ ಪಕ್ಷದವರು ಆಡುವುದಿಲ್ಲ ಈಗ? ಯಾರು ಹೊರತಾಗಿದ್ದೇವೆ ನಾವು? ಯಾವುದು ವಸ್ತುಸ್ಥಿತಿ ಇದೆ, ಅದರ ಬಗ್ಗೆ ಚರ್ಚಿಸೋಣ ಬನ್ನಿ. ಯಾವುದು ಚದುರಂಗದಾಟ? ನಿಮ್ಮ ಕೇಂದ್ರದ ಅನುದಾನವನ್ನು ಪೂರ್ತಿಯಾಗಿ ನಿಲ್ಲಿಸಿಬಿಡಿ. ಇವರು ಬಡ್ಡಿ ಮನ್ನಾ ಮಾಡುವುದು ಬೇಡ. ರೈತ ಯಾವತ್ತು ಹೀಗೆ ಕೈ ಒಡ್ಡುವವನಲ್ಲ. ರೈತ ಯಾವತ್ತಿಗೂ ಈ ರೀತಿ ಕೊಡುವಂತಹವನು. ನಿಮ್ಮ ಬಡ್ಡಿ ಮನ್ನಾ ಬೇಡ. ನಿಮ್ಮ ಅನುಕಂಪ ಬೇಡ. ನಿಮ್ಮ ಅನುದಾನ ಬೇಡ. ಅವನಿಗೆ ನ್ಯಾಯ ಕೊಡಿ. ಅವನು ಬೆಳೆಯುವಂತಹ ಬೆಳೆಗೆ ಉತ್ತಮವಾದಂತಹ ಬೆಲೆ ಕೊಡಿ. ಯಾವುದು ಚದುರಂಗದಾಟ? ಅನುದಾನದ ಪಟ್ಟಿಯನ್ನು ಓದಿದ್ದೀರಾ? ಓದುವುದು ಆ ಪಟ್ಟಿ ಬೇಕಾಗಿಲ್ಲ. ಒಂದು ವರ್ಷದಿಂದ ಸತತವಾಗಿ ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರದ ಆಮದು ವಸ್ತುವಿನ ಮೇಲೆ ಸಂಪೂರ್ಣವಾದಂತಹ ಆಮದು ಶುಲ್ಕವನ್ನು ವಿಧಿಸಿ. ನೀವು ಅದನ್ನು ಓದಿ, ನಿಮಗೆ ಓದಿ ಹೇಳಿದ್ದೇನೆ. That is why I used the word "What is the hard fact?" Please remember it. ಸ್ವಾಮಿ, ನಾನು ಇವರಿಗೆ ಎರಡು ಸಾರಿ ಪ್ರಶ್ನೆ ಹಾಕಿದ್ದೆ. ನಿಮ್ಮ ಕೇಂದ್ರ ಸರ್ಕಾರದಿಂದ ಏನೂ ಉಪಕಾರ ಬೇಡ. ನಮ್ಮ ರೈತರ ಬಗ್ಗೆ ನೀವು ಚದುರಂಗದಾಟ ಆಡುತ್ತಿಲ್ಲ ಎನ್ನುವುದಾದರೆ, ರೈತರ ಬಗ್ಗೆ ನಿಮ್ಮ ಅನುಕಂಪ ಪ್ರಾಮಾಣಿಕವಾದುದು ಎನ್ನುವುದಾದರೆ. ಸುಮ್ಮನೆ ಉದ್ವೇಗಕ್ಕೆ ಒಳಗಾಗುವುದು ಬೇಡ. ನನಗೆ ಯಾರನ್ನೂ ದೂಷಿಸುವುದಕ್ಕೆ ಇಷ್ಟವಿಲ್ಲ. ಈ ಮಾತನ್ನು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಎಲ್ಲಾ ಪಕ್ಷದ, ಎಲ್ಲಾ ಸರ್ಕಾರಗಳಿಗೂ ಹೇಳುತ್ತಾ ಬಂದಿದ್ದೇನೆ, ಶಾಸಕನಾದಮೇಲೆ ಹೇಳಿದ್ದೇನೆ, ಆಗುವುದಕ್ಕಿಂತ ಮೊದಲು ಹೇಳಿದ್ದೇನೆ. ಇವತ್ತು ನಾನು ಹೇಳುತ್ತಿದ್ದೇನೆ, ಇದೇ ಪರಿಸ್ಥಿತಿ ಮುಂದುವರೆದರೆ ತಾವು ರೈತರಿದ್ದೀರಿ, ನಾನು ರೈತನಿದ್ದೇನೆ. ಈ ರೈತರ ಕೃಷಿ ಉದ್ಯಮ ನಾಶವಾಗುವಂತಹ ಕಾಲ ಬರುತ್ತದೆ. ಆದಕಾರಣ ಉದ್ವೇಗಕ್ಕೆ ಒಳಗಾಗುವುದು ಬೇಡ. ನಿಜ ಸ್ಥಿತಿಯನ್ನು ಚರ್ಚೆ ಮಾಡೋಣ.

ಶ್ರೀ ಆರಗ ಜ್ಞಾನೇಂದ್ರ: ಅದರಲ್ಲಿ ರಾಜ್ಯ ಸರ್ಕಾರದ ಪಾತ್ರ ಏನೂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಪಾರ್ಲಿಮೆಂಟ್‌ನಲ್ಲಿ ಮಾತನಾಡಿದ ಹಾಗೆ ಮಾತನಾಡುತ್ತಾರೆ. ಅವರನ್ನು ಅಲ್ಲಿಗೆ ಕಳುಹಿಸಬೇಕಾಗಿತ್ತು ಎಂದು ಕಾಣುತ್ತದೆ.

ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಭೀಕರವಾಗುತ್ತಿದೆ. ರಾಜ್ಯ ಸರ್ಕಾರ ಏನು ಮಾಡುತ್ತಿದೆ? ಅದನ್ನು ಮಾಡುವುದಕ್ಕೆ ಏನಾದರೂ ಸಲಹೆಗಳನ್ನು ಕೊಡಬೇಕು. XX ಈಗ ರಾಜ್ಯ ಸರ್ಕಾರ ತುರ್ತಾಗಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಅವರು ಹೇಳಬೇಕು.

ಶ್ರೀ ವೈ.ಕೆ.ರಾಮಯ್ಯ: ಸನ್ಮಾನ್ಯ ಅಧ್ಯಕ್ಷರೆ, ನನ್ನದೊಂದು ಕೋರಿಕೆ, ಅವರ್‍ಯಾರು ಮಾತನಾಡುವಾಗ ನಾನು ಯಾವತ್ತೂ ಎದ್ದು ನಿಂತುಕೊಳ್ಳುವುದಿಲ್ಲ. ನಮ್ಮ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ನಾನು ಇಲ್ಲೇ ಕುಳಿತುಕೊಂಡು ನೋಡುತ್ತಿದ್ದೇನೆ, ನೀವು ಸರ್ವಗುಣ ಸಂಪನ್ನರಲ್ಲ, ನೀವು ಕೇಳಬೇಕಾಗುತ್ತದೆ, ನಾನು ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. You are not the embodiment of all the virtues on the earth.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನನಗೆ ರಾಮಯ್ಯನವರಿಂದ ಯಾವುದೇ ಸರ್ಟಿಫಿಕೇಟ್ ಬೇಕಾಗಿಲ್ಲ, ನನಗೆ ಯಾವ್ಯಾವ ಗುಣಗಳಿವೆಯೋ ಅದನ್ನು ನಾನು ಕಾಪಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವೈ.ಕೆ.ರಾಮಯ್ಯ: ನಾನು ಹೇಳುವುದೇನೆಂದರೆ, ಶ್ರೀಮಾನ್ ವಿಶ್ವೇಶ್ವರ ಹೆಗಡೆ ಕಾಗೇರಿಯವರು XX ಕೇಳಲು ಬಂದಿಲ್ಲವೆಂದು ಬಹಳ ತುಚ್ಛವಾಗಿ ಹೇಳಿದ್ದಾರೆ. he must take back. I am serious about it. ವಿರೋಧಪಕ್ಷದ ನಾಯಕರು, ಹಿರಿಯರಾದ ಹನುಮೇಗೌಡರು ಇತರರು ಕುಳಿತಿದ್ದಾರೆ, ನಾನು ಈಗ ಆ ಮನುಷ್ಯನಿಗೆ ಅವರು ಹೇಳಿದಷ್ಟೆ ಲಘುವಾಗಿಯೇ ಹೇಳಬೇಕಾಗುತ್ತದೆ. No member is not the embodiment of all the virtues on the earth. He must understand and so far as I am concerned, you have no business to talk about me. He must withdraw it.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇಂತಹದ್ದನ್ನು ಮಾತನಾಡಬೇಕು, ಇಂತಹದ್ದನ್ನು ಮಾತನಾಡಬೇಕೆನ್ನುವ ನಿಮ್ಮ ಆಜ್ಞೆಯನ್ನು ನಾನು ಪಾಲಿಸುತ್ತೇನೆ.

(ಗೊಂದಲ)

XX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವೈ.ಕೆ.ರಾಮಯ್ಯ: ಇದ್ದದ್ದನ್ನು ಇದ್ದಂತೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದ ಎಂಬುದು ಗಾದೆ, ಕೈಲಾಗದವಳು ಮೈ ಪರಚಿಕೊಂಡಳಂತೆ. ನಿಮ್ಮ ಕೈಯಲ್ಲಿ ನಾನು ಮಾತನಾಡುವುದನ್ನು ಕೇಳುವುದಕ್ಕೆ ಶಕ್ತಿ ಇಲ್ಲದಿದ್ದರೆ ನಿಮ್ಮ ಕಿವಿಗೆ ಹತ್ತಿಯನ್ನು ಇಟ್ಟುಕೊಳ್ಳಬಹುದು ಅಥವಾ ಎದ್ದು ಹೊರಗೆ ಹೋಗಬಹುದು, ನಾನು ಮಾತ್ರ ಹೇಳುವುದನ್ನು ಹೇಳೇ ಹೇಳುತ್ತೇನೆ. ಈ ಭಾರತದೇಶದಲ್ಲಿ ಬ್ರಿಟೀಷ್‌ನವರ ಕಾಲದಿಂದ ಕೇಂದ್ರಸರ್ಕಾರ ಆಮದು ನೀತಿಯನ್ನು ಅದರಲ್ಲೂ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವುದರ ಮುಖಾಂತರ ಈ ದೇಶದ, ಈ ನಾಡಿನ ರೈತರಿಗೆ ಗೋರಿಯನ್ನು ತೆಗೆದು ಮುಚ್ಚಿದ್ದಾರೆ, ಇದರಲ್ಲಿ ಎಲ್ಲಾ ಸರ್ಕಾರಗಳು ಸೇರಿವೆ ಎಂದು ಹೇಳುತ್ತಿದ್ದೇನೆ, ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಶಕ್ತಿ ಇರುವವರು ಅರ್ಥ ಮಾಡಿಕೊಳ್ಳಬಹುದು ಇಲ್ಲದಿದ್ದರೆ ನೀವು ಮಾತನಾಡುವಾಗ ನನ್ನ ವಾದಕ್ಕೆ ಪ್ರತಿವಾದ ಮಾಡಬಹುದು. ನನ್ನ ಪಕ್ಷಾಂತರ ಬಗ್ಗೆ, ಪುರಾಣದ ಬಗ್ಗೆ ಮಾತನಾಡುವಷ್ಟು ಧೈರ್ಯವನ್ನು ನೀವು ತೆಗೆದುಕೊಂಡರೆ ಪರಿಸ್ಥಿತಿ ಏಕೋಪಕ್ಕೆ ಹೋಗುತ್ತದೆ. ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ನನ್ನ ಸ್ನೇಹಿತರಿಗೆ ಪ್ರಾರ್ಥನೆ ಮಾಡಿಕೊಂಡು ಎಚ್ಚರಿಕೆಯನ್ನು ಕೂಡ ಕೊಡುತ್ತಿದ್ದೇನೆ. ನಾನು ಯಾರೇ ಮಾತನಾಡುವಾಗಲೂ ಎದ್ದು ನಿಂತುಕೊಳ್ಳುವುದಿಲ್ಲ, ಮಾತನಾಡುವುದನ್ನೆಲ್ಲಾ ಕೇಳುತ್ತಿರುತ್ತೇನೆ, ಅದೇರೀತಿಯಾಗಿ ನಾನು ಮಾತನಾಡುವಾಗಲು ಬೇರೆಯವರು ಕೇಳಬೇಕೆಂದು ನಿರೀಕ್ಷೆ ಮಾಡುತ್ತೇನೆ. ಇದಕ್ಕಿಂತ ಒರಟಾಗಿ ಹೇಳುವುದಕ್ಕೆ ಬರುವುದಿಲ್ಲ, ಹೇಳುವ ಅವಶ್ಯಕತೆಯೂ ಇಲ್ಲ, ಅವರಿಗೆ ತೋಳು ಉದ್ದವಿರುವಂತೆ ನನಗೂ ತೋಳುಗಳು ಉದ್ದ ಇವೆ. ಇವರು ನನ್ನ ಪಕ್ಷಾಂತರದ ಬಗ್ಗೆ ಹೇಳುತ್ತಾರೆ, ಇವರ ಕಮಲ ಎಲ್ಲಿ ಹೋಯಿತು ಕೇಳಿಸ್ವಾಮಿ? ನಿಮ್ಮ ದೀಪ ಎಲ್ಲಿ ಹೋಯಿತು?

ಶ್ರೀ ಡಿ.ವಿ.ಸದಾನಂದಗೌಡ: ಅವರು ರಾಜಕೀಯ ಮಾತನಾಡುವುದಿಲ್ಲವೆಂದ-ವರಿಗೆ ದೀಪದ ವಿಷಯ ಏತಕ್ಕೆ ಎತ್ತಬೇಕು?

ಶ್ರೀ ವೈ.ಕೆ.ರಾಮಯ್ಯ: ಅಧಿಕಾರದ ಆಸೆಯನ್ನು ಕೇಳಿ ನಾನು ಎದ್ದು ಓಡಿ ಹೋಗುವಷ್ಟು ಹೇಡಿ ನಾನಲ್ಲ, ''ಅಧಿಕಾರದ ಆಸೆಗಾಗಿ ಪಕ್ಷಾಂತರ ಮಾಡಿದಂತಹವರು'' ಶ್ರೀಮಾನ್ ಹೆಗಡೆಯವರು. ನಿಮಗೆ ನನ್ನ ವಿಷಯದಲ್ಲಿ ಇಷ್ಟು ಲಘುವಾಗಿ ಮಾತನಾಡುವುದಕ್ಕೆ ನಾನು ಬಿಡುವುದಿಲ್ಲ, ನಾನು ಅದಕ್ಕೆ ಉತ್ತರವನ್ನು ಕೊಟ್ಟೇ ಕೊಡುತ್ತೇನೆ. ಅಧಿಕಾರದ ಆಸೆಗಾಗಿ ಪಕ್ಷಾಂತರ ಮಾಡಿದ ರಾಮಯ್ಯನವರಿಂದ ನಾನು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿಲ್ಲವೆಂದು ತಾವು ಹೇಳುತ್ತಿದ್ದೀರಲ್ಲಾ, ನಿಮ್ಮ ದೀಪ ಎಲ್ಲಿ ಹಾರಿ ಹೋಯಿತು ಸ್ವಾಮಿ?

ಛೇರ್ಮನ್: ಪ್ರಶ್ನೆ ಮಾಡುವುದು ಬೇಡ ವಿಷಯದ ಮೇಲೆ ಮಾತು ಮುಂದುವರೆಸಿ.

ಶ್ರೀ ವೈ.ಕೆ.ರಾಮಯ್ಯ: ಇಲ್ಲಿ ಏದ್ದರೆ ಅವರು ಹೇಳಿರುವುದನ್ನು ಕಡತದಿಂದ ತೆಗೆದು ಹಾಕಿ, you remove it from the records. ಇಲ್ಲದಿದ್ದರೆ ಅದಕ್ಕೆ ಉತ್ತರ ಕೊಡುವುದಕ್ಕೆ ನನಗೆ ಅವಕಾಶ ಕೊಡಿ. ಅವರು ಅಧಿಕಾರದ ಆಸೆಗಾಗಿ ರಾಮಯ್ಯನವರು ಪಕ್ಷಾಂತರ ಮಾಡಿದ್ದಾರೆಂದು ನನಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ.

ಛೇರ್ಮನ್: ನಾನು ಅದನ್ನು ತರಿಸಿ ನೋಡುತ್ತೇನೆ.

ಶ್ರೀ ವೈ.ಕೆ.ರಾಮಯ್ಯ: ಅದು ಅನ್ ಪಾರ್ಲಿಮೆಂಟರಿ ಪದವಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ. ಆದರೆ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರಶ್ನೆ ಮಾಡುವ, ಅವಹೇಳನ ಮಾಡುವ ಪದವಾಗಿದೆ. ಆದುದರಿಂದ ಅದನ್ನು ತೆಗೆಸಿರಿ, ಇಲ್ಲದಿದ್ದರೆ ನಾನು ಯಾರು ಪಕ್ಷಾಂತರಿಗಳು ಪಕ್ಷಾಂತರಿಗಳೇ ಎಂಬ ಬಗ್ಗೆ ಉತ್ತರ ಕೊಡುತ್ತೇನೆ. ನನಗೆ ದೇವರು ಆ ಶಕ್ತಿಯನ್ನು ಕೊಟ್ಟಿದ್ದಾನೆ. ಅದನ್ನು ಕಡತದಿಂದ ತೆಗೆಸುತ್ತೀರೋ ಇಲ್ಲವೋ ನನಗೆ ಉತ್ತರ ಕೊಡಲು ಅವಕಾಶ ಮಾಡಿಕೊಡುತ್ತೀರೋ ಹೇಳಿ, ನಾನು ಮಾತನಾಡುವುದಿಲ್ಲ ಇಲ್ಲಿಗೆ ನಿಲ್ಲಿಸುತ್ತೇನೆ. ನನಗೆ ಮಾತನಾಡುವ ಚಟವಿಲ್ಲ.

He is not the embodiment of all the virtues on the earth. ಇವರೇನು ಪ್ರಪಂಚದಲ್ಲಿಲ್ಲದ ಸರ್ವಜ್ಞಮೂರ್ತಿ ಇವರಲ್ಲ.

ಛೇರ್ಮನ್: ನಿಮ್ಮ ವ್ಯಕ್ತಿತ್ವದ ಬಗ್ಗೆ ಅವಹೇಳನಕಾರಿಯಾಗಿ ಅವರೇನಾದರೂ ಮಾತನಾಡಿದ್ದರೆ, ನಾನು ಕಡತವನ್ನು ತರಿಸಿ ತೆಗೆಸಿಹಾಕುತ್ತೇನೆ.

ಶ್ರೀ ವೈ.ಕೆ.ರಾಮಯ್ಯ: ಅವರು ಪ್ರತಿ ದಿವಸವು ಲಘುವಾಗಿ ಮಾತನಾಡುತ್ತಾರೆ. He feels that he is everything on the earth. ಅವರು ಬಿಟ್ಟರೆ ಉಳಿದವರೆಲ್ಲಾ ಭ್ರಷ್ಟರು, ಅಯೋಗ್ಯರು, ಅವರ ಪಕ್ಷದವರು ಮಾತ್ರ ಸರ್ವಗುಣ ಸಂಪನ್ನರು ಉಳಿದವರೆಲ್ಲಾ ಬಹಳ ನೀಚರು ಎನ್ನುವ ಭಾವನೆಯು ಅವರ ತಲೆಯಲ್ಲಿ ತುಂಬಿಕೊಂಡಿದೆ, ಅದು ಇರಕೂಡದು.

ಶ್ರೀ ಎಸ್.ಎಸ್.ಪಾಟೀಲ್: ಬಸವಣ್ಣನವರು ಅದಕ್ಕೆ ಹೇಳಿದ್ದಾರೆ ನಿಂದಿಸುವವರನ್ನು ತಂದೆತಾಯಿಗಳೆಂಬರಯ್ಯ ಎಂದು ಹೇಳಿದ್ದಾರೆ.

ಛೇರ್ಮನ್: ನಾನು ಆ ಪದಗಳನ್ನು ತೆಗೆಸಿ ಹಾಕಿದ್ದೇನೆ.

ಶ್ರೀ ವೈ.ಕೆ.ರಾಮಯ್ಯ: ತುಂಬಾ ಧನ್ಯವಾದಗಳು, ನಾನು ಹೇಳುವುದು ವಿಷಯಕ್ಕೆ ಸಂಬಂಧಿಸಿಲ್ಲದಿದ್ದರೆ, ಇರ್‌ರೆಲವೆಂಟ್ ಆದರೆ ಅದನ್ನು ನನಗೆ ಹೇಳಿದರೆ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ. ಆದರೆ ಬೇರೆಯವರ್‍ಯಾರೂ ನನಗೆ ಬುದ್ಧಿಯನ್ನು

ಹೇಳುವ ಅವಶ್ಯಕತೆ ಇಲ್ಲ. ಬೆಲೆ ಕಡಿಮೆಯಾಗುವುದಕ್ಕೆ ಏನು ಕಾರಣ? ಕರ್ನಾಟಕ ರಾಜ್ಯದಲ್ಲಿ ರೈತರ ದುಸ್ಥಿತಿಗೆ ಅವನು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ರೈತ ಬೆಳೆದ ಕೃಷಿ ಉತ್ಪನ್ನದ ಬೆಲೆ ಕುಸಿದಿರುವುದು ಒಂದು ಕಾರಣ. ಈ ಬೆಲೆ ಕುಸಿತಕ್ಕೆ ಏನು ಕಾರಣ ಎಂಬ ಬಗ್ಗೆ ಬೇಕಾದರೆ ಗಂಟೆಗಟ್ಟಲೆ ಚರ್ಚೆ ಮಾಡೋಣ. ಕೇಂದ್ರ ಸರ್ಕಾರಗಳು ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಂಡಿದ್ದು ಈ ದೇಶದ ಕೃಷಿ ಉತ್ಪನ್ನಗಳ ಬೆಲೆ ಕುಸಿಯಲು ಪ್ರಮುಖ ಕಾರಣವೆಂದು ನಾನು ಹೇಳುತ್ತೇನೆ. ಇದನ್ನು ಇವತ್ತು ಅಥವಾ ನಿನ್ನೆ ಮಾಡಿದರೇ ಎನ್ನುವ ಬಗ್ಗೆ ಇವತ್ತೆಲ್ಲಾ ಬೇಕಾದರೆ ಚರ್ಚೆ ಮಾಡಿ ಎಂದರೆ ಮಾತನಾಡುತ್ತೇನೆ ಆದರೆ ಸಮಯವಿಲ್ಲ. ನ್ಯಾಷನಲೈಸೇಷನ್, ಗ್ಲೋಬಲೈಸೇಷನ್, ಲಿಬರಲೈಸೇಷನ್, ಡಬ್ಲುಟಿಒ, ಗ್ಯಾಟ್ ಇವೆಲ್ಲವೂ ವಾಜಪೇಯಿಯವರು ಅಧಿಕಾರಕ್ಕೆ ಬಂದ ತಕ್ಷಣ ಬಂದವುಗಳೆಂದು ಹೇಳುವಷ್ಟು ದಡ್ಡನಲ್ಲ ಅಥವಾ ಅವಿವೇಕಿಯೂ ಅಲ್ಲ. Yes, it was introduced in 1970, seriously considered in 1990 and started implementing in 1991. ಆದರೆ ಕಾಂಗ್ರೆಸ್ ಸರ್ಕಾರ 1991ರಲ್ಲಿ ಏನು ಮಾಡಿತೆಂದರೆ they brought liberalisation ಕೆಲವು ವಸ್ತುಗಳನ್ನು ಈ ರಾಷ್ಟ್ರಕ್ಕೆ ತರಿಸಲಿಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟರು. ಅದರೊಳಗೆ ಏನು ಮಾಡಿದರು ಎಂದರೆ major agricultural produce except silk were included in the negative list. ಲಿಬರಲೈಜೇಷನ್, ಗ್ಲೋಬಲೈಜೇಷನ್ ಇವೆಲ್ಲಾ ಸಂಪೂರ್ಣವಾಗಿ ಯಾವ ವಸ್ತುವನ್ನಾದರೂ ಎಷ್ಟು ಬೇಕಾದರೂ ಈ ದೇಶಕ್ಕೆ ತರುವಂಥ ಸ್ವಾತಂತ್ರ್ಯ ಯಾರಿಗೂ ಇರಲಿಲ್ಲ. ಆದರೆ ಆ ನೆಗಟೀವ್ ಲಿಸ್ಟನ್ನು ತೆಗೆದು 740 ವಸ್ತುಗಳ ಪಟ್ಟಿಯನ್ನು ಲಿಬರಲೈಜ್ ಮಾಡಿ ಆಮದು ಮಾಡುವುದಕ್ಕೆ ಸ್ವಾತಂತ್ರವನ್ನು ಕೊಟ್ಟು ಅಲ್ಪಸ್ವಲ್ಪ ಜೀವ ಇದ್ದಂಥ ರೈತರ ಜೀವನವನ್ನು ನಾಶ ಮಾಡಿದ್ದು ಈ ವಾಜಪೇಯಿಯವರ ಸರ್ಕಾರವಾಗಿದೆ. ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ಸಾವಿರಾರು ಕೋಟಿ ರೂಪಾಯಿಗಳ ವೆಚ್ಚದ ಸಕ್ಕರೆ ಇಲ್ಲಿ ಕೊಳೆಯುತ್ತಾ ಇದೆ, ಆದರೂ ಹೊರ ದೇಶದಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಾರೆ. ನಾವು ಬೆಳೆಯುತ್ತಿರುವಂಥ ರೇಷ್ಮೆಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯಿಲ್ಲ ಆದರೂ ಚೈನಾ ದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಾರೆ. ನಮ್ಮಲ್ಲಿ ಬೆಳೆಯುವಂಥ ಟಮೊಟೊ ಹಣ್ಣಿಗೆ ಕೆ.ಜಿ. ಒಂದಕ್ಕೆ 25 ರೂಪಾಯಿಗಳ ಖರ್ಚು ಆದರೆ ಅದನ್ನು 25 ಪೈಸೆಗೆ ಮಾರುವಂಥ ಪರಿಸ್ಥಿತಿ ಇರುವಾಗ ಇದನ್ನು ಸಹ ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಾರೆ. ಆದ್ದರಿಂದ ಇವತ್ತು ಬೆಳೆ ಕೆಡುವುದಕ್ಕೆ ಮತ್ತು ಬೆಲೆ ಇಳಿದಿರುವುದಕ್ಕೆ ಎರಡು ಕಾರಣಗಳನ್ನು ವಿಶ್ಲೇಷಣೆ ಮಾಡಿದಾಗ ಆಗುವಂಥ ಬೆಳೆಗೆ ಬೆಲೆ ಕಡಿಮೆಯಾಗಿ ರೈತರು ಈ ದುಸ್ಥಿತಿಗೆ ಬರಲಿಕ್ಕೆ ಮುಖ್ಯ ಕಾರಣ, ಕೇಂದ್ರ ಸರ್ಕಾರದ ಆಮದು ನೀತಿಯೇ ಮುಖ್ಯ ಕಾರಣ ಎನ್ನುವಂಥ

ಮಾತನ್ನು ನಾನು ಬಹಳ ಹಿಂದಿನಿಂದಲೇ ಹೇಳಿದ್ದೇನೆ. ಶ್ರೀ ಜಾರ್ಜ್ ಫರ್ನಾಂಡಿಸ್ ಅವರು ಕೇಂದ್ರದಲ್ಲಿ ವಾಣಿಜ್ಯ ಸಚಿವರಾಗಿದ್ದಾಗ ಅವತ್ತೇ ನಾನು ''ಭಾರತದ ವ್ಯವಸಾಯ ಕ್ಷೇತ್ರವನ್ನು ನೀವು ನಾಶ ಮಾಡುತ್ತಿದ್ದೀರಿ'' ಎಂದು ಕಾಗದ ಬರೆದಿದ್ದೆ. ಆದ್ದರಿಂದ ಇವತ್ತು ಹೊಸದಾಗಿ ರಾಮಯ್ಯನವರು ಪಕ್ಷಾಂತರ ಮಾಡಿ ಮಂತ್ರಿ ಆಗಲಿಕ್ಕೆ ಆ ಮಾತು ಹೇಳುತ್ತಾ ಇಲ್ಲ. ಮಾನ್ಯ ಅಧ್ಯಕ್ಷರೆ, ಈ ಮಾತನ್ನು ತಮಗೆ ಮತ್ತು ತಮ್ಮ ಮುಖಾಂತರ ನಮ್ಮ ಸ್ನೇಹಿತರಿಗೆ ಹೇಳುತ್ತಿದ್ದೇನೆ. ಈ ಅನುದಾನ ಕೊಡುವುದು, ಬಡ್ಡಿ ಮನ್ನಾ ಮಾಡುವುದು ಇವು ತಾತ್ಕಾಲಿಕ ಪರಿಹಾರವಷ್ಟೆ. ಈ ಬಡ್ಡಿ ಮನ್ನಾ ಮಾಡುವ ವಿಷಯದಲ್ಲಿ ನಮ್ಮ ಹಿರಿಯ ಸದಸ್ಯರಾದಂಥ ಶ್ರೀ ಎಸ್.ಎಸ್.ಪಾಟೀಲರು ಬಹಳ ಪ್ರತಿಪಾದನೆ ಮಾಡುತ್ತಾರೆ. ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಆದರೆ ಅದಕ್ಕೆ ತಾತ್ವಿಕವಾಗಿ ನಾನು ವಿರೋಧಿ. ನಾನು ಹೇಳುವುದೇನೆಂದರೆ ನೀವು ಬಡ್ಡಿ ಮನ್ನಾ ಮಾಡಬೇಡಿ, ನಿಮ್ಮ ಅನುದಾನ ಬೇಡ, ನಿಮ್ಮ ಅನುಕಂಪ ಬೇಡ, ನಮ್ಮ ರೈತರಿಗೆ ನಿಮ್ಮ ಭಿಕ್ಷೆ ಕೂಡ ಬೇಡ. ಆದರೆ ರೈತ ಬೆಳೆಯುವ ಬೆಳೆಗೆ ಸರಿಯಾದ ಬೆಲೆಯನ್ನು ನೀವು ಕೊಡಿ, ಸಾಕು. ಈ ವಿಚಾರದಲ್ಲಿ ಹಲವಾರು ಸಲ ಈ ಸದನದಲ್ಲಿ ನಾನು ಮಾತನಾಡಿದ್ದೇನೆ. Fix floor price and also ceiling price, if necessary. ಆದರೆ ನೀವು ಹಾಗೆ ಮಾಡಲಿಲ್ಲ. ಮಾಲಿಕ್ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರಮಟ್ಟದಲ್ಲಿ ಕಮಿಟಿಯನ್ನು ಮಾಡಿದ್ದರು. ರಾಜ್ಯಮಟ್ಟದಲ್ಲಿ ಚರ್ಚೆಯಾಯಿತು. ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಲೆಯನ್ನು ನಿಗದಿ ಮಾಡುವಂಥ ಪ್ರಾಮಾಣಿಕವಾದ ಪ್ರಯತ್ನ ಈ ರಾಷ್ಟ್ರದಲ್ಲಿ ಎಲ್ಲೂ ನಡೆಯಲಿಲ್ಲ. ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಇದ್ದಾಗಲೂ ನಡೆಯಲಿಲ್ಲ, ಕಾಂಗ್ರೆಸ್ ಸರ್ಕಾರ ಇದ್ದಾಗಲೂ ನಡೆಯಲಿಲ್ಲ, ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಸರ್ಕಾರ ಇದ್ದಾಗಲೂ ಕನಿಷ್ಟ ಬೆಲೆಯನ್ನು ನಿಗದಿ ಮಾಡುವಂಥ ಪ್ರಯತ್ನ ನಡೆಯಲಿಲ್ಲ. ಸುಮ್ಮನೆ ಏನೋ ಲಘುವಾಗಿ ಮಾತನಾಡುವುದರಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ. You fix the floor price. You establish a mechanism which can automatically take care of market forces. ಈ ದೇಶದಲ್ಲಿ ಯಾವಯಾವುದಕ್ಕೋ ಸಾವಿರ ಕೋಟಿ ರೂಪಾಯಿಗಳ ಲೆಕ್ಕ ಹೇಳುವುದಾದರೆ ಆವರ್ತ ನಿಧಿ ಎಂದು ಕೇವಲ 75 ಕೋಟಿ ರೂಪಾಯಿ ಇದಕ್ಕೆ ಏಕೆ? ಬೇಡವೇ ಬೇಡ. ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಹೀಗೆ ಎಲ್ಲರೂ ಸೇರಿ ಭಾರತ ದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಒಂದು ನಿಧಿಯನ್ನು ಸ್ಥಾಪನೆ ಮಾಡಲಿ.

ಚೇರ್‌ಮನ್: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಪುನಃ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವನ್ನು ಮಧ್ಯಾಹ್ನ 1-45 ಗಂಟೆಗೆ ಮುಂದೂಡಲ್ಪಟ್ಟು ಪುನಃ 3-00 ಗಂಟೆ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು 3-10ಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ.ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಶ್ರೀ ವೈ.ಕೆ.ರಾಮಯ್ಯ(ಹುಲಿಯೂರು ದುರ್ಗ): ಸನ್ಮಾನ್ಯ ಅಧ್ಯಕ್ಷರೆ ಕರ್ನಾಟಕದಲ್ಲಿ ಮಳೆ ಅಭಾವದಿಂದ ಉಂಟಾಗಿರುವ ಕೆಟ್ಟ ಪರಿಸ್ಥಿತಿ, ಅದರಿಂದಾಗತಕ್ಕಂಥ ದುಷ್ಪರಿಣಾಮಗಳ ಬಗ್ಗೆ ಸದನದಲ್ಲಿ ನಾವು ಚರ್ಚಿಸುತ್ತಿದ್ದೇವೆ. ತಮ್ಮ ಅನುಪಸ್ಥಿತಿಯಲ್ಲಿ ನಾನು ಹೇಳುತ್ತಿದ್ದೆ, ಮಳೆ ಬಂದಿದೆ, ಮಳೆ ಬಂದೀ ಬರ ಬಂದಿದೆ, ಬರ ಬರಲಿಕ್ಕೆ ಸರ್ಕಾರ ಯಾವ ದೃಷ್ಟಿಯಿಂದ ಕಾರಣವಲ್ಲ, ಮಳೆ ಬಾರದೆ ಇರುವುದಕ್ಕೆ ಬಹಳ ಪ್ರಮುಖವಾದ ಕಾರಣ ಮಳೆ ಬರಲಿಕ್ಕೆ ಇದ್ದಂಥ ಪರಿಸ್ಥಿತಿಯನ್ನು, ಪರಿಸರವನ್ನು ನಾವು ನಾಶ ಮಾಡಿರುವುದರಿಂದ ಇತ್ತೀಚಿನ ದಿವಸಗಳಲ್ಲಿ ಕರ್ನಾಟಕದಲ್ಲಿ ಅಷ್ಟೇ ಏಕೆ ಭಾರತವೂ ಒಳಗೊಂಡಂತೆ ಇಡೀ ಪ್ರಪಂಚದಲ್ಲಿ ಮಳೆ ಬೀಳುವುದು ಕಡಿಮೆಯಾಗಿದ್ದು ನೀರಿನ ಲಭ್ಯತೆ ಕಡಿಮೆಯಾಗುತ್ತಿದೆ. ಆದ್ದರಿಂದ, ಮಳೆ ಬೀಳದಿರುವುದಕ್ಕೆ ಅಥವಾ ಮಳೆ ಬೀಳದೆ ಅದರಿಂದಾಗತಕ್ಕಂಥ ದುಷ್ಪರಿಣಾಮಗಳಿಗೆ ಯಾವುದೇ ಸರ್ಕಾರವನ್ನು ಅಥವಾ ಯಾವುದೇ ರಾಜಕಾರಣಿಯನ್ನು ದೂಷಿಸುವುದಕ್ಕೆ ಅರ್ಥವಿಲ್ಲ. ಆಗಿರುವಂಥ ದುಷ್ಪರಿಣಾಮಗಳನ್ನು ನಿವಾರಿಸುವುದಕ್ಕೆ ನಿಭಾಯಿಸುವುದಕ್ಕೆ ಸರ್ಕಾರದ ನಿಜವಾದ ವಿಫಲತೆ ಏನಾದರೂ ಇದ್ದರೆ, ಈಗ ತಾನೆ ಬರ ಪ್ರಾರಂಭವಾಗಿದೆ, ನಾವು ಎಲ್ಲರೂ ಸೇರಿ ಇದನ್ನು ನಿಭಾಯಿಸಲಿಕ್ಕೆ ಏನೇನು ಮಾಡಬಹುದು ಎನ್ನುವ ಸೂಚನೆಯನ್ನು ಕೊಡಬಹುದು ಎಂದು ನಾನು ಹೇಳುತ್ತಿದ್ದೆ. ಮಳೆ ಬಾರದೆ ಇರುವುದಕ್ಕೆ ಏನು ಕಾರಣ? ಇದಕ್ಕೆ ಏನು ಪರಿಹಾರ ಎನ್ನುವುದನ್ನು ಕೇಳಬೇಕಾಗಿದೆ. ನಮ್ಮ ರೈತನು ಬೆಳೆದಂಥ ಬೆಳೆಗೆ ಬೆಲೆ ಕುಸಿತವಾಗಿರುವುದು ಕೂಡ ನಮ್ಮ ರೈತನ ಆತ್ಮಹತ್ಯೆಗೆ ಹಾಗೂ ಅವನ ದುಸ್ಥಿತಿಗೆ ಕಾರಣವಾಗಿದೆ ಎಂದು ನಾನು ಬಲವಾಗಿ ನಂಬಿಕೊಂಡಿರುವವನು ಹಾಗೂ ಖಚಿತವಾದ ಅಭಿಪ್ರಾಯವನ್ನು ಇಟ್ಟುಕೊಂಡಿರುವವನು. ಬೆಳೆ ರೋಗರುಜಿನಗಳಿಂದ ನಾಶವಾಗುವುದರ ಜೊತೆಗೆ ಬೆಳೆದಂಥ ಬೆಳೆಗೆ ನ್ಯಾಯವಾದ ಬೆಲೆ ಸಿಗದಿರುವುದು ಈ ರೈತನ ದುಸ್ಥಿತಿಗೆ ಕಾರಣವಾಗಿದೆ. ಇತ್ತೀಚಿನ ದಿವಸಗಳಲ್ಲಿ ರೈತರ ಆತ್ಮಹತ್ಯೆಯ ಬಗ್ಗೆ ಆಗ್ಗಾಗ್ಗೆ ಪತ್ರಿಕೆಗಳಲ್ಲಿ ಬರುತ್ತಿವೆ. ನಾನು ಈಗಾಗಲೇ ಹೇಳಿದ ಹಾಗೆ ರೈತರ ಬಗ್ಗೆ, ನಮಗೆಲ್ಲಾ ರೈತ ನಾಟಕದ ವಸ್ತುವಾಗಿದ್ದಾನೆ. ಆದರೆ ನನಗಂತೂ ಅಲ್ಲ. ರೈತರ ಕಷ್ಟಕಾರ್ಪಣ್ಯಗಳ ಬಗ್ಗೆ ಮತ್ತು ಗ್ರಾಮೀಣ ಜನರ ಬದುಕಿನ ಬಗ್ಗೆ ಮತ್ತು ಅವರ ದುಃಖದುಮ್ಮಾನಗಳ ಬಗ್ಗೆ ಅಲ್ಲಿಂದ ಬಂದಂಥ ನಮಗೆ ಗೊತ್ತಿರುತ್ತದೆ. ಆದರೆ ಇದು ಮುಂದಿನ ಜನಾಂಗದವರಿಗೆ ಗೊತ್ತಿಲ್ಲ. ಇದು ನಿಜವಾಗಿಯೂ ನಮ್ಮ

ನಡವಳಿಕೆಗಳ ಮೇಲೆ ಪರಿಣಾಮ ಬೀರುತ್ತದೆ. ಇವತ್ತಿನದಿವಸ ಯಾವುದೊಂದು ಆಡಳಿತ ಪಕ್ಷದಲ್ಲಿದ್ದೇವೆ ಎನ್ನತಕ್ಕಂಥ ಕಾರಣಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಒಂದು ಪರಿಸ್ಥಿತಿಯನ್ನು ನಾವು ಮೆಚ್ಚುಕೊಳ್ಳುವುದಾಗಲಿ ಅಥವಾ ಪ್ರತಿಪಾದನೆ ಮಾಡುವುದಾಗಲಿ ಅಥವಾ ಇದರಿಂದ ಖುಷಿ ಪಡತಕ್ಕಂಥ ಕೆಟ್ಟ ಮನಸ್ಥಿತಿ ನಮ್ಮದಲ್ಲ. ಆತ್ಮಹತ್ಯೆ ಸಂದರ್ಭದಲ್ಲಿ ಜನರ ನಾನಾ ವಿಧವಾದ, ವಿಚಿತ್ರ ಸ್ವಭಾವಗಳನ್ನು ಕಂಡಂಥ ನಮಗೆ ಒಂದು ಅನುಮಾನ ಬರುತ್ತದೆ. ಅದೇನೆಂದರೆ, ಮನುಷ್ಯ ಎಷ್ಟು ಕೆಡಬಾರದಾಗಿತ್ತೋ ಅದಕ್ಕಿಂತ ಹೆಚ್ಚಿಗೆ ಕೆಟ್ಟಿದ್ದಾನೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಏನು ಮಾಡುವುದಕ್ಕೆ ಆಗುವುದಿಲ್ಲ ರೈತ ಸತ್ತೆ ಸಾಯುತ್ತಾನೆ ಎನ್ನತಕ್ಕಂಥ ಪರಿಸ್ಥಿತಿ ಇದ್ದಾಗ ಆತನ ಬಾಯಿಗೆ ವಿಷ ತುರುಕಿ ವಿಷ ಕುಡಿದು ಸತ್ತನೆಂದು ಸರ್ಟಿಫಿಕೇಟ್ ಪಡೆದುಕೊಂಡು, ಹಣ ಪಡೆದುಕೊಂಡಿರತಕ್ಕಂಥ ಸ್ನೇಹಿತರು ನಮ್ಮಲ್ಲಿ ಇದ್ದಾರೆ. ಇವತ್ತಿನ ದಿವಸ ಹಣಕ್ಕಾಗಿ ಮತ್ತು ಬದುಕಿಗಾಗಿ ಜನರು ಅನುಸರಿಸತಕ್ಕಂಥ ವಿಧಿವಿಧಾನಗಳನ್ನು ನೋಡಿದಾಗ ಈ ರೀತಿ ಘಟನೆಗಳು ಆಗುವುದಿಲ್ಲವೆಂದು ನಾವು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇನ್ನು ಆರು ತಿಂಗಳಲ್ಲಿ ಸೇವೆಯಿಂದ ನಿವೃತ್ತಿ ಹೊಂದಲಿರುವ ಅಪ್ಪ ಖಾಯಿಲೆ ಬಿದ್ದಾಗ ಸಿ.ಜಿ. ಮೇಲೆ ಕೆಲಸ ಸಿಗುತ್ತದೆ ಎಂಬ ಆಸೆಯಿಂದ ಅಪ್ಪನನ್ನೇ ಸಾಯಿಸುವಂಥ ಮಕ್ಕಳನ್ನು ಕೂಡ ನಾವು ಜೀವನದಲ್ಲಿ ನೋಡಿದ್ದೇವೆ. ಇವತ್ತಿನ ದಿವಸ ಯಾವುದೋ ಒಂದು ಪಕ್ಷದಲ್ಲಿದ್ದವರ ಬಗ್ಗೆ ನಮ್ಮ ಸ್ನೇಹಿತರು ನಗುತ್ತಾ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಗಂಡ ಸತ್ತಾಗ ಹೆಂಡತಿಗೆ ಪಕ್ಷದಲ್ಲಿ ಟಿಕೆಟ್ ಕೊಡುತ್ತಾರೆ, ಆ ನಂತರ ಅವರೂ ಕೂಡ ಅಧಿಕಾರಕ್ಕೆ ಬರುವುದನ್ನು ನಾವು ಇದುವರೆಗೆ ಸಿನಿಮಾದಲ್ಲಿ ನೋಡುತ್ತಿದ್ದೆವು, ಇನ್ನು ಮುಂದೆ ನಮ್ಮ ಜೀವನದಲ್ಲಿ ನೋಡುವಂಥ ಕಾಲ ಬರುತ್ತದೆ. ಆದ್ದರಿಂದ ಈ ಕೆಲಸವನ್ನು ಮಾಡುವುದು ಬೇಡ. ಈ ಒಂದು ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಸರ್ಕಾರ ಇದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡಿದೆ. ಯಾರೋ ಒಬ್ಬ ವಿಷ ಕುಡಿದು ಸತ್ತಾಗ, ವಿಚಾರಣೆ ಮಾಡದೇ ಅಥವಾ ಆಗ ನಿಜವಾಗಿಯೂ ಬೆಲೆ ಕಡಿಮೆ ಆಗಿರುವುದರಿಂದಲೇ ಸತ್ತನೆಂದು ಪುರಾವೆ ಇಲ್ಲದೆ ಆತನಿಕೆ ಪರಿಹಾರ ಕೊಡುವಂಥ ಪದ್ಧತಿ ಸರಿಯಲ್ಲ. ಆತನಿಗೆ ಪರಿಹಾರ ಕೊಡುವುದಕ್ಕಿಂತ ಮೊದಲು ವಿಚಾರಣೆ ಮಾಡಿ ಕೊಡಬೇಕೆಂದು ಸರ್ಕಾರ ನಿಲುವನ್ನು ತೆಗೆದುಕೊಂಡಿದೆ. ನಾನು ಈಗಾಗಲೇ ಹೇಳಿದ ಪ್ರಕಾರ ರೈತರ ದುಸ್ಥಿತಿ ಮತ್ತು ಕೆಟ್ಟ ಪರಿಸ್ಥಿತಿಗೆ ಬೆಲೆ ಇಳಿಕೆಯೇ ಮುಖ್ಯ ಕಾರಣವೆಂದು ನಾನು ಖಚಿತವಾಗಿ ಹೇಳುತ್ತೇನೆ. ಇದಕ್ಕೆ ಬೇರೆ ಯಾವ ಅನುಮಾನವೇ ಇಲ್ಲ. ಇವತ್ತಿನ ದಿವಸ 5 ಸಾವಿರ ತೆಂಗಿನಕಾಯಿ ಮಾರಿದರೆ ಕೇವಲ 7.5 ಸಾವಿರ ರೂಪಾಯಿ ಮಾತ್ರ ಕೈಗೆ ಸಿಗತಕ್ಕಂಥ ಪರಿಸ್ಥಿತಿ ಬಂದಿದೆ. ವಿರೋಧಪಕ್ಷದ ಸ್ನೇಹಿತರು ಈ ಪರಿಸ್ಥಿತಿ ಬಗ್ಗೆ ಮಾತನಾಡಿದ್ದಾರೆ. ಇವತ್ತು

ಬೆಳಿಗ್ಗೆ ನಾನು ಸ್ವಲ್ಪ ಉದ್ವೇಗಗೊಂಡರೂ ಕೂಡ ಈಗ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಕೊಡುವುದು ಮತ್ತು ತೆಗೆದುಕೊಳ್ಳುವುದು ಇರಬೇಕಾಗುತ್ತದೆ. ಈ ಸದನದ ಪ್ರಾರಂಭವಾದಗಿನಿಂದಲೂ ನೀವು ರಾಜಕೀಯ ಚದುರಂಗ ಆಟವನ್ನು ಆಡುತ್ತಿದ್ದೀರೆಂದು ಒಬ್ಬ ಸದಸ್ಯರು ಹೇಳುತ್ತಲೇ ಬರುತ್ತಿದ್ದಾರೆ. ನೆನ್ನೆ ದಿವಸ ಒಬ್ಬ ಸದಸ್ಯರು ಏನು ಹೇಳಿದರೆಂದರೆ, ನೀವು ಅಧಿಕಾರದಲ್ಲಿ ಇರುವುದಕ್ಕೆ ನಾಲಾಯ್ಕು ಎಂದು ಹೇಳಿದರು. ಈ ರಾಜ್ಯದ ರೈತರು ನಾಶವಾಗುವುದಕ್ಕೆ ನೀವೇ ಕಾರಣಕರ್ತರೆಂದು ಹೇಳಿದರು. ಈ ಎಲ್ಲಾ ಸಂದರ್ಭದಲ್ಲಿ ಯಾವ ಪ್ರಚೋದನೆಗೆ ಒಳಗಾಗದೆ ನಾನು ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಂಡಿದ್ದೆನು. ಆದರೆ, ರೈತರ ದುಸ್ಥಿತಿಗೆ, ಕೆಟ್ಟ ಪರಿಸ್ಥಿತಿಗೆ ಆಗಿರತಕ್ಕಂಥ ಕಾರಣಗಳಲ್ಲಿ ಬಹಳ ಪ್ರಮುಖವಾದಂಥದ್ದು ಯಾವುದೆಂದರೆ, ಕೇಂದ್ರ ಸರ್ಕಾರ ತೆಗೆದುಕೊಂಡಿರತಕ್ಕಂಥ ಆಮದು ನೀತಿ ಎಂದು ನಾನು ಹೇಳಿದಾಗ ಅದನ್ನು ಸಹಿಸಿಕೊಳ್ಳುವುದಕ್ಕೆ ನಿಮಗೆ ಶಕ್ತಿ ಇಲ್ಲದೇ ಇದ್ದಾಗ, ಸ್ವಲ್ಪ ತಮ್ಮ ಇತಿಮಿತಿಗಳು ಹದ್ದು ಮೀರಿ, ನಾನು ಪಕ್ಷಾಂತರ ಮಾಡಿ ಹೋಗಿರುವುದರಿಂದ ಇದನ್ನು ಹೇಳುವುದಕ್ಕೆ ನಿಮಗೆ ಯಾವ ಅಧಿಕಾರ ಇದೆ, ನಿಮ್ಮ ಪುರಾಣ ಕೇಳುವುದಕ್ಕೆ ನಾವು ಬಂದಿಲ್ಲವೆಂದು ಲಘುವಾಗಿ ಯಾರೊ ಒಬ್ಬ ಸದಸ್ಯರು ಹೇಳುವುದಾದರೆ ಇದನ್ನು ಕೇಳಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ನನಗೆ ಸಂಯಮ ಇಲ್ಲ. ಇದು ನಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ಇದೆ. ನೀವು ಸಂಯಮವನ್ನು ಕಳೆದುಕೊಳ್ಳುತ್ತೀರೆಂದು ನನ್ನ ಸ್ನೇಹಿತರು ಹೇಳುತ್ತಾರೆ. ಇದು ಅದೃಷ್ಟವೊ ಅಥವಾ ದುರಾದೃಷ್ಟವೊ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಈ ಸದನದಲ್ಲಿ ಮತ್ತೆ ಮತ್ತೆ ಇಂಥ ವಿಷಯಗಳನ್ನು ಪ್ರಸ್ತಾಪ ಮಾಡುವುದು ಬೇಡ. ಇದರಿಂದ ಏನು ಪ್ರಯೋಜನವಾಗುವುದಿಲ್ಲ. ಇದು ಯಾರೋ ಒಬ್ಬ ವ್ಯಕ್ತಿಯ ಮನಸ್ಸನ್ನು ನೋಯಿಸುವುದರಿಂದ ಮತ್ತು ವ್ಯಕ್ತಿಯ ಘನತೆಗೆ ಕುಂದು ತರುವುದರಿಂದ ನಾವು ದೊಡ್ಡ ಮನುಷ್ಯರಾಗುತ್ತೇವೆಂದು ಅವರು ತಿಳಿದುಕೊಂಡಿದ್ದರೆ ಅದು ಸರಿಯಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ತಮ್ಮ ಅಪ್ಪಣೆ ಮೇರೆಗೆ ಒಂದು ಸ್ಪಷ್ಟೀಕರಣ ಹೇಳಬೇಕಾಗಿದೆ. ಇತ್ತೀಚೆಗೆ ಪಕ್ಷ ಸೇರಿಕೊಂಡವರ ವಿಷಯವಾಗಿ ನಾನು ಹೇಳುತ್ತಿಲ್ಲ. ಉಳಿದ ಎಲ್ಲಾ ವಿಷಯಗಳ ಬಗ್ಗೆ ಹೇಳುವುದಾದರೆ, ಬಹುತೇಕ ನಮ್ಮ ರಾಜಕಾರಣಿಗಳು ಪಕ್ಷಾಂತರಿಗಳು. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ಇದು ಬೇಕಾದರೆ ಅವರು ಮಾಡಿಕೊಳ್ಳಲಿ. ಪ್ರಜಾಪ್ರಭುತ್ವದಲ್ಲಿ ಪಕ್ಷಾಂತರ ಒಂದು ಸಹಜ ಪ್ರಕ್ರಿಯೆ ಆಗಿದೆ. ಇವತ್ತಿನ ದಿವಸ ದೀಪದ ಗುರುತು, ಕಮಲ, ಚರಕ, ನೇಗಿಲು ಹೊತ್ತ ರೈತ, ಚಕ್ರದ ಗುರುತು ಹಾಗೂ ಟ್ರಾಕ್ಟರ್ ಗುರುತು ಇಟ್ಟುಕೊಂಡಿರತಕ್ಕಂಥ ಅನೇಕ ಪಕ್ಷಗಳಿವೆ. ನಾನು ಈಗಾಗಲೇ ಹೇಳಿದ ಪ್ರಕಾರ ಇತ್ತೀಚೆಗೆ ಪಕ್ಷ ಸೇರಿ ಕೊಂಡವರಿಗೆ ಪಕ್ಷಾಂತರ ಆಗದೇ ಇರಬಹುದು. ಆದರೆ ಮೂಲವನ್ನು ನೋಡುವುದಕ್ಕೆ ಹೋದರೆ ಇದರಲ್ಲಿ ಕೆಲವರನ್ನು ಬಿಟ್ಟರೆ, ಬಹುತೇಕ

ರಾಜಕಾರಣಿಗಳು ಈ ರಾಷ್ಟ್ರದಲ್ಲಿ ವಿಧಿ ಇಲ್ಲದೇ ಅನೇಕ ಕಾರಣಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಪಕ್ಷಾಂತರಿಗಳಾಗಿದ್ದಾರೆ. ಆದ್ದರಿಂದ ಯಾವುದೊಂದು ಲಾಭಕ್ಕಾಗಲಿ ಅಥವಾ ಹಣ, ಅಧಿಕಾರದ ಆಸೆಗಾಗಿ ನಾವು ಪಕ್ಷಾಂತರ ಮಾಡಿದ್ದೇವೆಂದು ನನ್ನ ಸ್ನೇಹಿತರು ಹೇಳುವಂಥದನ್ನು ನಾನು ಬಲವಾಗಿ ಖಂಡಿಸುತ್ತೇನೆ. ಮಾನ್ಯ ಸದಸ್ಯರು ಹೇಳಿರತಕ್ಕಂಥ ಮಾತನ್ನು ಕಡತದಿಂದ ತೆಗೆಸಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ಋಣಿಯಾಗಿದ್ದೇನೆ. ಈ ಎಲ್ಲಾ ದುಷ್ಪರಿಣಾಮಗಳಿಗೆ ಕಾಂಗ್ರೆಸ್‌ನವರೇ ಕಾರಣ ಕರ್ತರೆಂದು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಲಾಗಿದೆ. ಇದನ್ನು ರೆಕಾರ್ಡ್ಸ್‌ನಲ್ಲಿ ಸರಿಪಡಿಸಬೇಕೆಂದು ಈಗಾಗಲೇ ಹೇಳಲಾಗಿದೆ. ಕಾಂಗ್ರೆಸ್ ಸರ್ಕಾರ ಇರುವಾಗ ಈ ನೀತಿಯನ್ನು ಅನುಸರಿಸಲಾಯಿತೆಂದು ಸಹ ಹೇಳಿದ್ದಾರೆ. ಇದರ ಮೂಲದ ಬಗ್ಗೆ ಹೆಚ್ಚು ಕಡಿಮೆ ಹೇಳುವುದಕ್ಕೆ ಶಕ್ತಿ ಇದ್ದರೂ ಕೂಡ ಹೇಳುವುದಕ್ಕೆ ಸಮಯ ಇಲ್ಲ. ಒಂದೇ ಸಾರಿ ಫ್ರೀ ಟ್ರೇಡ್ ನಮ್ಮ ದೇಶದಲ್ಲಿ ಪ್ರಾರಂಭವಾಗಲಿಲ್ಲ. ಲಿಬರಲೈಜೇಶನ್, ಗ್ಲೋಬಲೈಜೇಷನ್ ಮತ್ತು ಗ್ಯಾಟ್ ಇವೆಲ್ಲವೂ ಇದ್ದರೂ ಸಹ ಯಾವುದೇ ಒಂದು ದೇಶದಿಂದ ಯಾವ ವಸ್ತುವನ್ನು ಎಷ್ಟು ಬೇಕಾದರೂ ನಮ್ಮ ದೇಶಕ್ಕೆ ತರಿಸಿಕೊಳ್ಳುವುದಕ್ಕೆ ಸ್ವಾತಂತ್ರ್ಯ ಇರಲಿಲ್ಲ. I agree for the sake of arguments. It is true that the Congress Government has taken a decision to liberalise trade in 1991. ಆದರೆ, ಈಗ ಬಂದಂಥ ಕೇಂದ್ರ ಸರ್ಕಾರ ಇದನ್ನು ಸಂಪೂರ್ಣವಾಗಿ ತೆಗೆದು ಹಾಕಿ, ಯಾವ ವಸ್ತುವನ್ನಾದರೂ ಯಾವುದೇ ರಾಷ್ಟ್ರದಿಂದ ತರಿಸಿಕೊಳ್ಳುವಂಥ ನೀತಿಯಿಂದ ಭಾರತ ದೇಶದ ಕೃಷಿ ಉದ್ಯಮಗಳು ಮತ್ತು ಕೈಗಾರಿಕೆಗಳ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಿದೆ. ಕೃಷಿ ಉದ್ಯಮದಲ್ಲಿ ತೊಡಗಿರತಕ್ಕಂಥ ರೈತರಿಗೆ ನಷ್ಟವಾಗುತ್ತಿದೆ. ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಇದು ಆಗಿರುವುದರಿಂದ ಇಷ್ಟೆಲ್ಲಾ ತೊಂದರೆಗಳಾಗಿವೆ ಎಂದು ಈ ಸದನದಲ್ಲಿ ಸುಮಾರು 100 ಬಾರಿ ಅನೇಕ ಸದಸ್ಯರು ಪ್ರಸ್ತಾಪ ಮಾಡಿರಬಹುದು. But all the successive governments since 1991, are non-Congress Governments headed by different individuals. ನಾನು ಹೇಳಿರತಕ್ಕಂಥ ವಾಕ್ಯದಲ್ಲಿ, ಏನಾದರೂ ತಪ್ಪು ಇದ್ದರೆ, ಅದರ ಬಗ್ಗೆ ಯಾರು ಬೇಕಾದರೂ ಪ್ರಶ್ನೆ ಮಾಡಬಹುದು. 1991ರಿಂದ ಇಲ್ಲಿಯವರೆಗೆ ಅಂದರೆ ಒಂದು ದಶಕದವರೆಗೆ ಈ ರಾಷ್ಟ್ರದಲ್ಲಿ ಅಧಿಕಾರ ಮಾಡಿದವರು ಯಾರು? ಕಾಂಗ್ರೆಸ್ ಸರ್ಕಾರದವರು ಅಧಿಕಾರ ಮಾಡಿದ್ದಾರೆಯೆ? ಇದರಿಂದ ಏನು ಪ್ರಯೋಜನವಾಗುವುದಿಲ್ಲವೆಂದು ನಾನು ಪ್ರಾರಂಭದಲ್ಲಿಯೇ ಪ್ರಸ್ತಾಪ ಮಾಡಿದ್ದೆನು. Who prevented you from removing the bad decisions that had been taken by the Congress Government? ಈ ಸತ್ಯವನ್ನು ಅರಗಿಸಿಕೊಳ್ಳುವುದಕ್ಕೆ ಆಗದೇ ಇದ್ದರೆ ಸುಮ್ಮನೆ ತೋಳು ಉದ್ದವಿದೆ ಎಂದು

ನನ್ನ ಮೇಲೆ ತಿರುಗಿದರೆ ಆಗುವುದಿಲ್ಲ. ನನ್ನ ಹತ್ತಿರವೂ ಕೂಡ ಅಷ್ಟೇ ಉದ್ದವಾದ ತೋಳುಗಳಿವೆ. 1991ರಲ್ಲಿ ಕಾಂಗ್ರೆಸ್ ಸರ್ಕಾರ ತೆಗೆದುಕೊಂಡಿರತಕ್ಕಂಥ ತೀರ್ಮಾನವನ್ನು ಒಂದು ದಶಕಗಳ ಕಾಲದಿಂದ ಅಧಿಕಾರ ಮಾಡಿದಂಥ Non-Congress ಸರ್ಕಾರವು ಇದನ್ನು ತೆಗೆದು ಹಾಕುವುದಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ? ಈ ಮಾತನ್ನು ಈ ಸದನದಲ್ಲಿ ನಾನು ಅನೇಕ ಬಾರಿ ಹೇಳಿದ್ದೇನೆ. ಆದರೂ ಸಹ ಅವರ ತಲೆಗೆ ಹೋಗುತ್ತಿಲ್ಲ. ಆದ್ದರಿಂದ ಇದನ್ನು ಮತ್ತೊಂದು ಬಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮನುಧರ್ಮ ಶಾಸ್ತ್ರದಲ್ಲಿ ಏನು ಹೇಳಲಾಗಿದೆ ಎಂದರೆ, ''ಪಂಚಮ ಶಿಶು ಒಂದು ನೀರಿನಲ್ಲಿ ಮುಳುಗುತ್ತಿದೆ, ಅದನ್ನು ನೀನು ಮುಟ್ಟಿದರೆ ಧರ್ಮ ವಿರೋಧ'' ನೀನು ಆ ಶಿಶುವನ್ನು ಮುಟ್ಟಿದರೆ ನಿನ್ನ ಧರ್ಮ ಹೊರಟು ಹೋಗುತ್ತದೆಂದು ಮತ್ತು ಜಾತಿ ಹೊರಟು ಹೋಗುತ್ತದೆಂದು ಮನುಧರ್ಮ ಶಾಸ್ತ್ರದಲ್ಲಿ ಈಗಾಗಲೇ ಬರೆದು ಇಡಲಾಗಿದೆ. ಇದಕ್ಕೆ ಕುವೆಂಪುರವರು ಹೇಳುತ್ತಾರೆ, ಪಂಚಮರ ಶಿಶು ಒಂದು ನೀರಿನಲ್ಲಿ ಮುಳುಗುತಿರೆ ಅದನ್ನು ಮುಟ್ಟಿದರೆ ಧರ್ಮಕ್ಕೆ ವಿರೋಧ ಎನ್ನುವುದಾದರೆ, ಅವರು ಮುಂದಕ್ಕೆ ಹೇಳುತ್ತಾರೆ. ಮನು ಇದನ್ನು ಹೇಳಿರಲಾರನೊ ಅಯ್ಯಯ್ಯೊ, ಅಕಸ್ಮಾತ್ ಇದನ್ನು ಹೇಳಿದ್ದರೆ, ಆ ಮನುಧರ್ಮ ಶಾಸನ ಸುಟ್ಟು ಬಿಸುಡಾಚೆ, ಹಾಗೆಯೇ ಡಾ:ಮನಮೋಹನಸಿಂಗ್‌ರವರು ಕೆಟ್ಟ ಪದ್ಧತಿಯನ್ನು ಅನುಸರಿಸಿದ್ದರೆ, ಅವರು ಕೆಟ್ಟ ತೀರ್ಮಾನವನ್ನು ತೆಗೆದುಕೊಂಡಿದ್ದರೆ, ಈ 10 ವರ್ಷಗಳು ಆಡಳಿತವನ್ನು ಮಾಡಿದಂಥ ಕಾಂಗ್ರೆಸ್ಸೇತರ ಸರ್ಕಾರಗಳು ಆ ತೀರ್ಮಾನವನ್ನು ಸುಟ್ಟು ಯಮುನಾ ನದಿಗೆ ಬಿಸಾಕಲು ಯಾರು ಅಡ್ಡಿ ಬಂದಿದ್ದರು? ಆದ್ದರಿಂದ ನಿಮ್ಮ ಸರ್ಕಾರವೇ ಹೊಣೆ, ನೀವೇ ಕಾರಣರು ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಡಾ:ಮನಮೋಹನಸಿಂಗ್‌ರವರು ತೆಗೆದುಕೊಂಡಿರುವ ತೀರ್ಮಾನದಿಂದ ಎನ್ನುವ ಇಲ್ಲದ ಸಲ್ಲದ ಆರೋಪವನ್ನು ಮಾಡುವುದು ಬಿಟ್ಟು, ಯಾರು ಮಾಡಿದರು ಎನ್ನುವುದಕ್ಕಿಂತ ಹೆಚ್ಚಾಗಿ ಇದಕ್ಕೆ ಏನು ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡುವುದು ಉತ್ತಮವೆಂದು ನಮ್ಮ ಸ್ನೇಹಿತರಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಬೆಳಿಗ್ಗೆ ಒಂದು ಮಾತನ್ನು ಹೇಳಿದರು, ಇದು ರಾಜಕೀಯದ ಒಂದು ಚದುರಂಗದಾಟ, ಯಾವುದು ರಾಜಕೀಯದ ಚದುರಂಗದಾಟ, ನಾನು ಒತ್ತಿ ಒತ್ತಿ ಹೇಳಬೇಕಾಗುತ್ತದೆ. ರೈತರಿಗೆ ಬಡ್ಡಿ ಮನ್ನಾ ಮಾಡುವುದು ಬೇಡ, ನಿಮ್ಮ ಅನುದಾನ ಬೇಡ. ಮಾನ್ಯ ಎಸ್.ಎಸ್.ಪಾಟೀಲರೊಬ್ಬರಾದರೂ ಇದನ್ನು ಒಪ್ಪಿಕೊಳ್ಳುತ್ತಾರೆ. ನಿಮ್ಮ ಭಿಕ್ಷೆ ನಮ್ಮ ರೈತರಿಗೆ ಬೇಡ, ನಾವು ನಿಮ್ಮನ್ನು ಏನೂ ಕೇಳುವುದಿಲ್ಲ. ನಾವು ಬೆಳೆದಂಥ ರೇಷ್ಮೆಗೆ ಒಳ್ಳೆಯ ಬೆಲೆಯನ್ನು ಕೊಡಿ, ನಮ್ಮ ಟೊಮೆಟೋಗೆ ಒಳ್ಳೆಯ ಬೆಲೆಯನ್ನು ಕೊಡಿ, ನ್ಯಾಯವಾದ ಬೆಲೆಯನ್ನು ಕೊಡಿ ಎಂದು ನಾವು ಕೇಳುತ್ತೇವೆ. ಅದನ್ನು ಕೊಟ್ಟರೆ ನಮಗೆ ನೀವು ಇನ್ನು ಏನನ್ನು ಕೊಡಬೇಡಿ. ರಾಜಕೀಯದ ಚದುರಂಗದಾಟವನ್ನು ಆಡಬೇಡಿ

ಎಂದು ನಮ್ಮ ಸ್ನೇಹಿತರು ಹೇಳಿದರು. ಆಮದನ್ನು ನಿಲ್ಲಿಸುವುದಕ್ಕೆ ಆಗುತ್ತದೋ ಅಥವ ಇಲ್ಲವೋ ಎನ್ನುವುದನ್ನು ಆಮೇಲೆ ನೋಡೋಣ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ಅವರ ಉಪ ನಾಯಕರಿಗೆ ನಾನು ಹೋದ ಸಲ ಮಾತನಾಡುತ್ತಾ ಇರುವ ಸಂದರ್ಭದಲ್ಲಿ, ಅದನ್ನು ಕಳುಹಿಸಿಕೊಟ್ಟಿದ್ದೇನೆ. ಮ್ಯಾಕ್ಸಿಮಮ್ ಇಂಪೋರ್ಟ್ ಡ್ಯೂಟಿ ಅದನ್ನು ಇವರು ಮಾಡುತ್ತಿಲ್ಲ. ನಾವು ಅನುದಾನವನ್ನು ಕೊಟ್ಟಿದ್ದೇವೆ, ನೀವು ಏನೂ ಕೊಡದೆ, ನಿಮ್ಮ ಅನುದಾನವನ್ನು ನಿಲ್ಲಿಸಿಬಿಡಿ. 300 ಪರ್ಸೆಂಟ್ ಆಯಿಲ್ ಸೀಡ್ಸ್ ಮೇಲೆ ತೆರಿಗೆ ಹಾಕುವುದು, ಮತ್ತೆ ಮೆಯ್ಜ್ ಮೇಲೆ 150 ಪರ್ಸೆಂಟ್ ತೆರಿಗೆಯನ್ನು ಹಾಕುವುದು, ಕೊನೆಯ ಪಕ್ಷ ಇದನ್ನಾದರೂ ಮಾಡಿಸಿ. ನಾನು ಇದನ್ನು ಯಾವ ಪಕ್ಷದ ಮೇಲೆ ದೂಷಣೆ ಮಾಡುವುದಕ್ಕೋ ಅಥವಾ ನಿಮ್ಮ ಮೇಲಿನ ಆಕ್ರೋಶಕ್ಕೊ, ಹೊಟ್ಟೆ ಕಿಚ್ಚಿಗೋ ಅಥವಾ ಉದ್ವೇಗಕ್ಕೋ ನಾನು ಇಲ್ಲಿ ಹೇಳುತ್ತಿಲ್ಲ. ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ ಬೇಕಾದ ಮಾರ್ಗಗಳನ್ನು ನಾವು ಕಂಡುಹಿಡಿಯಬೇಕು. ಒಂದು ಉತ್ತಮವಾದ ಮಾರ್ಗ ಯಾವುದೆಂದರೆ, the Central Government can levy maximum import duty to control and to contain import of the agricultural produce liberally. ಅಷ್ಟು ಮಾಡಿಸಿ ನೀವು ಪುಣ್ಯವನ್ನು ಕಟ್ಟಿಕೊಳ್ಳಿ. ನೀವು ನಮ್ಮನ್ನು, ನಾವು ನಿಮ್ಮನ್ನು ತೆಗಳುವುದು ಬೇಡ. ನಮ್ಮಿಬ್ಬರ ಕಿತ್ತಾಟದಲ್ಲಿ ಕೂಸು ಬಡವಾಗುವುದು ಬೇಡ. ನಾನು ಅದಕ್ಕಾಗಿ ನಮ್ಮ ಸ್ನೇಹಿತರಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ನಿಮ್ಮ ಕೇಂದ್ರ ಸರ್ಕಾರದ ವತಿಯಿಂದ ರಾಜ್ಯದ ನಾಡಿನ ರೈತರಿಗೆ ಉತ್ತಮವಾಗಬೇಕೆನ್ನುವ ಅನಿಸಿಕೆ ನಿಮಗೆ ಇದ್ದರೆ ಮ್ಯಾಕ್ಸಿಮಮ್ ಇಂಪೋರ್ಟ್ ಡ್ಯೂಟಿ ಏನಿದೆ, ಅದನ್ನು ಹಾಕಿಸುವುದಕ್ಕೆ ಪ್ರಯತ್ನಪಡಲೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ವಿಫಲವಾಗಿದೆ, ನಾನು ಇದರ ಬಗ್ಗೆ ಆಗಲೇ ಹೇಳಿದ್ದೇನೆ. ಬರದ ಛಾಯೆ ಈಗ ತಾನೇ ಆರಂಭವಾಗಿದೆ. ಜಿಲ್ಲಾಧಿಕಾರಿಗಳು ಸಭೆ ಕರೆದಿಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಜಿಲ್ಲೆಗೆ ಹೋಗಿ ಸಭೆ ಮಾಡಿಲ್ಲ. ನಾವು ಯಾರನ್ನು ದೂಷಿಸುವುದು. ದೇಶದಲ್ಲಿ ಇವತ್ತು ರೈತ ಕುಟುಂಬಕ್ಕೆ ಕರೆಯುವ ಹಸು, ಸಮಾಜಕ್ಕೆ ದುಡಿಯುವ ಎತ್ತು, ರೈತನ ಬಗ್ಗೆ ನಾನು ಬೆಳಿಗ್ಗೆ ಹೇಳಿದ್ದೆ. ಒಂದು ನಾಟಕವನ್ನು ಬರೆಸಿ, ಸ್ಪರ್ಧೆ ಏರ್ಪಾಡು ಮಾಡಬೇಕಾಗುತ್ತದೆ. ರೈತರ ಹಿತವನ್ನು ಕಾಪಾಡುವುದಕ್ಕೆ ಒಂದು ನಾಟಕವನ್ನು ಬರೆಸಬೇಕು. ದುಡಿಯುವ ಎತ್ತು ಅವನ ಕುಟುಂಬಕ್ಕೆ ಒಂದು ಕರೆಯುವ ಹಸು ಎಂದಿನವರೆಗೆ ಹಾಲು ಕರೆಯುತ್ತದೆ ಅಲ್ಲಿಯವರೆಗೆ ಅನ್ನವನ್ನು ಹಾಕುತ್ತಾರೆ ನಂತರ ಆಚೆಗೆ ಓಡಿಸುತ್ತಾರೆ. ಎಲ್ಲಿಯವರೆಗೆ ರೈತನು ಬೆಳೆ ಬೆಳೆದು ದೇಶಕ್ಕೆ ಆಹಾರವನ್ನು ಕೊಡುತ್ತಾನೋ ಅಲ್ಲಿಯವರೆಗೆ ಎತ್ತಿಗೆ ಹುಲ್ಲು ಹಾಕುತ್ತಾರೆ, ನಂತರ ಅದನ್ನು ತೆಗದುಕೊಂಡು ಹೋಗಿ ಕಸಾಯಿ ಖಾನೆಗೆ ಕೊಡುತ್ತಾರೆ. ಆದ್ದರಿಂದ ಈ ದುಡಿಯುವ

ಎತ್ತನ್ನು, ಕರೆಯುವ ಹಸುವನ್ನು ನಮ್ಮ ರಾಜಕೀಯ ಸ್ನೇಹಿತರ ಭಾಷೆಯಲ್ಲಿಯೇ ನಾನು ಹೇಳಿ ಬಿಡುತ್ತೇನೆ. ಚದುರಂಗದಾಟದ ಗೊಂಬೆಯಾಗಿ ಮಾಡಿಕೊಳ್ಳದೆ ಅವನಿಗೆ ನಿಜವಾಗಿ ಸಲ್ಲಬೇಕಾದ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಪ್ರಯತ್ನವನ್ನು ಮಾಡೋಣವೆಂದು ಹೇಳಿ, ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಚರ್ಚೆಯಿಂದ, ಈ ಅನುದಾನಗಳಿಂದ ಬಡ್ಡಿ ಮನ್ನಾ ಮಾಡುವುದರಿಂದ ಯಾವ ಪರಿಹಾರವನ್ನು ನಾವು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಶಾಶ್ವತ ಪರಿಹಾರವನ್ನು ನಾವು ಕೊಡಬೇಕಾದರೆ ರೈತರಿಗೆ ಮೂಲಭೂತವಾಗಿ ನೀರು ಬೇಕು. ನೀರು ಬೇಕಾದರೆ ಮಳೆ ಬರಬೇಕಾಗುತ್ತದೆ. ಕೃಷಿ ಪ್ರಧಾನವಾದಂಥ ಈ ರಾಷ್ಟ್ರದಲ್ಲಿ ಒಂದೊಂದು ತೊಟ್ಟು ಮಳೆ ನೀರನ್ನು ಶೇಖರಿಸಿ ಇಟ್ಟುಕೊಳ್ಳುವಂಥ ಶಾಶ್ವತವಾದ ಪರಿಹಾರ ಬೇಕಾಗುತ್ತದೆ. ಭೂಮಿಯ ಮೇಲಿರುವ ಒಂದು ಕಣ ಮಣ್ಣನ್ನು ಅಲುಗದಂತೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು, ಶಾಶ್ವತವಾದ ಒಂದು ಪರಿಹಾರವನ್ನು ರೈತನಿಗೆ ಒದಗಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳುವ ದಿಸೆಯಲ್ಲಿ ನಾವು ಕೆಲಸವನ್ನು ಮಾಡೋಣವೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸೋಮಶೇಖರವರೇ, ನಾನು ನಿಮ್ಮನ್ನು ಉದ್ದೇಶಿಸಿ ಹೇಳುತ್ತಿಲ್ಲ. ಮಾನ್ಯ ಸದಸ್ಯರುಗಳು ಹೊಸ ಸಲಹೆಗಳನ್ನು ಕೊಡಬೇಕು, ಎಲ್ಲರೂ ರಿಪೀಟ್ ಮಾಡುತ್ತಿದ್ದಾರೆ. ಹೊಸ ಹೊಸ ಸಲಹೆಗಳನ್ನು ಕೊಟ್ಟರೆ ಉತ್ತಮವೆಂದು ಹೇಳುತ್ತೇನೆ. ನಾನು ಇದನ್ನು ಜನರಲ್ಲಾಗಿ ಹೇಳುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ(ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಈ ಇಲಾಖೆಯನ್ನು ನಿಭಾಯಿಸಿರುವುದರಿಂದ ನಾನು ಸುತ್ತಿ ಬಳಸಿ ಮಾತನಾಡುವುದಿಲ್ಲ. ನಾನು ನೇರವಾಗಿ ಕೆಲವು ವಿಚಾರಗಳನ್ನು ಹೇಳುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ರಿಪೀಟ್ ಆಗಿ ಯಾರು ಮಾತನಾಡುತ್ತಿದ್ದರೋ, ಆ ಸಂದರ್ಭದಲ್ಲಿ ತಾವು ಇದನ್ನು ಹೇಳಿದ್ದರೆ ಬಹಳ ಉಚಿತವಾಗುತ್ತಿತ್ತು.

ಅಧ್ಯಕ್ಷರು: ನಾನು ಅಥವಾ ನನ್ನ ಜಾಗದಲ್ಲಿ ಯಾರಿದ್ದರೂ ಅವರಿಂದ ಹೇಳಿಸೋಣ. ಮಾತನಾಡುವ ಸದಸ್ಯರು ಬಹಳ ಜನ ಇರುವುದರಿಂದ, ಸಂಜೆ 6-30ರವರೆಗೆ ಮಾತನಾಡುವುದು. ನಾಳೆ ಪ್ರಶ್ನೋತ್ತರ ವೇಳೆ ಮುಗಿದ ನಂತರ ಸರ್ಕಾರದವರು ಉತ್ತರವನ್ನು ಕೊಡುವ ಬಗ್ಗೆ ತೀರ್ಮಾನವಾಗಿದೆ. ಇವತ್ತು 6-30ರ ಒಳಗಡೆ ಮುಗಿಸಿ ಕೊಟ್ಟರೆ ಬಹಳ ಉತ್ತಮವಾಗುತ್ತದೆ.

+ ಶ್ರೀ ಬಿ.ಸೋಮಶೇಖರ(ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೆ, ಪ್ರತಿ ವರ್ಷ ನಡೆದುಕೊಂಡು ಬಂದ ಹಾಗೆಯೇ ಈ ವರ್ಷ ಕೂಡ ಮುಂಗಾರು ಮಳೆ ವಿಫಲವಾಗಿ ಜನರು, ರೈತರು ಹಾಗೂ ಕೂಲಿಕಾರರು ಎಲ್ಲರೂ ಕಂಗಾಲಾಗಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ರಾಜ್ಯದ 175 ತಾಲ್ಲೂಕುಗಳ ಪೈಕಿ 121 ತಾಲ್ಲೂಕುಗಳಲ್ಲಿ ಇವತ್ತು ಮಳೆ ಬಿದ್ದಿಲ್ಲವೆನ್ನುವ ಅಂಕಿಅಂಶವನ್ನು ನಾವು ತಿಳಿದುಕೊಂಡಿದ್ದೇವೆ. ಈ ವರ್ಷ ಮುಂಗಾರು 70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಬೇಕಾಗಿತ್ತು. ಬರೀ 14-15 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ ಎಂದರೆ, ಕೇವಲ 5 ಪರ್ಸೆಂಟ್ ಬಿತ್ತನೆಯಾಗಿರುವುದನ್ನು ನಾವು ನೋಡಿರುತ್ತೇವೆ. ಇದಕ್ಕೆ ಕಾರಣ, ಶ್ರೀ ವೈ.ಕೆ.ರಾಮಯ್ಯನವರು ಹೇಳಿದ ಹಾಗೆ ಸರ್ಕಾರ ಅಥವಾ ರಾಜಕೀಯ ಪಕ್ಷಗಳು ಅಲ್ಲ, ಇದಕ್ಕೆ ನೈಸರ್ಗಿಕ ಕಾರಣವಿರುತ್ತದೆ. ಆದರೆ ಸರ್ಕಾರದ ಕರ್ತವ್ಯಗಳು ಏನು? ಈ ಜವಾಬ್ದಾರಿಯನ್ನು ಕೇವಲ ನೈಸರ್ಗಿಕಕ್ಕೆ ಹಾಕಿ, ಸರ್ಕಾರ ಕೈ ಕಟ್ಟಿ ಕುಳಿತುಕೊಳ್ಳುವುದಕ್ಕೆ ಸಾಧ್ಯವೇ? ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿ ಅದರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ರೈತ ಏನು ಬಿತ್ತಿದ್ದಾನೆ ಅದು ಬೆಳೆಯಾಗಿಲ್ಲ, ಅದರಿಂದ ಇನ್ನು ಬೇರೆ ಬೇರೆ ಪರಿಣಾಮಗಳು ಆಗಿರುವುದನ್ನು ನಾವು ನೋಡುತ್ತೇವೆ. ಇದು ಒಂದು ಭಾಗದಲ್ಲಿ ಅಲ್ಲ, ಇವತ್ತು ಕರ್ನಾಟಕದಲ್ಲಿ ನಾವು ಒಣಪ್ರದೇಶಗಳನ್ನು 6-7 ಭಾಗಗಳಾಗಿ ವಿಂಗಡಿಸಬಹುದು. ಒಂದು ಪಶ್ಚಿಮ ವಲಯ, ಉತ್ತರ-ಪೂರ್ವ ಒಣ ಪ್ರದೇಶ, ಮಧ್ಯ ಒಣ ಪ್ರದೇಶ, ಮತ್ತು ವರ್ಗಾವಣೆಯಾಗುತ್ತಿರುವ ಒಣ ಪ್ರದೇಶ, ಅಂದರೆ ಕೋಲಾರ, ತುಮಕೂರು, ಬೆಂಗಳೂರು ಇದನ್ನೆಲ್ಲಾ ನಾವು ಪೂರ್ವ ಒಣ ಪ್ರದೇಶವೆಂದು ಕರೆದರೆ, ಬಿಜಾಪುರ, ಕೊಪ್ಪಳ ಮತ್ತು ಬಾಗಲಕೋಟೆ, ಗದಗ್ ಇದನ್ನು ಉತ್ತರ ಒಣ ಪ್ರದೇಶವೆಂದು ಕರೆಯುತ್ತೇವೆ.

3.40 ಪಿಎಂ

ಅಂದರೆ ಈ ಒಂದು ಪ್ರದೇಶ, ಒಂದು ರಾಜ್ಯದ ಒಂದೇ ಭಾಗದಲ್ಲಿ ಸೀಮಿತವಾಗಿಲ್ಲ. ಎಲ್ಲಾ ಭಾಗಕ್ಕೂ ನೀರಾವರಿ ಪ್ರದೇಶವನ್ನು ಬಿಟ್ಟು ಇದನ್ನು ನಾವು ಎಲ್ಲಾ ಭಾಗದಲ್ಲೂ ಕಾಣುತ್ತೇವೆ. ಹಾಸನದಲ್ಲಿ ಸ್ವಲ್ಪಮಟ್ಟಿಗೆ ಒಣಪ್ರದೇಶವಿರುತ್ತದೆ, ನಮ್ಮ ಮಂಡ್ಯ ಜಿಲ್ಲೆಯಲ್ಲಿಯೂ ಸಹ ನಾಗಮಂಗಲ ಇರಬಹುದು, ಮಳವಳ್ಳಿ, ಈ ಕಡೆಯೂ ಸಹ ಒಣಪ್ರದೇಶವನ್ನು ನಾವು ನೋಡುತ್ತಿದ್ದೇವೆ. ಮಳೆಯ ಆಶ್ರಯವನ್ನೇ ಹೊಂದಿರತಕ್ಕಂತಹ ಹೈದರಾಬಾದ್ ಕರ್ನಾಟಕದಲ್ಲಿ ಮುಂಗಾರು ಬೆಳೆ ಶೇಕಡ 70ರಷ್ಟು ಇದನ್ನೇ ಅವಲಂಬಿಸಿರತಕ್ಕಂತಹ ಪ್ರದೇಶವಾಗಿದೆ. ಆ ಜಿಲ್ಲೆಗಳಲ್ಲೂ ಸಹ ಇವತ್ತು ಸಂಪೂರ್ಣವಾಗಿ ವಿಫಲವಾಗಿವೆ, ಇದರಿಂದಾಗಿ ನಾನು ಹೇಳಿದ ಹಾಗೆ, ರೈತನಿಗೆ ನಷ್ಟವಾಗಿರುವ ಜೊತೆಗೆ ಜಾನುವಾರುಗಳ ಪರಿಸ್ಥಿತಿಯ ಮೇಲೆ ಏನು

ಪರಿಣಾಮ ಬೀರಿದೆ, ಕೂಲಿಕಾರರ ಮೇಲೆ ಏನು ಪರಿಣಾಮ ಬೀರಿದೆ, ಇದನ್ನು ನಾವು ನೋಡುವುದಾದರೆ ಜಾನುವಾರುಗಳ ಬಗ್ಗೆ ಬಹುಶಃ ಅದರ ಬಗ್ಗೆ ಯಾರು ಗಮನವನ್ನು ಕೊಟ್ಟಿಲ್ಲವೆಂದು ಕಾಣುತ್ತದೆ. ಎಲ್ಲಿ ಬೆಳೆಗಳು ವಿಫಲವಾಗಿದೆ, ಹಸಿರು ಎಲ್ಲಿ ಬರುವುದಿಲ್ಲವೋ ಅಂತಹ ಕಡೆಗಳಲ್ಲಿ ಪ್ರಾಣಿಗಳ ಮೇಲೆ ದುಷ್ಪರಿಣಾಮವಾಗುತ್ತದೆ. ಅದನ್ನು ನಾವು ಬಹಳ ಪ್ರಾಮುಖ್ಯವಾಗಿ ಪರಿಗಣಿಸಬೇಕು, ಇದರಲ್ಲಿ ಯಾವಯಾವ ಇಲಾಖೆಯವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು, ಸರ್ಕಾರದವರು ಮೊದಲು ಹೇಳಿದ ಹಾಗೆ, ಈ ಬರಗಾಲ ಬಂದಾಗ ಸಮರೋಪಾದಿಯಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತೋ ಅದನ್ನು ಹಾಕಿಕೊಳ್ಳುವುದರಲ್ಲಿ ಸ್ವಲ್ಪ ವಿಫಲವಾಗಿದೆ ಎಂದು ನನ್ನ ಒಂದು ಅನುಭವವಾಗಿದೆ. ಏಕೆಂದರೆ ನಾನು ಎರಡು ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ, ನಾವು ಹಿಂದೆಯೂ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದೇವೆ, ಈ ಸರ್ಕಾರವನ್ನು ಸಹ ನಾವು ನೋಡಿದ್ದೇವೆ, ನಾನು ಈ ಸಂದರ್ಭದಲ್ಲಿ ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಾಮಯ್ಯನವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ರಾಮಯ್ಯನವರು ಹೋದ ವರ್ಷ ಇದೇ ಸಂದರ್ಭದಲ್ಲಿ ಮಾಡಿರತಕ್ಕಂತಹ ಭಾಷಣವನ್ನು ಕೇಳಿದ್ದೇನೆ, ಈ ವರ್ಷವೂ ಸಹ ಅವರ ಭಾಷಣವನ್ನು ಕೇಳಿದ್ದೇನೆ, ಹೋದ ಸಾರಿ ಅವರು ಏನು ಹೇಳಿದ್ದರು ಎಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂತು, ಮಾನ್ಯ ಎಸ್.ಎಂ.ಕೃಷ್ಣರವರ ಕೈಚಳಕದಿಂದ ಮಳೆ ಬಿದ್ದಿದೆ ಎಂದು ಹೇಳಿದರು, ಅವರು ಈ ಸಲ ಹೇಳುತ್ತಿದ್ದಾರೆ ಮಳೆ ಬರುವುದು ಯಾರ ಕೈಯಲ್ಲಿಯೂ ಇಲ್ಲ ಹಾಗೂ ಯಾವ ಸರ್ಕಾರದ ಕೈಯಲ್ಲಿಯೂ ಇಲ್ಲ. ಆದ್ದರಿಂದ ಯಾವುದೇ ಸರ್ಕಾರಗಳನ್ನು ದೂಷಣೆ ಮಾಡುವುದರಲ್ಲಿ ತಪ್ಪಿಲ್ಲವೆಂದು ತಾವು ಹೇಳಿದ್ದೀರಿ.

ಶ್ರೀ ವೈ.ಕೆ.ರಾಮಯ್ಯ(ಕುಣಿಗಲ್): ಮಾನ್ಯ ಅಧ್ಯಕ್ಷರೆ, I want to verify ಎಸ್.ಎಂ.ಕೃಷ್ಣರವರು, ಮುಖ್ಯಮಂತ್ರಿಗಳಾಗಿದ್ದಕ್ಕಾಗಿಯೇ ಒಳ್ಳೆ ಮಳೆ ಬಂದಿದೆ ಎಂದು ನಾನು ಹೇಳಿರಲಾರೆ, I am confident. ಸಭೆಯ ಕಡತದಲ್ಲಿ ತಾವು ತೋರಿಸಿದರೆ ನಾನು ಒಪ್ಪಿಕೊಳ್ಳುತ್ತೇನೆ, ನನಗೆ ನಾನು ಏನು ಹೇಳುತ್ತೇನೆಂಬುದು ಗೊತ್ತಿದೆ. ನನ್ನ ನಿಲುವಿನ ಬಗ್ಗೆ ನನಗೆ ಸ್ಪಷ್ಟವಾದ ಅರಿವು ಇದೆ. ನಾನು ಬೆಳಿಗ್ಗೆ, ಹೋದ ವರ್ಷಕ್ಕಿಂತ ಈ ವರ್ಷ ನೀರು ಡ್ಯಾಂಗಳಲ್ಲಿ ಜಾಸ್ತಿ ಇದೆ. ನಮ್ಮಲ್ಲಿ ಮಳೆ ಪ್ರಾರಂಭವಾಗುವುದು ಜುಲೈ-ಆಗಸ್ಟ್‌ನಲ್ಲಿ, ಆದ್ದರಿಂದ ಮಳೆ ಇವತ್ತು ಅಥವಾ ನಾಳೆ ಪ್ರಾರಂಭವಾಗಬಹುದು. ನಮ್ಮಲ್ಲಿ ಯಾವಾಗಲೂ ಮೇ-ಜೂನ್‌ನಲ್ಲಿ ಮಳೆಯಾಗುವುದಿಲ್ಲ, ಜುಲೈನಲ್ಲೇ ಮಳೆಯು ಪ್ರಾರಂಭವಾಗುವುದು. ಹೋದ ವರ್ಷ ನಾನು ಆ ರೀತಿಯಾಗಿ ಹೇಳಲು ಸಾಧ್ಯವಿಲ್ಲ, ಇವತ್ತು ನಾನು ಹಾಗೆ ಹೇಳಿಯೂ ಇಲ್ಲ. ಅದನ್ನು ದಯಮಾಡಿ ವೆರಿಫೈ ಮಾಡಿ ನೋಡಿ.

ಶ್ರೀ ಬಿ.ಸೋಮಶೇಖರ್: ನಾನು ತಮ್ಮ ವಾದವನ್ನು ಒಪ್ಪುತ್ತೇನೆ, ಏಕೆಂದರೆ ಇದು ಯಾರ ಕೈಯಲ್ಲಿಯೂ ಇಲ್ಲ. ಆದರೆ ಸರ್ಕಾರ ತನ್ನ ಜವಾಬ್ದಾರಿಯನ್ನು ಯಾವ ರೀತಿಯಾಗಿ ನಿರ್ವಹಿಸಬೇಕು ಎನ್ನುವುದರ ಬಗ್ಗೆ ನಾನು ಹೇಳುತ್ತಿದ್ದೇನೆ. ಈಗ ಒಂದು ಕಡೆ ಜಾಸ್ತಿ ವಿಫಲವಾಗಿರುವುದು ಕೋಲಾರದಲ್ಲಿ. ಅಲ್ಲಿ ಶೇಕಡ 87ರಷ್ಟು ವಿಫಲವಾಗಿದೆ. ಅದು ಬಿಟ್ಟರೆ ಬೆಂಗಳೂರು ಜಿಲ್ಲೆಯಲ್ಲಾಗಿದೆ, ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ, ಇದು ಜಾನುವಾರುಗಳ ಮೇಲೆ ಯಾವ ರೀತಿ ದುಷ್ಪರಿಣಾಮ ಬೀರುತ್ತದೆ, ಕೂಲಿಕಾರರ ಮೇಲೆ ಯಾವ ರೀತಿ ದುಷ್ಪರಿಣಾಮ ಬೀರುತ್ತದೆ, ಮತ್ತು ಕುಡಿಯುವ ನೀರಿಗೆ ಯಾವ ರೀತಿ ತೊಂದರೆಯಾಗುತ್ತದೆ, ಇವುಗಳ ಬಗ್ಗೆ ನಾವು ಚರ್ಚಿಸಬೇಕಾಗುತ್ತದೆ. 1985ರಲ್ಲಿ ಅವರು ರೇಷ್ಮೆ ಸಚಿವರಾಗಿದ್ದರು, ನಾನು ತೋಟಗಾರಿಕೆ ಸಚಿವನಾಗಿದ್ದೆ, ತುಮಕೂರಿನಲ್ಲಿ ತಾವು ಜಿಲ್ಲಾ ಮಂತ್ರಿಗಳಾಗಿದ್ದೀರಿ ಎಂದೆನಿಸುತ್ತದೆ. ಜನತಾ ಸರ್ಕಾರವಿದ್ದಾಗ ಆಗ ಬರಗಾಲ ಬಂದಿತ್ತು. ತಮಗೆ ನಾನು ಜ್ಞಾಪಿಸುತ್ತೇನೆ, ನಾವು ಯಾವ ರೀತಿಯಲ್ಲಿ ಸಮರೋಪಾದಿಯಲ್ಲಿ ಕೆಲಸ ಮಾಡಿದ್ದೇವೆಂದರೆ, ಗೋಶಾಲೆಗಳನ್ನು ಪ್ರಾರಂಭ ಮಾಡಿದ್ದೆವು. ಜಾನುವಾರುಗಳಿಗೆ ನೀರು ಒದಗಿಸುವುದು, ಹುಲ್ಲನ್ನು ಶೇಖರಣೆ ಮಾಡಿ, ಗೋಶಾಲೆಗಳಲ್ಲಿ ದನಕರುಗಳನ್ನು ತಂದು ಸಾಕುವುದು ಮುಂತಾದ ಕಾರ್ಯಕ್ರಮಗಳನ್ನು ಮಾಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಕೇಳಿಕೊಳ್ಳಬಹುದು. ಮಂಡ್ಯ ಜಿಲ್ಲೆಯಲ್ಲಿ ಭತ್ತ ಬೆಳೆಯುವಂತಹ ಜಿಲ್ಲೆಯಾಗಿದ್ದು ನಾನು ತಹಶೀಲ್ದಾರ್‌ರವರನ್ನು ಕರೆದುಕೊಂಡು ಹಳ್ಳಿಹಳ್ಳಿಗೂ ಭೇಟಿ ನೀಡಿ ಭತ್ತದ ಹುಲ್ಲನ್ನು ಶೇಖರಿಸಿ ಜಿಲ್ಲಾಧಿ ಕಾರಿಗಳ ಕಛೇರಿಯ ಮುಂದೆ ದೊಡ್ಡ ರಾಶಿಯನ್ನೇ ಹಾಕಿಸಿದ್ದೆವು. ಅದನ್ನು ತಂದು ಎಲ್ಲೆಲ್ಲಿ ತೊಂದರೆ ಇದೆ, ಅಲ್ಲಿ ದನಗಳಿಗೆ ಒದಗಿಸುತ್ತಿದ್ದೆವು. ಪಂಜಾಬ್‌ನಿಂದ ರೈಲಿನಲ್ಲಿ ಮೇವನ್ನು ತರಿಸಿದ ಉದಾಹರಣೆಗಳುಂಟು. ತಾವು ಹೇಳಿದ ಹಾಗೆ ಒಂದಲ್ಲ ಒಂದು ವರ್ಷದಲ್ಲಿ ಬರಗಾಲ ಬಂದೇ ಬರುತ್ತದೆ. ಇದು ನೈಸರ್ಗಿಕವಾದಂತಹ ಪ್ರಕ್ರಿಯೆ, ಆದರೆ ಸರ್ಕಾರ ಮುಂದೆ ಏನು ಮಾಡಬೇಕು. ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗುತ್ತಿದೆ, ಹೋದ ವರ್ಷ ಇದೇ ಚರ್ಚೆ ಮಾಡಿದ್ದೇವೆ, ಮುಂದಿನ ವರ್ಷವು ಇದೇ ಚರ್ಚೆ ಮಾಡುತ್ತೇವೆ. ತಾವು ಮುಂದೆ ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಬರಗಾಲ ಬಂದಾಗ ಬೋರ್‌ವೆಲ್ ತೆಗೆಸುವುದಕ್ಕೆ ಕಾರ್ಯಕ್ರಮವನ್ನು ಏನು ಹಾಕಿಕೊಂಡಿದ್ದೀರಿ. ಅದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ, ಉದಾಹರಣೆಗೆ ಮಂಡ್ಯ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ 25-30 ಬೋರ್‌ವೆಲ್‌ಗಳನ್ನು ಕೊಟ್ಟು ಒಂದೂವರೆ ತಿಂಗಳಾಯಿತು. ಎಲ್ಲಿ ನೀರಿಗೆ ತೊಂದರೆಯಾಗಿದೆ, ಆ ನೀರಿಗೆ ಹಣವನ್ನು ಒದಗಿಸಿ ಕೊಡಿ ಎಂದರೆ ಇನ್ನು ಒದಗಿಸಿಲ್ಲ. ಈಗ ಎಷ್ಟೋ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಹಣ ಬಿಡುಗಡೆ ಮಾಡಿಲ್ಲವೆಂಬುದು ನಮಗೆ ಗೊತ್ತು. 12 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ಈಗ ಅಧಿವೇಶನ

ಪ್ರಾರಂಭವಾಗುತ್ತಿದೆ ಎಂದು ತಿಳಿದ ಮೇಲೆ 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ಇಲ್ಲಿಯವರೆಗೆ ಮಾಡಿರುವುದು ಕೇವಲ 37 ಕೋಟಿ ರೂಪಾಯಿಗಳು ಮಾತ್ರ. ಕುಡಿಯುವ ನೀರಿಗೆ ಇವತ್ತು ಎಷ್ಟು ತೊಂದರೆಯಾಗಿದೆ ಎಂದರೆ, 72 ತಾಲ್ಲೂಕುಗಳಲ್ಲಿ ಸಂಪೂರ್ಣವಾಗಿ ಬೋರ್‌ವೆಲ್‌ಗಳು ಬತ್ತಿಹೋಗಿವೆ. ಸುಮಾರು 21 ತಾಲ್ಲೂಕುಗಳಲ್ಲಿ ಶೇಕಡ 80ರಷ್ಟು ಬತ್ತಿಹೋಗಿವೆ. ಉಳಿದ 20ರಷ್ಟು ತಾಲ್ಲೂಕುಗಳಲ್ಲಿ ಶೇಕಡ 60ರಿಂದ 85ರಷ್ಟು ಬತ್ತಿಹೋಗಿವೆ. ಇನ್ನು 30 ತಾಲ್ಲೂಕುಗಳಲ್ಲಿ ಶೇಕಡ 50ರಷ್ಟು ಬತ್ತಿಹೋಗಿವೆ. ಅಂದರೆ ಯಾವುದೇ ಜಿಲ್ಲೆಗಳ ಒಣಪ್ರದೇಶಗಳಲ್ಲಿ ಎಷ್ಟು ಆಳವಾಗಿ ತೋಡಿದರೂ ನೀರು ಬರುವುದಿಲ್ಲ. ಅಂತಹ ಸಂದರ್ಭದಲ್ಲಿ ನೀರನ್ನು ಶೇಖರಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಅದರ ಬಗ್ಗೆ ನಾವು ಗಮನಿಸಬೇಕಾಗುತ್ತದೆ. ಈ ಪರಿಣಾಮದಿಂದ ಜಾನುವಾರುಗಳನ್ನು ಇವತ್ತು ಬೇರೆ ರಾಜ್ಯಗಳಿಗೆ ಮಾರುವ ಪರಿಸ್ಥಿತಿ ಬಂದಿದೆ, ಬರಗಾಲಕ್ಕೂ, ಜಾನುವಾರುಗಳನ್ನು ಮಾರುವುದಕ್ಕೂ ಸಂಬಂಧ ಇದೆ. ಏಕೆಂದರೆ, ಜಾನುವಾರುಗಳಿಗೆ ಮೇವಿಲ್ಲ, ಅದನ್ನು ಸರಿಯಾಗಿ ನೋಡಿಕೊಳ್ಳಲಾಗುವುದಿಲ್ಲ. ಆದುದರಿಂದ ಆ ಕಾರ್ಯಕ್ರಮವನ್ನು ತಾವು ಯಾವುದೇ ರೀತಿಯ ಸೂಕ್ಷ್ಮತೆಯಿಂದ ಕಂಡಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ತಾವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೆಂದು ಹೇಳಿ. ಯಾವ ಜಿಲ್ಲೆಯಲ್ಲಿ ಜಿಲ್ಲಾ ಮಂತ್ರಿಗಳು ಯಾವ ಸಭೆಯನ್ನು ಕರೆದಿದ್ದಾರೆ, ಜಿಲ್ಲಾಧಿಕಾರಿಗಳು ತಾಲ್ಲೂಕು ಮಟ್ಟಕ್ಕೆ ಹೋಗಿ ಯಾವ ಸಭೆಯನ್ನು ಕರೆದಿದ್ದಾರೆ, ಪರಿಸ್ಥಿತಿಯ ಬಗ್ಗೆ ಏನು ಪರಿಶೀಲಿಸಿದ್ದೀರಿ, ಯಾವ ರೀತಿಯ ಕ್ರಮ ಕೈಗೊಂಡಿದ್ದೀರಿ? ನನಗೆ ಗೊತ್ತಾದ ಮಟ್ಟಿಗೆ ಕೆಲವು ಜಿಲ್ಲೆಗಳಿಂದ ಸಂಪೂರ್ಣವಾದ ಮಾಹಿತಿ ಬಂದಿರುವುದಿಲ್ಲ. ಅಂದರೆ ಎಷ್ಟರಮಟ್ಟಿಗೆ ನಿಮ್ಮ ಜಿಲ್ಲಾಡಳಿತ ಇವತ್ತು ಈ ಒಂದು ತೀವ್ರಗತಿಯ ಬರಗಾಲ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿವೆ ಎಂಬುದನ್ನು ನಾವು ನೋಡಬೇಕು. ಪ್ರತಿ ದಿನ ಫ್ಯಾಕ್ಸ್ ಮುಖಾಂತರ ತಮ್ಮ ವಿಚಾರಗಳನ್ನು ಕಳುಹಿಸಿಕೊಡಬೇಕಾಗಿದೆ. ಯಾವಯಾವ ತಾಲ್ಲೂಕುಗಳಲ್ಲಿ ಏನೇನು ಆಗಬೇಕಾಗಿದೆ ಎಂಬುದನ್ನು ಗಮನಿಸಬೇಕಾಗಿತ್ತು. ಮೊನ್ನೆ ಜಿಲ್ಲೆಗಳಿಗೆ ಸೆಕ್ರೆಟರಿ ಮಟ್ಟದ ಅಧಿಕಾರಿಗಳು ಹೋಗಿ ಮಾಹಿತಿಗಳನ್ನು ತಂದಿದ್ದಾರೆ, ಅದು ಬಿಟ್ಟರೆ ಜಿಲ್ಲಾಧಿಕಾರಿಗಳು ಯಾವುದೇ ಒಂದು ಮಾಹಿತಿಯನ್ನು ಪ್ರತಿದಿನದ ಆಧಾರದ ಮೇಲೆ ಕಳುಹಿಸಿಲ್ಲ. ಆದುದರಿಂದ ನೀವು ಕೇಂದ್ರ ಸರ್ಕಾರಕ್ಕೆ ಯಾವುದೇ ರೀತಿಯ ಮೆಮೋರಂಡಮ್‌ನ್ನು ಕಳುಹಿಸಲು ಸಾಧ್ಯವಾಗಿಲ್ಲ. ಮಾನ್ಯ ಸದಾನಂದಗೌಡರು ಹೇಳಿದ್ದನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಹೋದ ವರ್ಷದಲ್ಲಿ ನಾನು ಹೇಳಿರುವುದು ಪತ್ರಿಕೆಯಲ್ಲೂ ಬಂದಿತ್ತು, ಕೇಂದ್ರದವರು ಕರ್ನಾಟಕ ಸರ್ಕಾರ, ಯಾವುದೇ ಒಂದು ಮಾಹಿತಿಯನ್ನು ಸರಿಯಾದ ಪ್ರೊಫಾರ್ಮ್‌ದಲ್ಲಿ, ಯಾವ ಅಂಕಿಅಂಶಗಳನ್ನು, ನಮ್ಮ ಸರ್ಕಾರದ ನೀತಿ ಏನು? ಗೈಡ್‌ಲೈನ್ಸ್ ಏನಿದೆ ಅದರ ಪ್ರಕಾರ

ಮಾಹಿತಿಯನ್ನು ಕೊಟ್ಟಿಲ್ಲ. ಹೀಗಾಗಿ ನಾವು ಕರ್ನಾಟಕ ಸರ್ಕಾರಕ್ಕೆ ಸಹಾಯವನ್ನು ಮಾಡಲು ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ. ಬೇರೆ ರಾಜ್ಯಗಳಿಗೆ ಸಹಾಯ ಮಾಡಿದ್ದಾರೆ ಎಂಬುದನ್ನು ಅವರು ಓದಿದ್ದಾರೆ, ಪತ್ರಿಕೆಗಳಲ್ಲೂ ವರದಿಯಾಗಿದೆ. ಇವತ್ತು ನಾನೂ ಸಹ ಆರೋಪ ಮಾಡಲು ತಯಾರಿದ್ದೇನೆ. ನೀವೆಲ್ಲಾ ಸರಿಯಾದ ಮಾಹಿತಿಯನ್ನು ಒದಗಿಸಿ ಆಗ ಕೇಂದ್ರ ಸರ್ಕಾರ ಅದಕ್ಕೆ ಸ್ಪಂದಿಸದಿದ್ದರೆ ಟೀಕೆ ಮಾಡಬಹುದು. ಇವತ್ತು ನಾವು ಕೇಂದ್ರ ಸರ್ಕಾರವನ್ನು ಹೊಗಳಬೇಕೆಂದಲ್ಲ, ನಮ್ಮ ಅವಧಿಯಲ್ಲಿ ನಾವು ಸುಮಾರು 122 ಕೋಟಿ ರೂಪಾಯಿಗಳನ್ನು ಒಂದೂವರೆ ವರ್ಷದಲ್ಲಿ ತಂದಿದ್ದೇವೆ. 1998-99ನೇ ಸಾಲಿನಲ್ಲಿ 50 ಕೋಟಿ ರೂಪಾಯಿ ಗ್ರ್ಯಾಂಟ್, ಉಳಿದ 50 ಕೋಟಿ ರೂಪಾಯಿಗಳನ್ನು ಲಾಂಗ್‌ಟರ್ಮ್ ಲೋನ್‌ನಲ್ಲಿ, ತೂರ್‌ದಾಲ್ ವಿಫಲವಾಗಿರುವುದರಿಂದ ಅದಕ್ಕೆ ಸುಮಾರು 122 ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ನಮ್ಮ ತಂಡವನ್ನೆ ಕರೆದುಕೊಂಡು ಹೋಗಿ ಎಲ್ಲಾ ಮಾಹಿತಿಗಳನ್ನು ಒದಗಿಸಿ ಪ್ರಧಾನಿಗಳನ್ನು ಭೇಟಿಯಾಗಿ ತಂದಿದ್ದೆವು. 1998ರಲ್ಲಿ ನಾವೊಂದು ಮೆಮೋರಾಂಡಮ್ ತಯಾರು ಮಾಡಿದ್ದೇವೆ. ಅದನ್ನು ತಾವು ನೋಡಿ. ಆ ರೀತಿಯ ಒಂದು ಸಂಪೂರ್ಣವಾದ ಮಾಹಿತಿ ಕರ್ನಾಟಕದಲ್ಲಿ ಕಳೆದ ಹತ್ತಾರು ವರ್ಷಗಳಿಂದ ತಯಾರಾಗಿರಲಿಲ್ಲ. ನಾನು ಹೇಳುವುದು ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುತ್ತೇವೆಂದು ಅಲ್ಲ. ನೀವು ಮಾಹಿತಿಯನ್ನು ಕೇಂದ್ರಸರ್ಕಾರಕ್ಕೆ ಸರಿಯಾದ ರೀತಿಯಲ್ಲಿ ಕೊಡಬೇಕು. ನಿಮ್ಮ ಜೊತೆಯಲ್ಲಿ ನಾವೂ ಸಹ ಬರೋಣ ಏನು ಬೇಕಾದರೂ ಮಾಡೋಣ. ಆ ಕೆಲಸ ಇವತ್ತು ಆಗಿಲ್ಲವೆನ್ನತಕ್ಕದ್ದು ನನ್ನ ಅನಿಸಿಕೆ. ಮತ್ತೊಂದು ವಿಚಾರ, ಕೂಲಿಗಾಗಿ ಕಾಳು ಎನ್ನತಕ್ಕ ಮತ್ತೊಂದು ಕಾರ್ಯಕ್ರಮವಿದೆ. ಇವತ್ತು ಸುಮಾರು ಆರೂವರೆ ಲಕ್ಷ ಟನ್ ಆಹಾರಧಾನ್ಯ ಕೊಳೆಯುತ್ತಿದೆ ಎನ್ನುವ ಮಾಹಿತಿ ಇದೆ. ಇವತ್ತು ನಮ್ಮ ಸರ್ಕಾರ ಕೂಲಿಗಾಗಿ ಕಾಳು ಎನ್ನತಕ್ಕ ಯೋಜನೆಯಲ್ಲಿ ಎಷ್ಟು ಧಾನ್ಯವನ್ನು ತಂದಿದ್ದೀರಿ? ಆ ಯೋಜನೆಯಡಿಯಲ್ಲಿ ಎಷ್ಟು ಅಸೆಟ್ಸ್‌ನ್ನು ಸೃಷ್ಟಿ ಮಾಡಿದ್ದೀರಿ? ಕೆರೆಗಳ ಹೂಳು ಎತ್ತತಕ್ಕ ಕೆಲಸ, ಹಿಂದೆ ಫ್ಯಾಮಿನ್ ರೋಡ್ಸ್ ಎಂದು ಮಾಡುತ್ತಿದ್ದರು. ಬರಗಾಲ ಬಂದಾಗ ಕೂಲಿಗಾಗಿ ಕಾಳು ಯೋಜನೆಯಲ್ಲಿ ಅಲ್ಲಿನ ಜನರಿಗೆ ಕೆಲಸ ಕೊಡತಕ್ಕದ್ದು ರಸ್ತೆ ಮಾಡಿ ಅಸೆಟ್ಸ್‌ನ್ನು ಸೃಷ್ಟಿ ಮಾಡತಕ್ಕದ್ದು, ಆ ಕೆಲಸ ಎಲ್ಲಿ ಮಾಡಿದ್ದೀರಿ? ಇದು ಕೇವಲ ಹಣ ಕೊಟ್ಟು ಕಂಟ್ರಾಕ್ಟರ್ಸ್ ಹಣವನ್ನು ಲೂಟಿ ಮಾಡಿಕೊಂಡು ಹೋಗತಕ್ಕದ್ದಲ್ಲ. ಆರೂವರೆ ಲಕ್ಷ ಟನ್ ಆಹಾರಧಾನ್ಯ ಏನಿದೆ, ಅದನ್ನು ಪಡೆದುಕೊಳ್ಳಲಿಕ್ಕೆ ಕೂಲಿಗಾಗಿ ಕಾಳು ಎನ್ನತಕ್ಕ ಯೋಜನೆಯನ್ನು ಜಾರಿಗೆ ತಂದು ಇವತ್ತು ಅಸೆಟ್ಸ್‌ನ್ನು ಸೃಷ್ಟಿ ಮಾಡಬೇಕಾಗಿತ್ತು. ಆ ಕೆಲಸವನ್ನು ತಾವು ಮಾಡಿಲ್ಲ. ಸುಮಾರು ಎರಡು ಮೂರು ತಿಂಗಳಿನಿಂದ ಕೇಂದ್ರದಿಂದ ಎಷ್ಟು ಹಣ ಬಂದಿದೆ ಎನ್ನುವುದನ್ನು ಹೇಳಬೇಕಾಗಿದೆ. ಅದರ ಜೊತೆಯಲ್ಲಿ ಶಾಲಾಕಟ್ಟಡಗಳ ನಿರ್ಮಾಣ, ಅವುಗಳನ್ನು ರಿಪೇರಿ ಮಾಡತಕ್ಕದ್ದು ರಸ್ತೆಗಳನ್ನು ಮಾಡತಕ್ಕದ್ದು, ಕೆರೆಕಟ್ಟೆಗಳನ್ನು ಕಟ್ಟತಕ್ಕದ್ದು ಇದಕ್ಕೆಲ್ಲ ಇದನ್ನು

ಉಪಯೋಗಿಸಿಕೊಳ್ಳಬೇಕಾಗಿತ್ತು. ಇವತ್ತು 5 ಲಕ್ಷ ಕುಟುಂಬಗಳು ಬಡತನರೇಖೆಗಿಂತ ಕೆಳಗಡೆ ಇವೆಯೆಂದು ಅಂದಾಜು ಮಾಡಲಾಗಿದೆ. ಇವತ್ತು ಇಡೀ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ತರಿಸಿಲ್ಲ. ಬಿಜಾಪುರ ಜಿಲ್ಲೆಯಿಂದ ಇನ್ನು ಮಾಹಿತಿಯನ್ನು ತರಿಸಿಲ್ಲ. ಇನ್ನು ಬೇರೆ ಬೇರೆ ಜಿಲ್ಲೆಗಳಿಂದ ಮಾಹಿತಿಯನ್ನು ತರಿಸಿಲ್ಲ. ಕೇವಲ ಮೂರು ಲಕ್ಷ ಕುಟುಂಬಗಳನ್ನು ಗುರುತಿಸಲಾಗಿದೆ ಎನ್ನುವ ಮಾಹಿತಿಯನ್ನು ನಾವು ನೋಡಿದ್ದೇವೆ. ಇನ್ನು ಎರಡು ಲಕ್ಷ ಕುಟುಂಬಗಳನ್ನು ಗುರುತಿಸಬೇಕಾಗಿದೆ. ಬಿಜಾಪುರ, ರಾಯಚೂರು, ಗುಲ್ಬರ್ಗ ಜಿಲ್ಲೆಗಳಿಂದ ಸಂಪೂರ್ಣ ಮಾಹಿತಿ ಸರಿಯಾದ ರೀತಿಯಲ್ಲಿ ನಿಮಗೆ ದೊರೆತಿಲ್ಲ. ಹೀಗಾಗಿ ಅಂತ್ಯೋದಯ ಕಾರ್ಯಕ್ರಮ ಏನಿದೆ, ಬಡತನರೇಖೆಗಿಂತ ಕೆಳಗಡೆ ಇರತಕ್ಕವರಿಗೆ ಆಹಾರ ಧಾನ್ಯವನ್ನು ಮುಫತ್ತಾಗಿ ಕೊಡತಕ್ಕದ್ದು ಏನಿದೆ ಅದಕ್ಕೆ ನೀವು ಕೇಂದ್ರಸರ್ಕಾರಕ್ಕೆ ವರದಿಯನ್ನು ಕೊಟ್ಟಿಲ್ಲವೆಂದು ನನ್ನ ಅನಿಸಿಕೆ. ಬರಗಾಲ ಬಂದಾಗ, ಬರ ಪರಿಹಾರ ಕಾರ್ಯಕ್ರಮವನ್ನು ಮಾಡತಕ್ಕದ್ದು ರೆವಿನ್ಯು ಡಿಪಾರ್ಟ್‌ಮೆಂಟ್. ಈ ಇಲಾಖೆ ಬಹಳ ಪ್ರಮುಖವಾದ ಇಲಾಖೆ. ನಮ್ಮ ರೆವಿನ್ಯೂ ಇಲಾಖೆ ಮದರ್ ಆಫ್ ಆಲ್ ಡಿಪಾರ್ಟ್‌ಮೆಂಟ್. ಬಹುಶಃ ಸುಮಾರು ನೂರು ವರ್ಷಗಳಿಂದ ಈ ಇಲಾಖೆಗೆ ಇದ್ದಂತಹ ಪ್ರಾಮುಖ್ಯತೆ ಯಾವ ಇಲಾಖೆಗೂ ಇಲ್ಲ. ಏಕೆಂದರೆ ಸರ್ಕಾರದ ಪ್ರತಿಯೊಂದು ಕಾರ್ಯಚಟುವಟಿಕೆಗಳು ಹಳ್ಳಿಗಳಲ್ಲಿ ಬರಗಾಲ ಬರಲಿ, ಜನಗಣತಿ ಮಾಡತಕ್ಕದ್ದು ಆಗಲಿ, ಚುನಾವಣೆ ಮಾಡುವುದು ಏನೇ ಕೆಲಸವಿದ್ದರೂ ಅದು ರೆವಿನ್ಯೂ ಇಲಾಖೆಯ ಕೆಲಸ. ಇವತ್ತು ರೆವಿನ್ಯೂ ಇಲಾಖೆಯಲ್ಲಿ ಪ್ರತಿಯೊಂದು ಹಂತದಲ್ಲೂ ಚುರುಕುಗೊಳಿಸತಕ್ಕ ಅವಶ್ಯಕತೆಯಿದೆ. ಒಂದೊಂದು ಸಾರಿ ಅಧಿಕ ಮಳೆಗಾಲ ಬರುತ್ತದೆ, ಒಂದೊಂದು ಸಾರಿ ಬರಗಾಲ ಬರುತ್ತದೆ. ಪ್ರತಿ ವರ್ಷ ಪ್ರತಿ ದಿನ ಅವರಿಗೆ ಕೆಲಸವಿರುತ್ತದೆ. ಅವರು ಯಾವ್ಯಾವ ಕಾಲದಲ್ಲಿ ಏನೇನು ಮಾಹಿತಿಗಳು ಬೇಕೋ ಅವುಗಳನ್ನು ಒದಗಿಸಿಕೊಡಬೇಕಾಗುತ್ತದೆ. ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್ ಇದೆ. ಡ್ರಾಟ್ ಮಾನಿಟರಿಂಗ್ ಸೆಲ್ ಎಂದು ಇದೆ. ಎಲ್ಲವನ್ನೂ ಕಂಪೈಲ್ ಮಾಡಿ, ಬರಗಾಲದ ವಿಚಾರದಲ್ಲಿ ಯಾವುದನ್ನು ಕಳುಹಿಸಿಕೊಡಬೇಕು, ಸ್ಪೆಷಲ್ ನ್ಯೂಟ್ರಿಷನ್ ವಿಚಾರದಲ್ಲಿ ಎಷ್ಟು ಮಾಹಿತಿಯನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡಬೇಕು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಯಾವರೀತಿ ತೊಂದರೆಯಾಗಿದೆ, ಯಾವರೀತಿಯ ಪ್ರಸ್ತಾವನೆಯನ್ನು ಕಳುಹಿಸಿ ಕೊಡಬೇಕು. ಮೇವು ಸಂಗ್ರಹ ಮಾಡಲಿಕ್ಕೆ ಏನು ಮಾಡಿದ್ದೀರಿ? ಕೇಂದ್ರ ಸರ್ಕಾರ ಎಲ್ಲದಕ್ಕೂ ಹಣವನ್ನು ಕೊಡುತ್ತದೆ. ನೀವು ಪ್ರಸ್ತಾವನೆಯನ್ನು ಅಂಕಿಅಂಶಗಳ ಆಧಾರದ ಮೇಲೆ ಒಂದು ಫಾರ್ಮೆಟ್ ಪ್ರಕಾರ ಏನೇನು ಹೆಡ್‌ಗಳಿವೆ ಅದರ ಪ್ರಕಾರ ನೀವು ಪ್ರಸ್ತಾವನೆಯನ್ನು ಕಳುಹಿಸಿ ಕೊಟ್ಟರೆ ಅದಕ್ಕೆ ಕೇಂದ್ರಸರ್ಕಾರ ಹಣವನ್ನು ಕೊಡುತ್ತದೆ. ಕೊಡಲಿಲ್ಲವೆಂದಾಗ, ನಾವು ಖಂಡಿತವಾಗಿಯೂ ನಿಮ್ಮ ಜೊತೆಗೆ ಸೇರಿ ಹೋರಾಟ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ನನ್ನ ಅನಿಸಿಕೆಯಲ್ಲಿ ಮೇವಿನ

ಶೇಖರಣೆ ಮಾಡುವುದಕ್ಕೆ ನೀವು ಯಾವುದೇ ಪ್ರಸ್ತಾವನೆಯನ್ನು ಕಳುಹಿಸಿಲ್ಲ. ಗೋಶಾಲೆಗಳನ್ನು ಮಾಡುವುದಕ್ಕೆ ಯಾವುದೇ ಪ್ರಸ್ತಾವನೆಯನ್ನು ಕಳುಹಿಸಿಲ್ಲ. ನ್ಯೂಟ್ರಿಷಿಯಸ್ ಪ್ರೋಗ್ರಾಮ್ ಇರಬಹುದು ಕುಡಿಯುವ ನೀರಿನದ್ದು ಇರಬಹುದು, ನನಗನ್ನಿಸುತ್ತದೆ ಮಾನ್ಯ ಮುಖ್ಯಮಂತ್ರಿಗಳು ಬೇರೆ ಬೇರೆ ಸಭೆಗಳನ್ನು ನಡೆಸುವುದಕ್ಕೆ ಬದಲಾಗಿ, ಇದರ ಬಗ್ಗೆ ತಾವೇ ಸಭೆಗಳನ್ನು ನಡೆಸಿದ್ದರೆ ಚುರುಕಾಗುತ್ತಿತ್ತು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳ ಯೋಚನೆ ಆಕಾಶದಲ್ಲಿದೆ. ನನಗನ್ನಿಸುತ್ತದೆ ಅವರು ಅಮೇರಿಕಾದಲ್ಲೋ, ಜಪಾನ್‌ನಲ್ಲಿಯೋ, ಜರ್ಮನಿಯಲ್ಲಿಯೋ ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿಯಾಗಿದ್ದರೆ ಸೂಕ್ತವಾಗಿರುತ್ತಿತ್ತು. ಏಕೆಂದರೆ ಅವರ ಯೋಚನೆ ಬಹಳ ದೊಡ್ಡದು. ಅವರ ಯೋಚನೆ ಹಳ್ಳಿಗಳಿಗೆ ಬರಬೇಕಾಗಿತ್ತು ಎನ್ನುವುದು ನನ್ನ ಅನಿಸಿಕೆ. ಕೂಲಿಮಾಡತಕ್ಕವರಿಗೆ, ಜಾನುವಾರುಗಳಿಗೆ ಏನು ತೊಂದರೆಯಿರುತ್ತದೆ, ಕುಡಿಯುವ ನೀರಿಗೆ ಏನು ತೊಂದರೆಯಿದೆ ಇದರ ಬಗ್ಗೆ ಸ್ವಲ್ಪ ಗಮನಹರಿಸಿ ಸಭೆಗಳನ್ನು ನಡೆಸಿ ಜಿಲ್ಲಾಮಂತ್ರಿಗಳಿಗೆ ಟಾರ್ಗೆಟ್ ಕೊಟ್ಟು ಪ್ರತಿ ಜಿಲ್ಲೆಗೆ ಹೋಗಿ ತಾಲ್ಲೂಕುಗಳನ್ನು ಸುತ್ತಿ ಸರಿಯಾದ ಮಾಹಿತಿಯನ್ನು ಸಂಗ್ರಹಿಸಿ ಹಣವನ್ನು ಕೊಟ್ಟಿದ್ದರೆ, ಇದನ್ನು ಬಹುಶಃ ಸಮರೋಪಾದಿಯಲ್ಲಿ ಮಾಡಬಹುದಾಗಿತ್ತು ಎನ್ನುವುದು ನನ್ನ ಅನಿಸಿಕೆ. ಇವತ್ತು ಬರ ಪರಿಹಾರ ಕಾಮಗಾರಿಗೆ ಕೇವಲ 26 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ. ಇವತ್ತು ನಿಮಗೆ ಇರತಕ್ಕ ಅಲೋಕೇಷನ್ 78 ಕೋಟಿ ರೂ.ಗಳು ಈ ವರ್ಷ 78 ಕೋಟಿ ರೂ.ಇದೆ, ಮುಂದಿನ ವರ್ಷ ಅದು 82 ಕೋಟಿ ರೂ.ಆಗಬಹುದು. ಈ ಹಣ ಯಾವುದಕ್ಕೂ ಸಾಲುವುದಿಲ್ಲ. ಎಲ್ಲದಕ್ಕೂ ಕೇಂದ್ರಸರ್ಕಾರವನ್ನು ನಂಬುವುದಕ್ಕಾಗುವುದಿಲ್ಲ. ನಾನು ಹೋದ ಅಧಿವೇಶನದಲ್ಲೂ ಸಲಹೆ ಕೊಟ್ಟಿದ್ದೇನೆ. ನೀವು ಚೀಫ್ ಮಿನಿಸ್ಟರ್ ರಿಲೀಫ್ ಫಂಡ್ ಎಂದು ಏನಿದೆ, ಅದೇರೀತಿ ಕಲಾಮಿಟಿ ರಿಲೀಫ್ ಅಥಾರಿಟಿ ಎಂದು ಅಥಾರಿಟಿಯನ್ನು ಮಾಡಿ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ರೀತಿ ಒಂದು ಅಥಾರಿಟಿ ಮಾಡಿ ನೀವು ಬೇರೆ ಬೇರೆ ರೂಪದಲ್ಲಿ ಹಣವನ್ನು ಶೇಖರಣೆ ಮಾಡಿ, ಕೇಂದ್ರದಿಂದ ಹಣ ಬರುವುದರ ಜೊತೆಗೆ ಸರ್ಕಾರದ ವತಿಯಿಂದ ಸುಮಾರು ನೂರು ಕೋಟಿ ರೂಪಾಯಿಗಳನ್ನು ಶೇಖರಣೆ ಮಾಡಿ ಇಟ್ಟು, ಇಂತಹ ಸಂದರ್ಭಗಳಲ್ಲಿ ಅದನ್ನು ಉಪಯೋಗಿಸಿಕೊಳ್ಳಬಹುದು ಎನ್ನುವ ಸಲಹೆಯನ್ನು ಕೊಟ್ಟಿದ್ದೆ. ನೀವು ಅದರ ಬಗ್ಗೆ ಏನೂ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಸೋಮಶೇಖರ್‌ರವರು ಹಿಂದೆ ಸರ್ಕಾರ ನಡೆಸುವಾಗ ಕೇಂದ್ರ ಸರ್ಕಾರಕ್ಕೆ ಮೆಮೊರಾಂಡಮ್ ಕೊಟ್ಟರೆ, ಅಡಿಶನಲ್ ಫಂಡ್ಸ್ ಬಂತೋ ಅಥವಾ ಪ್ರಕೃತಿ ವಿಕೋಪಕ್ಕೆ ಏನು ಫಂಡ್ಸ್ ಫಿಕ್ಸ್ ಮಾಡಿದ್ದಾರೆ ಅಷ್ಟೇ ಕೊಟ್ಟಿದ್ದಾರೋ ಅಥವಾ ಏನಾದರೂ ಹೆಚ್ಚಿಗೆ ಕೊಟ್ಟಿದ್ದಾರೆಯೋ

ಎನ್ನುವುದನ್ನು ಸ್ವಲ್ಪ ಹೇಳಿದರೆ, ಅದಕ್ಕೆ ತಕ್ಕಂತೆ ಅಂಕಿಸಂಖ್ಯೆಗಳನ್ನು ಸಂಗ್ರಹಿಸಿ ಕೊಡಿಸುವುದಕ್ಕೆ ಆಗುತ್ತದೆ. ಏಕೆಂದರೆ ತಾವು ಮಾತನಾಡುವಾಗ ನ್ಯುಟ್ರಿಷಿಯಸ್, ಗೋಶಾಲೆ, ಹೋಬಳಿಮಟ್ಟಗಳಲ್ಲಿ ದನಕರುಗಳಿಗೆ ಮೇವು ಸಂಗ್ರಹಣೆ ಮಾಡಿದ್ದು ಇವೆಲ್ಲವೂ ಕೂಡ ಹೊಸದೇನೂ ಅಲ್ಲ. ಇರತಕ್ಕ ವ್ಯವಸ್ಥೆಯಲ್ಲಿ ಮಾಡಿರಬಹುದು. ತಮ್ಮ ಸಲಹೆಯ ಪ್ರಕಾರ ಕೇಂದ್ರದವರು ಏನಾದರೂ ಹೆಚ್ಚಿಗೆ ಕೊಟ್ಟಿದ್ದಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್: ಅದನ್ನೇ ನಾನು ಹೇಳಿದ್ದು, ತಾವು ಗಮನಿಸಲಿಲ್ಲವೆಂದು ಕಾಣುತ್ತದೆ. 1998-99ರಲ್ಲಿ ಆ ವರ್ಷದ ಸಿಆರ್‌ಎಫ್ ಅಲೋಕೇಷನ್ 48 ಕೋಟಿ ರೂ.ಗಳು ಇದೂ ಅಲ್ಲದೆ ಸುಮಾರು 122 ಕೋಟಿ ರೂ ಹೆಚ್ಚಿಗೆ ಅಡಿಶನಲ್ ಅಮೌಂಟ್ ಬಂದಿದೆಯೆಂದು ನಾನು ಹೇಳಿದ್ದು. ಸುಮಾರು 25 ವರ್ಷಗಳಿಂದ ಅಷ್ಟೊಂದು ಅಡಿಶನಲ್ ಅಮೌಂಟ್ ಕೇಂದ್ರ ಸರ್ಕಾರದಿಂದ ಯಾವತ್ತೂ ಬಂದಿಲ್ಲ. ಇದನ್ನು ಕಡತದಲ್ಲಿ ನೋಡಿ, ಕಂದಾಯ ಇಲಾಖೆಯವರನ್ನು ಕೇಳಿ. ನಮ್ಮ ಸರ್ಕಾರ ಇದ್ದಾಗ 1998ನೇ ಸಾಲಿನಲ್ಲಿ ನಾವು ಖರ್ಚು ಮಾಡಿರುವುದರ ಜೊತೆಗೆ ಅವರ ಪ್ರತಿ ವರ್ಷದ ಅಲೋಕೇಷನ್ ಜೊತೆಗೆ ಸುಮಾರು 122 ಕೋಟಿ ರೂಪಾಯಿ ಹೆಚ್ಚಾಗಿ ತಂದಿದ್ದೇವೆ. ನಾವು ಯಾವರೀತಿ ಕೇಂದ್ರಸರ್ಕಾರಕ್ಕೆ ಮನವರಿಕೆ ಮಾಡಿದ್ದೇವೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಅದು ರೆಕಾರ್ಡ್‌ನಲ್ಲಿದೆ ನಾವು 122 ಕೋಟಿ ರೂಪಾಯಿ ತಂದಿದ್ದೇವೆ. ನೀವು ಸರಿಯಾದ ಮಾಹಿತಿಯನ್ನು ಕೊಡದೆ, ಯಾವರೀತಿ ಕೇಂದ್ರ ಸರ್ಕಾರದವರ ಜೊತೆಗೆ ವ್ಯವಹಾರ ಮಾಡಬೇಕೆನ್ನುವುದು ಗೊತ್ತಿಲ್ಲದೆ, ಕೇಂದ್ರ ಸರ್ಕಾರವನ್ನು ದೂರುವುದು. ಅವರನ್ನು ಟೀಕೆ ಮಾಡುವುದು ಬೈಯ್ಯುವುದು, ಟೀಕೆ ಮಾಡುವಾಗ ನಾವು ನಿಮ್ಮ ಜೊತೆ ಸೇರಿಕೊಳ್ಳುತ್ತೇವೆ. ಕೇಂದ್ರಸರ್ಕಾರದವರು ಮಾಡಿದ್ದೆಲ್ಲ ಸರಿಯೆಂದು ನಾವು ಹೇಳುವುದಿಲ್ಲ. ಆದರೆ ನಮ್ಮ ರಾಜ್ಯಸರ್ಕಾರ ಯಾವರೀತಿ ಸಮಸ್ಯೆಯನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದೆ ಎನ್ನುವುದರ ಬಗ್ಗೆ ಹೇಳುವುದಾದರೆ ಅದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಇವತ್ತು ರೈತರ ಬಗ್ಗೆ ಅನೇಕ ಕಾರ್ಯಕ್ರಮಗಳು ರಿವಾಲ್ವಿಂಗ್ ಫಂಡ್ ಇದೆಲ್ಲ ಮಾಡಿದ್ದೇವೆಂದು ಹೇಳಿದ್ದೀರಿ. ಮೆಕ್ಕೆಜೋಳದ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಸುಮಾರು 50 ಲಕ್ಷ ಟನ್ ಮೆಕ್ಕಜೋಳದಲ್ಲಿ ನಾವು ಖರೀದಿ ಮಾಡಿರತಕ್ಕದ್ದು ಮೂರುವರೆ ನಾಲ್ಕು ಲಕ್ಷ ಟನ್ ಮಾತ್ರ. ಅದರಲ್ಲಿ ಖರ್ಚು ಮಾಡಿರತಕ್ಕ ಹಣವೆಷ್ಟು, ಕೇಂದ್ರದಿಂದ ಎಷ್ಟು ಹಣ ಬಂದಿದೆ? ಇವತ್ತು ಏನಾಗಿದೆ ಅಂದರೆ ಕೇಂದ್ರದವರು ಒಂದು ಕ್ವಿಂಟಾಲ್‌ಗೆ 440 ರೂಪಾಯಿಯಂತೆ ಪರ್ಚೇಸ್ ಮಾಡಿದರು. ಪರ್ಚೇಸ್ ಮಾಡಿದ್ದರೂ ರೈತರಿಗೆ ಹಣ ಸಿಗಲಿಲ್ಲ. ನಿಮ್ಮ ಅಕೌಂಟ್‌ನಲ್ಲಿ ನಾವು ಪರ್ಚೇಸ್ ಮಾಡಿದ್ದೇವೆ ನಿಮ್ಮ ಅಕೌಂಟ್‌ನಲ್ಲಿ ಹಣವನ್ನು ಎಫ್‌ಸಿಐಗೆ ಬಿಡುಗಡೆ

ಮಾಡಿ ಎಂದರು. ಅವರು ಏನು ಹೇಳಿದರು ಅದು ನಿಮ್ಮ ವ್ಯವಹಾರ ನಮ್ಮ ವ್ಯವಹಾರವಲ್ಲ ನೀವು ಹಣ ಕೊಡಿ ಅಂದರು. ಈಗ ಏನಾಗಿದೆ ಅಂದರೆ ಹಣ ಬ್ಲಾಕ್ ಆಗಿದೆ. ಇವತ್ತು ಒಂದು ಕ್ವಿಂಟಾಲ್‌ಗೆ 150 ರಿಂದ 200 ರೂಪಾಯಿ ಜಾಸ್ತಿಯಾಗಿದೆ. 440 ರೂಪಾಯಿಯಂತೆ ಕೊಂಡುಕೊಂಡಿರುವುದಕ್ಕೆ ಹಣ ಬಂದಿಲ್ಲ, ಈ ಡಿಫರೆನ್ಸ್ ಹಣವನ್ನು ಕೊಡುವುದಕ್ಕೆ ಆಗುತ್ತಿಲ್ಲ. ಕೇಂದ್ರದವರು ಹಣವನ್ನು ಬಿಡುಗಡೆ ಮಾಡಿಲ್ಲ ತ್ರಿಶಂಕು ಸ್ವರ್ಗದಲ್ಲಿ ರೈತರನ್ನು ಇಟ್ಟಿದ್ದೀರಿ. ಅದರ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಮಾನ್ಯ ಆಹಾರ ಸಚಿವರು 400ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಸುಮ್ಮನೆ ಸ್ಟೇಟ್‌ಮೆಂಟ್‌ಗಳು ಬರುತ್ತಿವೆಯೇ ಹೊರತು ನಿಜವಾದಂಥ ಕಾರ್ಯಕ್ರಮ ಯಾವುದಾದರೂ ಆಗಿದೆಯೇ ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಕೃಷಿ ಮಂತ್ರಿಗಳು): ಹೌದು. ರಾಜ್ಯದಲ್ಲಿ ಮೆಕ್ಕೆ ಜೋಳವನ್ನು ರೈತರು ಹೆಚ್ಚು ಬೆಳೆದರು. ಬೆಲೆ ಕುಸಿತದ ಸಂದರ್ಭದಲ್ಲಿ ಕಳೆದ ಐವತ್ತು ವರ್ಷಗಳಿಂದ ತಾವು ಅಧಿಕಾರದಲ್ಲಿದ್ದಾಗಲೂ ಕೂಡ ಸೆಂಟ್ರಲೈಸ್ಡ್ ಪ್ರೊಕ್ಯೂರ್‌ಮೆಂಟ್ ಪಾಲಿಸಿಯನ್ನೇ ನಾವು ಅನುಸರಿಸಿಕೊಂಡು ಬಂದಿರತಕ್ಕದ್ದು ಇದೆ. ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಬೆಲೆ ಕುಸಿದಾಗ ಕೊಳ್ಳಬೇಕಾಗಿರತಕ್ಕಂಥ ಸಂಪೂರ್ಣವಾದ ಜವಾಬ್ದಾರಿ ಕೇಂದ್ರ ಸರ್ಕಾರದ್ದು ಇರುತ್ತದೆ. ರಾಜ್ಯ ಸರ್ಕಾರ ಸಬ್ ಏಜೆಂಟ್ ಆಗುತ್ತದೆ. ಏಜೆನ್ಸಿಯಾಗಿ ಅವರು ಕೇಂದ್ರ ಸರ್ಕಾರಕ್ಕೆ ಸಹಾಯವನ್ನು ಮಾಡುತ್ತಾರೆ. ಅದನ್ನು ನಾವು ಕೊಂಡ ಮೇಲೂ ಕೂಡ ಹಣ ಕೇಂದ್ರ ಸರ್ಕಾರದಿಂದ ಸಕಾಲದಲ್ಲಿ ಬರಲಿಲ್ಲ ಎನ್ನುವ ಕಾರಣಕ್ಕೋಸ್ಕರ ನಾವು ಆವರ್ತನಿಧಿಯನ್ನು ಮಾಡಿ ಅದರ ಅಡಿಯಲ್ಲಿ ಮುಂಗಡದ ಹಣವನ್ನು ಕೂಡ ರೈತರಿಗೆ ಕೊಟ್ಟು ಈಗಾಗಲೇ ನಾವು ಸರಿಸುಮಾರು ನೂರು ಕೋಟಿ ರೂಪಾಯಿಯಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಅಷ್ಟು ಹಣವನ್ನು ಬಿಡುಗಡೆ ಮಾಡಿ ಸಂಪೂರ್ಣವಾಗಿ ರೈತರಿಗೆ ಕೊಡಬೇಕಾಗಿರತಕ್ಕಂಥ ಎಲ್ಲ ಹಣವನ್ನೂ ಕೊಟ್ಟಿದ್ದೇವೆ. ನಮಗೆ ಇನ್ನೂ ಕೂಡ ಕೇಂದ್ರ ಸರ್ಕಾರದಿಂದ 65 ಕೋಟಿ ರೂಪಾಯಿಯಷ್ಟು ದುಡ್ಡು ಬರಬೇಕಾಗಿದೆ. ಅದು ಬರಬೇಕಾಗಿದ್ದರೂ ಕೂಡ ನಾವು ಆವರ್ತನಿಧಿಯಡಿಯಲ್ಲಿ ಈ ಹಣವನ್ನು ಬಿಡುಗಡೆ ಮಾಡಿ ಅದನ್ನು ರೈತರಿಗೆ ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಕೃಷಿ ಸಚಿವರು ಏನು ನೂರು ಕೋಟಿ ಹಣ ಸಂದಾಯ ಮಾಡಿದ್ದೇವೆ ಎಂದು ಹೇಳಿದ್ದಾರೆ, ದಯವಿಟ್ಟು ಅವರು ಸ್ವಲ್ಪ ಅದರ ವಿವರಗಳನ್ನು ಕೊಡಬೇಕು. ಹೊನ್ನಾಳಿ ತಾಲ್ಲೂಕಿನಿಂದ ಇವತ್ತು

ಬೆಳಿಗ್ಗೆ ರೈತರು ಬಂದಿದ್ದರು. ಇನ್ನೂ ನಾಲ್ಕು ಕೋಟಿ ರೂಪಾಯಿ ಬಾಕಿಯಿದೆ ಎಂದು ಹೇಳಿದರು. ಕೇಂದ್ರ ಸರ್ಕಾರದ ಎಫ್.ಸಿ.ಐ. ಮುಖಾಂತರ ಎಷ್ಟು ಹಣ ಬಂದಿದೆ ಮತ್ತು ರಾಜ್ಯಸರ್ಕಾರದ ನಿಮ್ಮ ಆವರ್ತನಿಧಿಯಿಂದ ಎಷ್ಟು ಹಣ ಕೊಟ್ಟಿದ್ದೀರಿ ಇದರ ಬಗ್ಗೆ ವಿವರಗಳನ್ನು ಸದನದಲ್ಲಿ ಮಂಡನೆ ಮಾಡಿ ಸುಮ್ಮನೆ ಹೀಗೆ ಹೇಳುವಂಥಾದ್ದು ಬೇಡ. ನೀವು ನೂರು ಕೋಟಿ ರೂಪಾಯಿಗಳನ್ನು ಯಾವ್ಯಾವ ಹಂತದಲ್ಲಿ ಯಾವ ಅವಧಿಯಲ್ಲಿ ಕೊಟ್ಟಿದ್ದೀರಿ ಎಂಬುದನ್ನು ದಯಪಿಟ್ಟು ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಸರ್ಕಾರದವರು ಎರಡು ಕೋಟಿ ಐದು ಕೋಟಿ ರೂ.ಗಳ ಬಗ್ಗೆ ಮಾತನಾಡದೆ 100-200-500-1000 ಕೋಟಿ ಮೇಲೆ ಮಾತನಾಡುತ್ತಿದ್ದಾರೆ. ಮೊನ್ನೆ ನಾವೆಲ್ಲರೂ ಸಹಿತ ಬೀದರ್, ಗುಲ್ಬರ್ಗಾ, ರಾಯಚೂರು ಮುಂತಾಗಿ ಎಲ್ಲಾ ಕಡೆಗೆ ಹೋಗಿ ಬಂದಿದ್ದೇವೆ. ಈ ಕಡೆ ಧಾರವಾಡದ ಕಡೆಗೆ ಸಹಿತ ಹೋಗಿ ಬಂದಿದ್ದೇವೆ. ಎಲ್ಲಾ ಕಡೆಗಳಲ್ಲೂ ರೈತರು ತಾವು ಕೊಟ್ಟಿರತಕ್ಕಂಥ ಮೆಕ್ಕೆ ಜೋಳಕ್ಕೆ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ನಾನು ಕೃಷಿ ಮಂತ್ರಿಗಳನ್ನು ಈ ಸಮಯದಲ್ಲಿ ವಸ್ತುಸ್ಥಿತಿಯನ್ನು ತಿರುಚಲಿಕ್ಕೆ ಹೋಗಬಾರದು. Now you are acting as an Agent of the Government of India, as you have stated and you have procured. ತಾವು ಪ್ರೊಕ್ಯೂರ್ ಮಾಡಿದ್ದೀರಿ. ಅಷ್ಟೇ ಅಲ್ಲ ಈಗ ತಾವು ಆವರ್ತನಿಧಿಯನ್ನು ಹೇಗೆ ಮಾಡಿದ್ದೀರಿ? ನಾಳೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಎ.ಪಿ.ಎಂ.ಸಿ.ಯಿಂದ ಎಷ್ಟು ಹಣ ಬಿಡುಗಡೆಯಾಗಿದೆ, ಆರ್ಥಿಕ ಇಲಾಖೆಯಿಂದ ಡೆಪ್ಯುಟಿ ಕಮಿಷನರ್ ಮೂಲಕ, ಏಕೆಂದರೆ ಅವರು ಮೇಲ್ವಿಚಾರಣೆ ಮಾಡತಕ್ಕವರು. ಯಾವ್ಯಾವ ಜಿಲ್ಲೆಗೆ, ಯಾವ್ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ, ಎಷ್ಟು ಬಾಕಿ ಇದೆ ಎನ್ನತಕ್ಕದ್ದನ್ನು ಹೇಳಬೇಕು. ನಿನ್ನೆ ಮಾನ್ಯ ಇನಾಂದಾರ್ ಅವರು ಯಾವುದೂ ಬಾಕಿ ಇಲ್ಲ, ಎಲ್ಲಾ ಬಿಡುಗಡೆಯಾಗಿದೆ ಎಂದು ಹೇಳಿಬಿಟ್ಟರು. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾಳೆ ಮಾನ್ಯ ಮಂತ್ರಿಗಳನ್ನು ಉತ್ತರ ಕೊಡತಕ್ಕಂಥ ಸನ್ನಿವೇಶದಲ್ಲಿ ಯಾವುದನ್ನೂ ತಿರುಚದೆ ಹೇಳಬೇಕು. ಏಕೆಂದರೆ ಅವರಿಗೆ ಸಮಯ ಬೇಕಾಗುತ್ತದೆ. ಅಧಿಕಾರಿಗಳು ಕೊಡತಕ್ಕಂಥ ಅಂಕಿಅಂಶಗಳ ಮೇಲೆಯೇ ಅವಲಂಬಿಸದೆ ಸ್ವಲ್ಪ ನೋಡಿ ಹೇಳಬೇಕು. ಕೇಂದ್ರ ಸರ್ಕಾರದವರು ಎಷ್ಟು ಕೊಟ್ಟಿದ್ದಾರೆ, ಎಫ್.ಸಿ.ಐ.ನವರು ಎಷ್ಟು ಕೊಟ್ಟಿದ್ದಾರೆ, ನಿಮ್ಮದು ಎಷ್ಟು ಹಣ ರಿಲೀಸ್ ಆಗಿದೆ, ಎ.ಪಿ.ಎಂ.ಸಿ.ಯವರದ್ದು ಎಷ್ಟು, ಸಾಲ ತೆಗೆದುಕೊಂಡು ಬಂದಿರುವುದು ಎಷ್ಟು ಎಂದು ಎಲ್ಲವನ್ನೂ ನಾಳೆ ಸ್ವಲ್ಪ ದಯಪಿಟ್ಟು ಹೇಳಿ.

ಶ್ರೀ ಬಿ.ಸೋಮಶೇಖರ್: ನನಗೆ ಗೊತ್ತಿರುವ ಹಾಗೆ ಫೆಬ್ರವರಿ ಕೊನೆತನಕ ಸುಮಾರು 70 ಕೋಟಿ ರೂ.ಗಳಷ್ಟು ಎಫ್.ಸಿ.ಐ.ಯವರು ಮೆಕ್ಕೆಜೋಳವನ್ನು ಖರೀದಿ

ಮಾಡಿರತಕ್ಕದ್ದು. ಮಾರ್ಚ್‌ನಲ್ಲಿ ನೀವು ಏನು ಖರೀದಿ ಮಾಡಿದ್ದೀರಿ, ಅದು ಸುಮಾರು 52 ಕೋಟಿ ರೂ. ಆಗಿರಬಹುದು. ಅದನ್ನು ಎ.ಪಿ.ಎಂ.ಸಿ.ಗಳಿಂದ ಮಾಡಿಸಿದ್ದು, ಏಕೆಂದರೆ ತಿದ್ದುಪಡಿ ತಂದು ಅವರ ಜುಟ್ಟನ್ನು ಹಿಡಿದುಕೊಂಡಿದ್ದೀರಲ್ಲ. ಇನ್ನು ಮೂರೂವರೆ ಲಕ್ಷ ಟನ್ ಮಾತ್ರ ಆಗಿರತಕ್ಕದ್ದು. ಇನ್ನೂ ಎಷ್ಟು ಟನ್ ಬಾಕಿ ಇದೆ, ಮತ್ತು ಅದಕ್ಕೆ ಏನು ಮಾಡಿದ್ದೀರಿ? ಈಗ ನಾನು ಏನು ಕೇಳುತ್ತೇನೆ ಎಂದರೆ ನೂರು ಕೋಟಿ ರೂ. ಎಂದು ಹೇಳುತ್ತಿದ್ದೀರಲ್ಲಾ, ಆ ನೂರು ಕೋಟಿ ರೂ.ನಲ್ಲಿ ಎಫ್.ಸಿ.ಐ.ನವರು ಎಷ್ಟು ಖರೀದಿ ಮಾಡಿದ್ದಾರೆ? ಎ.ಪಿ.ಎಂ.ಸಿ.ಗಳವರು ಎಷ್ಟು ದುಡ್ಡು ಕೊಟ್ಟರು ಮತ್ತು ಸರ್ಕಾರದಿಂದ ಎಷ್ಟು ಹಣ ರಿಲೀಸ್ ಮಾಡಿದ್ದೀರಿ ಇದರ ಬಗ್ಗೆ ನಿಮ್ಮ ಉತ್ತರದಲ್ಲಿ ಹೇಳಬೇಕು. ಮತ್ತೆ ಎರಡು-ಮೂರು ತಿಂಗಳಿಂದ ನುಸಿ ರೋಗ ಬಂದು ತೆಂಗಿನ ಬೆಳೆ ಹಾಳಾಗುತ್ತಿದೆ ಎಂದು ಎಲ್ಲಾ ಸದಸ್ಯರುಗಳೂ ಹೇಳಿದ್ದಾರೆ. ಮಾನ್ಯ ಭೈರೇಗೌಡರು ಒಂದು ತಾಲ್ಲೂಕಿಗೆ ಹೋಗಿ ನೀರಾ ಇಳಿಸತಕ್ಕ ಕಾರ್ಯಕ್ರಮವನ್ನು ಮಾಡಿದ್ದರು. ನಾವೂ ಕೂಡ ಎಲ್ಲರೂ ಹೇಳಿದ್ದೇವೆ. ತೆಂಗಿನ ಬೆಳೆ ಹಾಳಾಗಿದೆ. ಅದನ್ನು ತಕ್ಷಣ ಮಾಡುವುದಕ್ಕೆ, ಅದರ ಬಗ್ಗೆ ತೀರ್ಮಾನ ಕೊಡುವುದಕ್ಕೆ ಏಕೆ ಇನ್ನೂ ಮೀನಾಮೇಷ ಎಣಿಸುತ್ತಿದ್ದೀರಿ? ಏಕೆಂದರೆ ಇವತ್ತು ಅದು ಉತ್ತಮವಾದಂಥ ಕಾರ್ಯಕ್ರಮ ಎಂದು ವೈಜ್ಞಾನಿಕವಾಗಿಯೂ ಕೂಡ ಹೇಳಿದ್ದಾರೆ. ಅದನ್ನೂ ಕೂಡ ತಾವು ಮಾಡಲಿಲ್ಲ. ರೈತರ ಪರವಾಗಿ ಇರತಕ್ಕಂಥ ಯಾವುದಾದರೂ ಒಂದು ತೀರ್ಮಾನವನ್ನು ಈ ಒಂದೂವರೆ ವರ್ಷದಲ್ಲಿ ನೀವು ಮಾಡಿರತಕ್ಕದ್ದನ್ನು ಹೇಳುತ್ತೀರಾ? ಸುಮ್ಮನೆ ಬರೇ ಸ್ಟೇಟ್‌ಮೆಂಟ್‌ಗಳು ಬರುತ್ತಿವೆ, ಸೆಮಿನಾರ್‌ಗಳು ಆಗುತ್ತಿವೆ, ಕಾನ್‌ಫರೆನ್ಸ್‌ಗಳು ಆಗುತ್ತಿವೆ. ಆದರೂ ಕೂಡ ರೈತರ ಮತ್ತು ಕೂಲಿಗಾರರ ಪರಿಸ್ಥಿತಿ ಏನೂ ಬದಲಾವಣೆಯಾಗಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳತಕ್ಕದ್ದು ಇಷ್ಟೆ. ಕೆಲವು ನಿರ್ಧಾರಗಳನ್ನು ತಾವು ಘೋಷಣೆ ಮಾಡಬೇಕು. ಮೊದಲನೆಯದಾಗಿ ರಾಜ್ಯದಾದ್ಯಂತ ಎಲ್ಲವೂ ಬರಪೀಡಿತ ಪ್ರದೇಶವೆಂದು ಮಾಡಬೇಕು. ಮಾನ್ಯ ಅಧ್ಯಕ್ಷರೇ, ತಾವೇ ಸೂಚನೆ ಕೊಟ್ಟ ಹಾಗೆ ಸರ್ಕಾರದವರು ಆಲ್‌ಪಾರ್ಟಿ ಡೆಲಿಗೇಶನ್‌ನ್ನು ಕೇಂದ್ರಸರ್ಕಾರಕ್ಕೆ ತೆಗೆದುಕೊಂಡು ಹೋಗಬೇಕು. ಅದಕ್ಕೆ ನೀವು ಸರಿಯಾದಂಥ ಮಾಹಿತಿಗಳನ್ನು ಸಂಗ್ರಹಣೆ ಮಾಡಿ. ಅವರ ಪ್ರೊಫಾರ್ಮ ಪ್ರಕಾರ ಯಾವ್ಯಾವ ಹೆಡ್‌ನಲ್ಲಿ ಎಷ್ಟೆಷ್ಟು ಹಣ ಕೇಳಬೇಕು ಎನ್ನುವುದನ್ನು ಒಳಗೊಂಡ ಮೆಮೊರೇಂಡಮ್ ಅನ್ನು ತಯಾರು ಮಾಡಿ ಅದನ್ನು ಕೊಡತಕ್ಕಂಥ ಕೆಲಸವನ್ನು ನೀವು ಮಾಡಬೇಕು. ಅಲ್ಲಿಯತನಕ ರೈತರಿಂದ ಅದು ಸಹಕಾರಿ ಬ್ಯಾಂಕುಗಳಿರಬಹುದು ಅಥವಾ ಯಾವ ಬ್ಯಾಂಕೇ ಇರಬಹುದು, ಎಲ್ಲ ಸಾಲ ವಸೂಲಾತಿ ಮಾಡತಕ್ಕದ್ದನ್ನು ನಿಲ್ಲಿಸಬೇಕು. ಮತ್ತು ತಕ್ಷಣ ಬ್ಯಾಂಕರ್ ಮೀಟಿಂಗ್‌ಗಳನ್ನು ಕರೆಯಬೇಕು. ಏಕೆಂದರೆ ಡೆವಲಪ್‌ಮೆಂಟ್ ಕಮೀಷನರ್ ಅವರ

ಅಧ್ಯಕ್ಷತೆಯಲ್ಲಿ ಬ್ಯಾಂಕರ್ಸ್ ಸಮಿತಿ ಎಂದು ಇದೆ. ಅವರಿಗೆ ಸೂಚನೆ ಕೊಟ್ಟು ಷೆಡ್ಯೂಲ್ಡ್ ಬ್ಯಾಂಕುಗಳಿಂದಲೂ ಕೂಡ ಯಾವುದೇ ಸಾಲ ವಸೂಲಿ ಮಾಡಬಾರದು ಎಂದು ರಾಜ್ಯ ಸರ್ಕಾರದಿಂದ ಸೂಚನೆಯನ್ನು ಕೊಡಬೇಕಾಗುತ್ತದೆ. ಮತ್ತೆ ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡತಕ್ಕದ್ದು ಒನೂ ಕಷ್ಟವಾಗುವುದಿಲ್ಲ ಅದನ್ನು ಸಹ ಕೂಡಲೇ ಮಾಡಬೇಕು. ಹಾಗೆಯೇ ಬಡ್ಡಿ ಮನ್ನಾ ಮಾಡಬೇಕೆಂದು ಹೋದ ಅಧಿವೇಶನದಿಂದ ನಾವು ಹೇಳುತ್ತಿದ್ದೇವೆ. ನೀವು ಮಾತ್ರ ಅದನ್ನು ಕಿವಿಗೇ ಹಾಕಿಕೊಂಡಿಲ್ಲ. ಆದ್ದರಿಂದ ಬಡ್ಡಿ ಮನ್ನಾ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ರೈತರಿಗೆ ಇದರಿಂದ ಸ್ವಲ್ಪಮಟ್ಟಿಗಾದರೂ ಸಹಾಯವಾಗುತ್ತದೆ. ಮತ್ತೆ ನಮ್ಮ ಬಡವಿದ್ಯಾರ್ಥಿಗಳಿಗೆ, ಗಾಯದ ಮೇಲೆ ಬರೆ ಎಳೆದಹಾಗೆ ಒಂದು ಕಡೆ ಫೀಸ್ ಜಾಸ್ತಿ ಮಾಡಿದ್ದಾರೆ. ಇಂಜಿಯರಿಂಗ್, ಡಿಪ್ಲೊಮಾ ಮುಂತಾದವುಗಳಿಗೆ 30-40 ಸಾವಿರ ರೂಪಾಯಿ ಫೀಸ್ ಜಾಸ್ತಿ ಮಾಡಿದ್ದೀರಿ. ಈಗ ಅವರಿಗೆ ಫೀಸ್ ಕೊಡುವುದಕ್ಕೆ ದುಡ್ಡಿಲ್ಲ. ಬೆಳೆ ವಿಫಲವಾಗಿದೆ, ಕೂಲಿ ಸಿಗುತ್ತಿಲ್ಲ. ಆದ್ದರಿಂದ ಬಡವಿದ್ಯಾರ್ಥಿಗಳಿಗೆ ನೆರವಾಗಲು ಸರ್ಕಾರವೇ ಅವರ ಫೀಸ್‌ನ್ನು ಭರಿಸತಕ್ಕಂಥ ಕಾರ್ಯಕ್ರಮವನ್ನು ಮಾಡಬೇಕು. ಇಷ್ಟಾದರೂ ಆದಾಗ ಅವರಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತದೆ ಎಂದು ಹೇಳಿ ಮತ್ತೊಮ್ಮೆ ಈ ಸರ್ಕಾರ ಬರಪೀಡಿತ ಪರಿಸ್ಥಿತಿಯನ್ನು ಎದುರಿಸುವುದರಲ್ಲಿ ನಮ್ಮ ನಿರೀಕ್ಷೆಯ ಮಟ್ಟಕ್ಕೆ ನಿಜವಾಗಿಯೂ ಬಂದಿಲ್ಲ, ನಮಗೆ ಬಹಳ ನಿರಾಸೆಯಾಗಿದೆ. ಆದ್ದರಿಂದ ಕೇಂದ್ರಸರ್ಕಾರಕ್ಕೆ ಸಂಪೂರ್ಣವಾದಂಥ ಮಾಹಿತಿಯನ್ನು ಕೊಡಬೇಕು. ಜೊತೆಗೆ ಎಲ್ಲಾ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಬೇಕೆಂದು ಹೇಳಿ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್.ಚಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಅಧ್ಯಕ್ಷರೇ, ಈ ಬಾರಿ ನಮಗೆಲ್ಲರಿಗೂ ಗೊತ್ತಿರುವ ರೀತಿಯಲ್ಲಿ ಬರಗಾಲ ಬಡರೈತರಿಗೆ ಒಂದು ಕಷ್ಟದ ಪರಿಸ್ಥಿತಿಯನ್ನು ತಂದುಕೊಟ್ಟಿದೆ. ಕಳೆದ ವರ್ಷ ಏನು ಮುಂಗಾರು ಮಳೆ ಹೆಚ್ಚಾಗಿ ಬಿದ್ದು ನಾವೇನು ಸಂತೋಷ ಪಟ್ಟಿದ್ದೆವು, ಈ ಬಾರಿ ಅಷ್ಟೇ ಮುಂಗಾರಿನಲ್ಲಿ ದುಃಖ ಪಡತಕ್ಕಂಥ ಸ್ಥಿತಿ ನಮ್ಮ ಮುಂದಿದೆ. ಕಳೆದ ಮೂರು ತಿಂಗಳಿಂದ ಇಲ್ಲಿಯವರೆಗೆ ಕೆಲವು ತಾಲ್ಲೂಕುಗಳಲ್ಲಿ ಎರಡು-ಮೂರು ಪರ್ಸೆಂಟ್ ಬಿತ್ತನೆಯಾಗಿದ್ದರೂ ಅದು ಯಾವುದೂ ಬಿತ್ತನೆ ಬೆಳೆ ರೂಪದಲ್ಲಿ ಬರಲಿಕ್ಕೆ ಆಗಿಲ್ಲ. ಅಂತಹ ಪರಿಸ್ಥಿತಿ ಸರ್ಕಾರ ಮತ್ತು ನಮ್ಮೆಲ್ಲರ ಗಮನಕ್ಕೆ ಇದೆಯೆನ್ನುವುದನ್ನು ನಾವು ಯಾರೂ ಸುಳ್ಳು ಎಂದು ಹೇಳುವುದಕ್ಕೆ ಆಗುವುದಿಲ್ಲ. ಇಷ್ಟೆಲ್ಲ ರೈತರ ಸಮಸ್ಯೆಯನ್ನು ನಾವು ನೋಡುತ್ತಾ ಇರುವಾಗ ಮಳೆ ಯಾಕೆ ಆಗಿಲ್ಲ, ಮಳೆ ಬೀಳಬೇಕಾಗಿತ್ತು ಎಂದು ಚರ್ಚೆ ಮಾಡುವುದು ಬೇಡ. ಏಕೆಂದರೆ ಮಳೆ ನಮ್ಮನ್ನು ಕೇಳಿ ಬರುವುದಿಲ್ಲ ಅಥವಾ ನಾವು ಎಲ್ಲರೂ ಬೇಡಿದರೂ ಮಳೆಯಾಗುವುದಿಲ್ಲ. ಆದರೆ ಇಂತಹ ಸಂದರ್ಭದಲ್ಲಿ ರೈತರ ಕಷ್ಟಕ್ಕೆ ನಾವು ಯಾವ

ರೀತಿ ಸ್ಪಂದಿಸಬೇಕು ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಆ ಪಕ್ಷ ಇದ್ದಾಗ ಏನು ಮಾಡಿದರು, ನಿಮ್ಮ ಪಕ್ಷ ಇದ್ದಾಗ ಏನು ಮಾಡಿದರು, ಕೇಂದ್ರ ಸರ್ಕಾರ ಎಷ್ಟು ಕೊಟ್ಟರು ಎನ್ನುವುದಕ್ಕಿಂತ ನಮ್ಮ ರಾಜ್ಯದಲ್ಲಿ ಆಡಳಿತ ಮಾಡತಕ್ಕಂಥ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡೂ ಸೇರಿ ಯಾವುದೇ ಇಲಾಖೆಯಲ್ಲಿ ಯಾವುದನ್ನು ಬೇಕಾದರೂ ಕೊರತೆ ಮಾಡಬಹುದು. ಆದರೆ ರೈತರ ಸಮಸ್ಯೆಗೆ ಪ್ರಥಮವಾಗಿ ಸ್ಪಂದಿಸತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಕೆ.ಇ.ಬಿ.ಯಲ್ಲಿ ಅರ್ಜಿ ಹಾಕಿದರ ಮಿನಿಮಮ್ 25 ಸಾವಿರ ರೂಪಾಯಿ ಕೊಡಲೇಬೇಕಾಗಿದೆ. ಇಂತಹ ಕಷ್ಟಕಾಲದಲ್ಲಿ ರೈತರು ಯಾವರೀತಿ ವ್ಯವಸಾಯವನ್ನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕು.

4.10 ಪಿಎಂ

ಮೊನ್ನೆ ಸಹಕಾರ ಸಚಿವರು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದೇವೆಂದು ಹೇಳಿದರು. ನಮ್ಮ ತಾಲ್ಲೂಕಿನಲ್ಲಿ ಪಿ.ಎಲ್.ಡಿ. ಬ್ಯಾಂಕಿನವರಿಗೆ ಎಷ್ಟು ಎಂದು ಕೇಳಿದರೆ, ಇಡೀ ತಾಲ್ಲೂಕಿನ ಜನತೆಗೆ ಬರೀ 15 ಸಾವಿರ ಕಡಿಮೆಯಾಗುತ್ತದೆ ಎಂದು ಹೇಳಿದರು. ಇಂತಹ ಒಂದು ಪ್ರಚಾರವನ್ನು ಕೊಟ್ಟು, ಈ ಕಷ್ಟಕಾಲದಲ್ಲಿ ಇಷ್ಟೊಂದು ಕಡಿಮೆ ದರದಲ್ಲಿ ಮಾಡತಕ್ಕ ಔಚಿತ್ಯವೇನು? ''ಇಲ್ಲ'' ಎಂದು ಹೇಳಿದರೆ ಸಂತೋಷವಾಗುತ್ತೆ. ನಮ್ಮ ರಾಮಯ್ಯನವರು ಒಂದು ಮಾತು ಹೇಳಿದರು. ಈ ಬಡ್ಡಿ ಮನ್ನಾ ಮಾಡುವುದಕ್ಕಿಂತ, ರೈತರು ಏನು ಕಷ್ಟದಲ್ಲಿದ್ದಾರೆ, ಅವರಿಗೆ ಸಹಾಯ ಮಾಡಿ, ಅವರಿಗೆ ಉತ್ತೇಜನ ಮಾಡಿ, ಅವರು ಒಳ್ಳೆಯ ಬೆಳೆ ಬೆಳೆಯುವುದಕ್ಕೆ ಮತ್ತು ಬೆಳೆದ ಬೆಳೆಗೆ ಬೆಲೆ ಸಿಗುವ ಹಾಗೆ ಮಾಡಿಕೊಡಬೇಕು. ಈ ರೀತಿಯ ಬಡ್ಡಿ ಮನ್ನಾ ಮಾಡುವ ಕಣ್ಣೊರಸುವ ಕೆಲಸವನ್ನು ಬಿಟ್ಟು ನೇರವಾಗಿ ರೈತರಿಗೆ ಸಹಾಯ ಮಾಡಬೇಕು. ಇವತ್ತು 8 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ಇದುವರೆಗೆ ಅಂದರೆ ಕಳೆದ ಮೂರು ತಿಂಗಳಿಂದಲೂ ಯಾವುದೇ ತಾಲ್ಲೂಕಿನಲ್ಲಿ ಈ ರೀತಿ ವಿದ್ಯುತ್ ಕೊಟ್ಟಿರುವುದು ಕಾಣುತ್ತಾ ಇಲ್ಲ. ಇನ್ನು ಕುಡಿಯುವ ನೀರು. ಬಹಳ ಪ್ರಮುಖವಾಗಿ ಇಂತಹ ಬರಗಾಲದಲ್ಲಿ ಜಾನುವಾರುಗಳಿಗೆ ಮತ್ತು ಜನಗಳಿಗೆ ಈ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ನಮ್ಮ ತಾಲ್ಲೂಕಿನಲ್ಲಿ ಬಹಳ ಹತ್ತಿರದಿಂದ ನೋಡಿದ್ದೇನೆ. ಒಂದು ವಾರಗಟ್ಟಲೆ ಕೆ.ಇ.ಬಿ.ನಲ್ಲಿ ಟ್ರಾನ್ಸ್‌ಫಾರ್ಮರ್ ಕೆಟ್ಟುಹೋಗಿ ಕುಡಿಯುವ ನೀರಿನ ವ್ಯವಸ್ಥೆ ನಿಂತುಹೋಗಿದೆ. ಒಂದು ವಾರ ಅಥವಾ ಹತ್ತು ದಿವಸವಾದರೂ ಬೇರೆ ಟ್ರಾನ್ಸ್‌ಫಾರ್ಮರ್ ಹಾಕಿರುವುದಿಲ್ಲ. ಪಕ್ಕದಲ್ಲಿ ಬಾವಿಯಲ್ಲಿ ನೀರು ಸಿಕ್ಕುವುದಿಲ್ಲ, ಹ್ಯಾಂಡ್ ಬೋರ್‌ವೆಲ್‌ನಲ್ಲಿ ನೀರು ಸಿಕ್ಕುವುದಿಲ್ಲ, ಇಂತಹ ಸಂದರ್ಭದಲ್ಲಿ ಕೆ ಪಿ ಟಿ ಸಿ ಎಲ್ ನವರು ವಾರಗಟ್ಟಲೆ, ಕುಡಿಯುವ ನೀರಿಗೆ ಇರುವಂಥ ಟ್ರಾನ್ಸ್‌ಫಾರ್ಮರನ್ನು

ಸಪ್ಲೈ ಮಾಡದೇ ಇದ್ದರೆ, ಆ ಜನ ನೀರು ಕುಡಿಯುವುದಕ್ಕೆ ಎಲ್ಲಿಗೆ ಹೋಗಬೇಕು ಎಂಬುದನ್ನು ದಯಮಾಡಿ ಸರ್ಕಾರ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೋರ್‌ವೆಲ್‌ಗಳು ಕೆಟ್ಟುಹೋಗಿರುವ ಬಗ್ಗೆ, ಇವತ್ತು ಜಿಲ್ಲಾ ಪಂಚಾಯಿತ್ತಿಗಳಲ್ಲಿರತಕ್ಕ ವ್ಯವಸ್ಥೆ ಏನಾಗಿದೆಯೆಂದರೆ ಇಂಜಿನಿಯರ್ ವಿಭಾಗದಿಂದ ಅವುಗಳನ್ನು ರಿಪೇರಿ ಮಾಡಲಿಕ್ಕೆ ತಾಲ್ಲೂಕು ಪಂಚಾಯಿತ್ತಿಗಳಿಗೆ ಕೊಟ್ಟಿದ್ದಾರೆ. ಆ ತಾಲ್ಲೂಕು ಪಂಚಾಯಿತ್ತಿಯವರು ನಮಗೆ ಬೇಕಾದಂಥ ವೆಹಿಕಲ್ ಇಲ್ಲವೆಂದು ಹೇಳುತ್ತಾರೆ. ರಿಪೇರಿ ಮಾಡಲಿಕ್ಕೆ ಸರಿಯಾದ ರೀತಿಯ ಮೆಟೀರಿಯಲ್ ಇಲ್ಲವೆಂದು ಹೇಳುತ್ತಾರೆ. ರಿಪೇರಿ ಮಾಡತಕ್ಕ ಕಾರ್ಮಿಕರಿಗೆ ಪೇಮೆಂಟ್ ಕೊಡಲಿಕ್ಕೆ ಜಿಲ್ಲಾಪಂಚಾಯಿತ್ತಿಯವರು ನೇರವಾಗಿ ಹಣ ಬಿಡುಗಡೆ ಮಾಡುವುದಿಲ್ಲವೆಂದು ಹೇಳುತ್ತಾರೆ. ಯಾವ ಊರಿಗೆ ಹೋದರೂ ಬೋರ್‌ವೆಲ್ ಕೆಟ್ಟು ಹೋಗಿರುತ್ತವೆ. 15-20 ದಿವಸ ಕಳೆದರೂ ರಿಪೇರಿಯಾಗುವುದಿಲ್ಲ. ನಾವು ಹೊಸದಾಗಿ ಬೋರ್‌ವೆಲ್ ಕೊರೆದು ನೀರಿನ ವ್ಯವಸ್ಥೆ ಮಾಡದೇ ಇದ್ದರೂ, ಇರತಕ್ಕ ವ್ಯವಸ್ಥೆಯಲ್ಲೂ ನಾವು ಸರಿಯಾದ ರೀತಿಯಲ್ಲಿ ಕೊಡದೇ ಇದ್ದರೆ, ಇಂತಹ ಒಂದು ಕಷ್ಟಕಾಲದಲ್ಲಿ ರೈತರು ನೀರು ಕುಡಿಯುವ ಬದಲು ಬೇರೆ ಏನು ಕುಡಿಯಬೇಕಾಗುತ್ತೆ ಎನ್ನುವುದನ್ನು ಸರ್ಕಾರ ದಯವಿಟ್ಟು ಯೋಚನೆ ಮಾಡಬೇಕು. ಇವತ್ತು ಜಿಲ್ಲಾಧಿಕಾರಿಗಳ ಮೂಲಕ ಬೋರ್‌ವೆಲ್ ಕೊರೆಸುವುದಕ್ಕೆ ಹಣ ಬಿಡುಗಡೆ ಮಾಡಿದ್ದೇವೆಂದು ಕೆಲವು ಜಿಲ್ಲೆಗಳಲ್ಲಿ ಪ್ರಕಟ ಮಾಡಿದ್ದಾರೆ. ಆದರೆ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಕೊಟ್ಟಿಲ್ಲ. ಮೊನ್ನೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಸಭೆ ಕರೆದಾಗಲೂ ನಾವು ಹೇಳಿದ್ದೇವೆ. ಇವತ್ತು ಹಳೆಯ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಕ್ಕಾಗದೇ ಇರತಕ್ಕ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಇದೆ. ಅದರಲ್ಲೂ ನಮ್ಮ ಸೋಮಶೇಖರ್‌ರವರು ಹೇಳಿದ ಹಾಗೆ, ನಾಗಮಂಗಲ, ಕೆ.ಆರ್.ಪೇಟೆ, ಮಳವಳ್ಳಿ, ಶ್ರೀರಂಗಪಟ್ಟಣ ಕೆಲವು ಭಾಗಗಳಿಗೆ ಮಳೆ ಇಲ್ಲ ಮತ್ತು ಯಾವುದೇ ತರದ ನೀರಿನ ಸೌಲಭ್ಯಗಳಿಲ್ಲದೆ ಜನ ತೊಂದರೆಯಲ್ಲಿದ್ದಾರೆ, ಸ್ವಲ್ಪ ಭಾಗ ಅಂದರೆ 20-30 ಪರ್ಸೆಂಟ್ ಹೇಮಾವತಿ ನೀರು ಇದ್ದರೂ ಸಹ, ನಾವು ಟೈಲೆಂಡ್ ಆಗಿರುವುದರಿಂದ ಆ ನೀರನ್ನು ಬಿಟ್ಟರೆ, ಬರುವುದಕ್ಕೆ ಸುಮಾರು 15 ದಿವಸ ತೆಗೆದುಕೊಳ್ಳುತ್ತದೆ. ಅದೂ ಸರಿಯಾದ ರೀತಿಯಲ್ಲಿ, ನೀರು ಸಮರ್ಪಕವಾಗಿ ರೈತರಿಗೆ ಉಪಯೋಗ ಆಗತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಇಂತಹ ಕಷ್ಟಕಾಲದಲ್ಲಿ ಜಾನುವಾರುಗಳಿಗೆ ಮೇವನ್ನು ಒದಗಿಸುವುದಾಗಲೀ, ಅಥವಾ ಜನಗಳು ಕೂಲಿ ಮಾಡಲಿಕ್ಕೆ ಏನಾದರೂ ಸರ್ಕಾರದಿಂದ ಕಾರ್ಯಕ್ರಮ ಹಾಕಿಕೊಂಡು ಕೊನೇಪಕ್ಷ ಆ ಸ್ಥಳದಲ್ಲಿ ಅವರಿಗೇನಾದರೂ ಕೂಲಿ ಮಾಡುವುದಕ್ಕೆ ಅವಕಾಶ ಸಿಗತಕ್ಕಂಥ ಸರ್ಕಾರದ ಕಾರ್ಯಕ್ರಮವನ್ನು ರೂಪಿಸಬೇಕಾಗಿ ಒತ್ತಾಯಿಸುತ್ತೇನೆ. ಇವೆಲ್ಲಕ್ಕಿಂತ ಮುಂಚಿತವಾಗಿ, ನನ್ನ ತಾಲ್ಲೂಕಿನಲ್ಲಿ ಕಳೆದ ಎರಡು ತಿಂಗಳಿಂದ ಕುಡಿಯುವ ನೀರಿನ ಸಮಸ್ಯೆ ತುಂಬಾ

ಏಕೋಪಕ್ಕೆ ಹೋಗಿದೆ. ಇದು ಮುಖ್ಯ ಮಂತ್ರಿಗಳ ಜಿಲ್ಲೆಯಾಗಿರುವುದರಿಂದ, ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ನಮ್ಮ ಜಿಲ್ಲೆಯಲ್ಲಿಯೇ ಈ ರೀತಿಯಾದರೆ, ಮತ್ತೊಂದು ಜಿಲ್ಲೆಯಲ್ಲಿ ಹೇಗೆ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಇಂತಹ ಒಂದು ಕಷ್ಟದ ಪರಿಸ್ಥಿತಿಯನ್ನು ತಿಳಿಸುವ ಸಲುವಾಗಿ ಅಧಿಕಾರಿಗಳ ಮೂಲಕ ಈಗಾಗಲೇ ಸರ್ಕಾರಕ್ಕೆ ಬಂದಿರುತ್ತದೆ. ಇದಕ್ಕೆ ತಕ್ಷಣ ಏನಾದರೊಂದು ಪರಿಹಾರವನ್ನು ಕಂಡುಹಿಡಿಯಬೇಕು. ಇರುವಂಥ ಬೋರ್‌ವೆಲ್‌ಗಳಿಗೆ ರಿಪೇರಿ ಮಾಡುವಂಥಾದ್ದು ಮತ್ತು ಮೇಜರ್ ವಾಟರ್ ಸಪ್ಲೈ ಮತ್ತು ಮಿನಿ ವಾಟರ್ ಸಪ್ಲೈಗೆ ಕೆ.ಇ.ಬಿ.ಯಿಂದ ಆಗತಕ್ಕಂಥ ಸಮಸ್ಯೆಯನ್ನು ತಕ್ಷಣ ಪರಿಹಾರ ಮಾಡತಕ್ಕಂಥಾದ್ದು ಮತ್ತು ಹೊಸದಾಗಿ ಬೇಕಾಗತಕ್ಕ ಕಡೆಗಳಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡತಕ್ಕಂಥ ಕೆಲಸ ಮತ್ತು ದನಕರುಗಳಿಗೆ ಮತ್ತು ಜನಗಳಿಗೆ ಇನ್ನಾವುದೇ ರೀತಿಯಲ್ಲಿ ಇರತಕ್ಕಂಥ ಕಷ್ಟವನ್ನು ಯಾವ ರೀತಿ ಪರಿಹಾರ ಮಾಡಬೇಕೆಂಬುದನ್ನು ನಮ್ಮ ಸರ್ಕಾರ ಮಾಡಬೇಕು. ಇವತ್ತು ಕೇಂದ್ರಸರ್ಕಾರ ಹಣ ಕೊಡಲಿಲ್ಲವೆಂದು, ರಾಜ್ಯಸರ್ಕಾರ ಕೈಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಅವರು ಯಾವಾಗ ಕೊಡುತ್ತಾರೋ ಅಥವಾ ಅದು ಯಾವರೀತಿ ಬರುತ್ತದೋ ಗೊತ್ತಿಲ್ಲ. ಆದರೆ, ಅದಕ್ಕಿಂತ ಮುಂಚಿತವಾಗಿ ಇಲ್ಲಿರುವ ರೈತರಿಗೆ ರಾಜ್ಯ ಸರ್ಕಾರ ಸ್ಪಂದಿಸತಕ್ಕ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕಾಗುತ್ತದೆ. ತಾವು ಇವೆಲ್ಲದರ ಬಗ್ಗೆ ಸೀರಿಯಸ್ಸಾಗಿ ಕೆಲಸವನ್ನು ಮಾಡುವುದರ ಮೂಲಕ ರೈತರಿಗೆ ಬಂದಿರತಕ್ಕ ಈ ಕಷ್ಟದ ಪರಿಸ್ಥಿತಿಯಲ್ಲಿ ನಾವು ರಾಜಕಾರಣವನ್ನು ಬೆರೆಸದೆ ಕಾರ್ಯ ಮಾಡಬೇಕು. ಪಕ್ಷ ರಾಜಕಾರಣ ಮತ್ತು ಇನ್ನಾವುದೇ ರಾಜಕಾರಣವನ್ನು ನಾವು ಬದಿಗೊತ್ತಿ ಪ್ರಾಮಾಣಿಕವಾಗಿ ಈ ಕಷ್ಟಕ್ಕೆ ಪರಿಹಾರವನ್ನು ಕಂಡುಹಿಡಿದುಕೊಳ್ಳುವ ರೀತಿಯಲ್ಲಿ ಚರ್ಚೆ ಮಾಡಿ, ಸರ್ಕಾರ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಒತ್ತಾಯ ಮಾಡಿ, ನನಗೆ ಕೊಟ್ಟಂಥ ಅವಕಾಶದಲ್ಲಿ ಈ ಎರಡು ಮಾತುಗಳನ್ನು ಹೇಳಿ, ತಮಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

+ ಶ್ರೀ ಕೆ.ಹೆಚ್.ಹನುಮ ಗೌಡ(ಹಾಸನ): ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ತಲೆದೋರಿರುವ ಬರ ಪರಿಸ್ಥಿತಿಯ ಬಗ್ಗೆ ಬೆಳಗಿನಿಂದ ವಿಫುಲವಾಗಿ ಚರ್ಚೆ ಮಾಡಿದ್ದೇವೆ. ನಾನು 1972 ರಿಂದ ನಾಲ್ಕು ಸಾರಿ ಚುನಾವಣೆಯಲ್ಲಿ ಗೆದ್ದಿದ್ದೇನೆ. ಪ್ರತಿಸಾರಿಯೂ ಈ ರಾಜ್ಯಕ್ಕೆ ಎರಡು ವರ್ಷಕ್ಕೆ, ಮೂರು ವರ್ಷಕ್ಕೊಮ್ಮೆ ಬರಗಾಲ ಬರುತ್ತಾ ಇದೆ. ಈ ಶಾಸನ ಸಭೆಯಲ್ಲಿ ಚರ್ಚೆಯಾಗುತ್ತಾ ಇದೆ. ಹಳ್ಳಿಯ ಪಾಪದ ಜನರಿಗೆ ಸ್ವಲ್ಪ ದಿನಸಿ, ಇಲ್ಲದೇ ಹೋದರೆ ಅಪರೂಪಕ್ಕೆ ಒಂದೊಂದು ಕೆಲಸ ಆಗುತ್ತದೆ. ಅದರಲ್ಲಿ ಅರ್ಧ ಭಾಗವನ್ನು ಕಂಟ್ರಾಕ್ಟರ್ ಹೊಡೆದುಕೊಳ್ಳುತ್ತಾನೆ. ಇನ್ನು

ಕಾಲು ಭಾಗವನ್ನು ಇಂಜಿನಿಯರ್ ಹೊಡೆಯುತ್ತಾನೆ, ಇನ್ನು ಕಾಲು ಭಾಗ ಈ ಬಡಪಾಯಿಗಳಿಗೆ ಕೂಲಿ ಮಾಡಿದ್ದಕ್ಕೆ ಸಿಗುತ್ತದೆ. ಇದನ್ನು ಕೊಟ್ಟುಕೊಂಡು ಅಲ್ಲಿಗೆ ಮುಗಿಸಿಬಿಡುತ್ತಾರೆ. ಮಳೆ ಬರುತ್ತೆ, ಎಲ್ಲವನ್ನೂ ಮಾರಿಕೊಂಡು ಬಿಡುತ್ತಾರೆ. ಮತ್ತೆ ಶುರುವಾಗುವುದು ಯಾವಾಗ ಎಂದರೆ, ಮತ್ತೆ ಮಳೆ ಹೋದಾಗ. ಮತ್ತೆ ಅದೇ ಚರ್ಚೆ, ಅದೇ ಪ್ರೊಸೀಜರ್, ಅದೇ ಆ ಪಾಪದವರಿಗೆ ಭಿಕ್ಷೆ ಕೊಡುವ ಹಾಗೆ ಒಂದು ಚೂರು ಅನ್ನ, ಒಂದು ಚೂರು ದುಡ್ಡು ಕೊಟ್ಟುಬಿಟ್ಟು ಈ ರೀತಿ ಕಾಲ ತಳ್ಳುತ್ತಾ ಇದ್ದಾರೆ. ನಾನು ಕೇಳುತ್ತೇನೆ, ದೇವರಂತೂ ಇವರನ್ನು ಕ್ಷಮಿಸುವುದಿಲ್ಲ. ಏನಾದರೂ ಅಪರೂಪಕ್ಕೆ ಒಂದು ಸಾರಿ ಹಾಗಾದರೆ, ಮಾಡದೇ ಹೋದರೆ ಅಯ್ಯೋ ಪಾಪ ಎಂದು ಯಾರಾದರೂ ಅಂತಾರೆ. ನಿರಂತರವಾಗಿ ಆ ಬಡಪಾಯಿಗಳ ಮೇಲೆ ಈ ರೀತಿ ನಡೆಯುತ್ತಾ ಇದೆಯಲ್ಲಾ ಈ ದೇಶದಲ್ಲಿ ಅವರ ಸಹನೆಯನ್ನು ಎಷ್ಟು ಸಾರಿ, ಎಷ್ಟು ವರ್ಷಗಳ ಕಾಲ ಈ ಸರ್ಕಾರದ ನಿರೀಕ್ಷಣೆಯಲ್ಲಿ ಹೋಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಚೆಪಡುತ್ತೇನೆ. ಮಾನ್ಯ ಖರ್ಗೆ ಸಾಹೇಬರು ಇಲ್ಲಿಯೇ ಇದ್ದಾರೆ. 1972ರಲ್ಲಿ ನಾನು ಈ ಕಡೆಯೇ ಇದ್ದೆ. ಅವರು ಆ ಕಡೆ ಇದ್ದರು. ಬಹಳ ಭೀಕರ ಬರಗಾಲ ಬಂತು. ಆ ಬರಗಾಲದ ಚರ್ಚೆಯಲ್ಲಿ ನೀವು ಭಾಗವಹಿಸಿದ್ದು ನನಗೆ ಜ್ಞಾಪಕ ಇದೆ. ಜೊತೆಗೆ ಇನ್ನೂ ಅನೇಕ ಜನ ಮಾನ್ಯ ಸದಸ್ಯರುಗಳೂ ಮಾತನಾಡಿದರು. ಅದಕ್ಕಿಂತ ಹಿಂದಕ್ಕೆ ನಾನು ಹೋಗುವುದಿಲ್ಲ. ಅಲ್ಲಿಂದೀಚೆಗೆ ನಾನು ಲೆಕ್ಕ ಹಿಡಿದರೂ ಕೂಡ ಬಡವರಿಗೆ ಶಾಶ್ವತ ಪರಿಹಾರ ಮಾಡಲಿಲ್ಲ. ಹಳ್ಳಿಗಾಡಿನಲ್ಲಿರತಕ್ಕ ರೈತರು ಮತ್ತು ರೈತ ಕಾರ್ಮಿಕರು ನಾಲ್ಕು ವರ್ಷಕ್ಕೆ, ಮೂರು ವರ್ಷಕ್ಕೆ ಒಂದುಸಲ ಇಂತಹ ಕಷ್ಟಕ್ಕೆ ಸಿಕ್ಕಿಹಾಕಿಕೊಂಡು ಪ್ರಾಣ ಕಳೆದುಕೊಳ್ಳುತ್ತಾರೆ, ಆಸ್ತಿ ಕಳೆದುಕೊಳ್ಳುತ್ತಾರೆ, ಹೊಟ್ಟೆಗಿಲ್ಲದೆ ಸಾಯುತ್ತಾರೆ. ಇಷ್ಟೆಲ್ಲಾ ಇದ್ದರೂ ಕೂಡ ಅವರಿಗೊಂಡು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯತಕ್ಕ ಇಚ್ಛಾಶಕ್ತಿ ಈ ರಾಜಕಾರಣಿಗಳಿಗೆ, ಮತ್ತು ಮಂತ್ರಿಗಳಿಗೆ ಏಕೆ ಬರಲಿಲ್ಲವೆಂಬ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಶಾಶ್ವತ ಪರಿಹಾರಕ್ಕಾಗಿ ಏನೇನು ಕೇಳಬೇಕು ಮತ್ತು ತಮ್ಮ ಸಲಹೆಗಳು ಏನೇನು ಅವುಗಳೆಲ್ಲವನ್ನೂ ಕೊಡಿ. ಈಗಾಗಲೇ ಸೋಮಶೇಖರ್‌ರವರು ಹೇಳಿದ ಹಾಗೆ ಸರ್ವಪಕ್ಷದ ಸದಸ್ಯರೆಲ್ಲರೂ ಸೇರಿ, ಕೇಂದ್ರಕ್ಕೆ ಡೆಲಿಗೇಷನ್ ಹೋಗೋಣ, ಶಾಶ್ವತ ಪರಿಹಾರ ಕೊಡಿ ಎಂದು ಕೇಳೋಣ.

ಶ್ರೀ ಕೆ.ಹೆಚ್.ಹನುಮೇಗೌಡ: ಹೀಗೆ ಈ ಪದ್ಧತಿ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಅತ್ಯಂತ ವಿನಯದಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ದಯಮಾಡಿ ತಮ್ಮ ಶಕ್ತಿಯನ್ನೆಲ್ಲಾ ಕ್ರೋಢೀಕರಿಸಿ ಆ ಅಸಹಾಯಕ ಮುಗ್ಧಜನರೇನು

ಮೂರು-ನಾಲ್ಕು ವರ್ಷಕ್ಕೆ ಒಮ್ಮೆ ತೊಂದರೆಗೆ ಒಳಗಾಗುತ್ತಾರೆ ಆ ಕಷ್ಟದಿಂದ ಬಿಡುಗಡೆ ಮಾಡಲು ಶಾಶ್ವತವಾದ ಪರಿಹಾರದ ಕ್ರಮವನ್ನು ರೂಪಿಸಿಕೊಳ್ಳಬೇಕೆಂದು ಈ ಜನತೆಯ ಪರವಾಗಿ ವಿನಂತಿಸಿಕೊಳ್ಳುತ್ತೇನೆ. ಇದಕ್ಕೆಲ್ಲ ಶಾಶ್ವತವಾಗಿ ಪರಿಹಾರವನ್ನು ಕಂಡುಹಿಡಿಯಲು ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ. ಆದರೆ ಅದರಲ್ಲಿ ಕೇವಲ ಐ.ಎ.ಎಸ್. ಅಧಿಕಾರಿಗಳನ್ನೇ ಹಾಕಿಬಿಡಬೇಡಿ. ಏಕೆಂದರೆ ಅವರುಗಳಿಗೆ ಗ್ರಾಮಾಂತರ ಪ್ರದೇಶದ ಬಗ್ಗೆ ಅನುಭವವಿಲ್ಲ. ಬರೆಯಲು, ವರದಿ ನೀಡಲು ಒಂದಿಬ್ಬರನ್ನು ಹಾಕಿ. ಅನುಭವಸ್ಥ ರೈತರನ್ನು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಎಲ್ಲಾ ಭಾಗದಿಂದಲೂ ಸಮಿತಿಯಲ್ಲಿ ಹಾಕಿ. ಅವರಿಗೆ ಆರು ತಿಂಗಳು ಸಮಯ ಕೊಟ್ಟು ಆಗಾಗ್ಗೆ ಬರುವ ಬರಗಾಲದಿಂದ ಹೇಗೆ ಶಾಶ್ವತವಾಗಿ ಪರಿಹಾರವನ್ನು ಕಂಡುಕೊಳ್ಳಬಹುದು ಎಂಬ ಬಗ್ಗೆ ವರದಿ ನೀಡುವಂತೆ ಮಾಡಿ. ಆದ್ದರಿಂದ ಶಾಶ್ವತ ಬರಪರಿಹಾರಕ್ಕಾಗಿ ಒಂದು ಸಮಿತಿಯನ್ನು ಮಾಡಿ. ಸಮಿತಿಯ ಸದಸ್ಯರು ಸಭೆಗಳನ್ನು ಮಾಡಿ ರಾಜ್ಯದಾದ್ಯಂತ ಪ್ರವಾಸ ಮಾಡಿ ಪರಿಶೀಲನೆ ಮಾಡಲಿ. ಇಸ್ರೇಲ್ ಅಂತಹ ದೇಶದಲ್ಲಿ ಮಳೆಯಾಗುವುದೇ ಅಪರೂಪ. ಆದರೂ ಅಲ್ಲಿನ ಜನರು ನೆಮ್ಮದಿಯಿಂದ ಆರ್ಥಿಕವಾಗಿ ಸದೃಢವಾಗಿದ್ದಾರೆಂದು ಕೇಳಿದ್ದೇನೆ. ಸ್ವಲ್ಪ ಹಣ ಖರ್ಚಾದರೂ ಚಿಂತೆ ಇಲ್ಲ ಸಮಿತಿಯ ಸದಸ್ಯರುಗಳು ಹೊರಗಡೆಗೆ ಹೋಗಿ ಅಲ್ಲಿ ಬರಗಾಲ ಬಂದಾಗ ಅವರು ಜನರಿಗೆ ಯಾವ ರೀತಿಯಲ್ಲಿ ರಕ್ಷಣೆ ಕೊಡುತ್ತಾರೆ, ಶಾಶ್ವತವಾಗಿ ಪರಿಹಾರದ ಕೆಲಸವನ್ನು ಹೇಗೆ ಮಾಡುತ್ತಾರೆ ಎಂಬ ಬಗ್ಗೆ ವರದಿ ನೀಡಲು ಒಂದು ಸಮಿತಿಯನ್ನು ರಚನೆ ಮಾಡಿ. ಎಷ್ಟು ಸಾಧ್ಯವೋ ಅಷ್ಟು ಶಾಶ್ವತ ಬರಪರಿಹಾರ ಕ್ರಮವನ್ನು ಸರ್ಕಾರ ಮಾಡಬೇಕು. ಬರಗಾಲವು ದೈವದತ್ತವಾಗಿ ಬಂದದ್ದು ಎಂದು ಕೆಲವರು ಹೇಳಿದರು, ಅದು ನಿಜ. ನೀತಿ, ನಿಯಮ, ದೇವರು ಎಂಬ ಒಳ್ಳೆಯ ಭಾವನೆ ಇಟ್ಟುಕೊಂಡಿದ್ದರೆ ಅದು ಬರುತ್ತಿರಲಿಲ್ಲ. ಮಾನ್ಯ ಖರ್ಗೆಯವರೇ, ತಾವು ಪ್ರಭಾವಿ ರಾಜಕಾರಣಿಯಾಗಿದ್ದೀರಿ, ಇನ್ನೂ ಏನೇನೋ ಆಶೋತ್ತರವನ್ನು ಇಟ್ಟುಕೊಂಡಿದ್ದೀರಿ, ಜನರ ಆಶೀರ್ವಾದ ತಮಗೆ ಬೇಕು, ಆ ದೃಷ್ಟಿಯಿಂದ ತಮ್ಮ ಮನಸ್ಸನ್ನು ಇದರ ಕಡೆಗೆ ಹರಿಸಿ ಶಾಶ್ವತವಾದ ಪರಿಹಾರ ಕ್ರಮವನ್ನು ಮುಗ್ಧ ಜನರಿಗೆ ಒದಗಿಸಿ ಕೀರ್ತಿಶಾಲಿಗಳಾಗಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ, ತಾವೂ ಮುಖ್ಯಮಂತ್ರಿಗಳಿಬ್ಬರೂ ಸೇರಿಕೊಂಡು ಇದನ್ನು ಮಾಡಿ.

ಶ್ರೀ ಸಿ.ಬೈರೇಗೌಡ: ಹೋದ ಸಲ ಮಾನ್ಯ ಹನುಮೇಗೌಡರು ಮಾತನಾಡುತ್ತಾ ಮುಖ್ಯಮಂತ್ರಿಗಳು ಮಳೆ ಬರಿಸಿದರು ಎಂದು ಹೇಳಿದ್ದರು, ಅದು ಕಡತದಲ್ಲಿದೆ. ಅನಂತರ ಕೇಳಿದ್ದಕ್ಕೆ, ದೇವಸ್ಥಾನದಲ್ಲಿ ಆ ರೀತಿ ಯಾರೋ ಮಾತನಾಡುತ್ತಿದ್ದರು ಎಂದು ತಿಳಿಸಿದರು. ಆದರೆ ಇವತ್ತು ಮಾತನಾಡುತ್ತಾ ಮಳೆ ಬಂದಿಲ್ಲ, ಬರಗಾಲ

ಬಂದಿದೆಯೆಂದು ಹೇಳುತ್ತಿದ್ದಾರೆ. ತಾವು ಮುಖ್ಯಮಂತ್ರಿಗಳಿಗೆ ಹೇಳಿ ಮಳೆ ಬರಿಸಿ, ತಮ್ಮ ಮಾತನ್ನು ಹೇಗೆ ನಂಬುವುದು? ಮಳೆ ಬರಿಸುವಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ.

ಶ್ರೀ ಕೆ.ಹೆಚ್.ಹನುಮೇಗೌಡ: ಹೋದ ವರ್ಷ ಮಳೆ ಬಂದಿತ್ತು, ಕೆರೆಗಳು ತುಂಬಿದ್ದು ಸರಿಯಲ್ಲವೇ, ಈ ವರ್ಷ ಮಳೆ ಬಂದಿಲ್ಲವೆಂದು ಹೇಳುತ್ತಿದ್ದೇನೆ. ತಮ್ಮ ಕಾಲದಲ್ಲಿ ಏಳು ವರ್ಷದಲ್ಲಿ ಐದು ವರ್ಷ ಬರಗಾಲ ಬಂದಿತ್ತು.

ಶ್ರೀ ಸಿ.ಬೈರೇಗೌಡ: ಈಗ ಬರಗಾಲ ಬಂದಿದೆ, ಎಲ್ಲರೂ ತೊಂದರೆಯಲ್ಲಿದ್ದಾರೆ, ಮುಖ್ಯಮಂತ್ರಿಯವರಿಗೆ ಹೇಳಿ ಮಳೆ ಬರಿಸುವಂತ ಮಾಡಿ ಪುಣ್ಯಕಟ್ಟಿಕೊಳ್ಳಿ. ಮಳೆ ಬರುವಂತೆ ಪ್ರಾರ್ಥನೆ ಮಾಡಿಕೊಳ್ಳಿ.

ಶ್ರೀ ಕೆ.ಹೆಚ್.ಹನುಮೇಗೌಡ: ನಾನು ಅದರ ಬಗ್ಗೆ ಈಗಲೂ ಹೇಳುತ್ತೇನೆ. ನಾನು ಸ್ವಲ್ಪ ತಮಾಷೆಯಾಗಿ ಹೇಳುತ್ತೇನೆ, ನೀವು ಸ್ವಲ್ಪ ಸಿಟ್ಟಾಗಿ ಹೇಳುತ್ತೀರಿ ಅಷ್ಟೇ ವ್ಯತ್ಯಾಸ.

ಶ್ರೀ ಸಿ.ಬೈರೇಗೌಡ:ಸಿಟ್ಟಾಗಿ ಹೇಳುತ್ತಿಲ್ಲ, ನಗುನಗುತ್ತಾ ಹೇಳುತ್ತೇನೆ ದಯಮಾಡಿ ಮಳೆ ಬರಿಸಿ.

ಶ್ರೀ ಕೆ.ಹೆಚ್.ಹನುಮೇಗೌಡ: ಬರಗಾಲವನ್ನು ಪರಿಹಾರ ಮಾಡಬೇಕಾದರೆ ಎಲ್ಲಿ ಮಳೆ ಬೀಳುತ್ತದೋ ಅಲ್ಲಿ ಕೆರೆಕಟ್ಟೆಗಳನ್ನು ಕಟ್ಟಿ ನೀರನ್ನು ನಿಲ್ಲಿಸುವ ಕೆಲಸವಾಗಬೇಕು. ಇದರಿಂದ ಅನೇಕ ಉಪಯೋಗವಾಗುತ್ತದೆ. ಹಿಂದೆ ರಾಜರು ಮಹಾರಾಜರು ಇದ್ದಾಗ ಈ ರೀತಿ ಮಳೆ ಬಾರದೆ ಹೋದಾಗ ಆ ಭಾಗದಲ್ಲಿ ದೊಡ್ಡ, ಸಣ್ಣ ಒಂದೊಂದು ಕೆರೆಗಳನ್ನು ಕಟ್ಟಿಸುತ್ತಿದ್ದರು. ಆದ್ದರಿಂದ ಹಳೆ ಮೈಸೂರು ಭಾಗದಲ್ಲಿ ಸಾವಿರಾರು ಕೆರೆಗಳು ಕಟ್ಟಲ್ಪಟ್ಟವು. ನಾವು ಹುಡುಗರಿದ್ದಾಗ, ಸಣ್ಣ ಸಣ್ಣ ಕೆರೆಗಳಿಗೆ ಮೀನುಗಳನ್ನು ಹಾಕುತ್ತಿದ್ದರು, ಊರಿನವರೆಲ್ಲರಿಗೂ ಸೇರಿ ಮೀನನ್ನು ಹಿಡಿದುಕೊಳ್ಳಲು ಎರಡು ಮೂರು ಗುಂಡಿಗಳನ್ನು ಹಾಕುತ್ತಿದ್ದರು. ಅವು ನಿರಂತರವಾಗಿ ರಿಪೇರಿ ಆಗುತ್ತಿದ್ದಾಗ ಚೆನ್ನಾಗಿತ್ತು. ಗ್ರಹಚಾರಕ್ಕೆ ಫಿಷರೀಸ್ ಇಲಾಖೆಯನ್ನು ತಂದುಬಿಟ್ಟರು, ಎಲ್ಲಿ ಮೀನು ಹಿಡಿಯುವುದನ್ನು ಕಂಡರೂ ಹೋಗಿಬಿಡುತ್ತಾರೆ, ಇದರಿಂದ ಜನರು ಇವರ ಸಹವಾಸ ಬೇಡ ಆ ಮೀನುಗಳೂ ಬೇಡ, ಬೇಕಾಗಿದ್ದರೆ ಕೊಂಡುಕೊಂಡು ತಿನ್ನೋಣವೆಂದು ಕೈಬಿಟ್ಟರು. ಆದ್ದರಿಂದ ಆ ಕೆರೆಗಳೆಲ್ಲಾ ಮುಚ್ಚಿಹೋದವು. ಎಷ್ಟೋ ಸಂದರ್ಭದಲ್ಲಿ ಹುಡುಗರು ಕೆರೆಯಲ್ಲಿ ಮೀನನ್ನು ಹಿಡಿದುಕೊಂಡರೆ ಮೀನುಗಾರಿಕೆ ಇಲಾಖೆಯವರು ಬಂದು ನಿಮಗೆ ಪರವಾನಗಿ ಇದೆಯೇ, ಮೀನು ಹಿಡಿಯಲು ಅಧಿಕಾರ ಕೊಟ್ಟವರು ಯಾರು, ಎಲ್ಲವನ್ನೂ ನೀವೇ ತಿಂದರೆ ಹೇಗೆ, ಮುಂತಾಗಿ ಕೇಳುತ್ತಾರೆ. ಅವರಿಗೇನೋ

ಸಂಬಳ ಬರುತ್ತದೆ ಹೇಗೋ ಆಗುತ್ತದೆ. ಆದರೆ ಗ್ರಾಮಾಂತರ ಪ್ರದೇಶದ ಸಣ್ಣಸಣ್ಣ ಕೆರೆಕಟ್ಟೆಗಳೆಲ್ಲಾ ಮರಳು ತುಂಬಿ ಭರ್ತಿಯಾಗಿಬಿಟ್ಟಿತು. ಇದರಿಂದ ವಾಟರ್ ಟೇಬಲ್ ಕೆಳಕ್ಕೆ ಹೋಯಿತು. ನಾವು ಸಣ್ಣ ಹುಡುಗರಿದ್ದಾಗ 15-20 ಅಡಿ ತೋಡಿದ್ದರೆ ಸೊಗಸಾದ ನೀರು ಬರುತ್ತಿತ್ತು. ಆದರೆ ಈಗ ಐದುನೂರು ಅಡಿ ತೋಡಿದರೂ ನೀರು ಬರುವುದಿಲ್ಲ. ಮಾನ್ಯ ಬೈರೇಗೌಡರು ಯಾವಾಗಲೂ ನೀತಿ, ನಿಯಮ, ಧರ್ಮದ ಬಗ್ಗೆ ಹೇಳುತ್ತಿರುತ್ತಾರೆ, ಅವರ ಭಾಗದಲ್ಲಿ ಏಳುನೂರು ಅಡಿ ಕೊರೆದರೆ ನೀರು ಸಿಗುತ್ತದೆ. ನೀತಿ ಹೇಳುವವರಿಗೇ ಆ ರೀತಿಯಾದರೆ ಹೇಗೆ? ದೊಡ್ಡ ದೊಡ್ಡ ಕೆರೆಗಳು ಜೀವನಾಡಿ ನದಿಗಳಿದ್ದಂತೆ ಐವತ್ತು, ನೂರು ಎಕರೆ ಇರತಕ್ಕ ಕೆರೆಗಳೇನಿದೆ ಅದು ಹಳ್ಳಿ ಪ್ರದೇಶದ ಜೀವನಾಡಿಯೆಂದು ಹೇಳಿದರೂ ತಪ್ಪಾಗಲಾರದು. ವರ್ಷದಲ್ಲಿ ಯಾವುತ್ತೋ ಒಂದು ದಿವಸ ಮಳೆಯಾದರೆ ಆ ಕೆರೆ ತುಂಬಿಕೊಳ್ಳುತ್ತಿತ್ತು. ಇದರಿಂದ ಕುಡಿಯುವ ನೀರು ಆಗುತ್ತಿತ್ತು, ಅರ್ಧ, ಒಂದು ಎಕರೆ ಜಮೀನು ಇರುವ ರೈತರು ಭತ್ತವನ್ನು ಬೆಳೆದುಕೊಳ್ಳುತ್ತಿದ್ದ. ಇದರಿಂದ ಆರು ತಿಂಗಳ ಜೀವನ ನಡೆಯುತ್ತಿತ್ತು. ಇದರ ಜೊತೆಗೆ ಆ ಕೆರೆಯ ಹಿಂಭಾಗದ ವ್ಯಾಲಿಯಲ್ಲಿ ಅಡಿಕೆ, ತೆಂಗಿನ ತೋಟ, ಮರಗಿಡಗಳು ಸೊಗಸಾಗಿ ಬೆಳೆಯುತ್ತಿತ್ತು. ನಮ್ಮಲ್ಲಿ ಶಾಂತಿಗ್ರಾಮವೆಂದು ಊರು ಇದೆ, ಹಾಸನದಿಂದ ಆರು ಮೈಲಿ, 1939ರಲ್ಲಿ ಅಲ್ಲಿನ ಸ್ಕೂಲಿಗೆ ನಡೆದುಕೊಂಡು ನಾನು ಹೋಗುತ್ತಿದ್ದೆ, ಆಗ ನಾನು ಅಲ್ಲಿ ನೂರಾರು ನವಿಲುಗಳನ್ನು ನೋಡಿದ್ದೆ. ಆದರೆ ಅದು ಇವತ್ತು ಬೆಂಗಾಡಾಗಿದೆ. ಕೆರೆಗಳೆಲ್ಲಾ ಮುಚ್ಚಿಕೊಂಡಿತು. ಯಾರೋ ಪುಣ್ಯಾತ್ಮರು ಕೆರೆಗಳ ರೆಸ್ಟೋರ್ ಮಾಡುವುದು ಒಳ್ಳೆಯದಲ್ಲವೆಂದು ಸಲಹೆ ನೀಡಿಬಿಟ್ಟರು. ಎಲ್ಲರೂ ಅದನ್ನು ಒಪ್ಪಿಕೊಂಡು ಅಂದಿನಿಂದ ಕೆರೆಗಳ ರೆಸ್ಟೋರ್ ಮಾಡುವುದನ್ನು ಬಿಡಲಾಯಿತು. ಎಂಥ ಘೋರ ಅಪರಾಧ ಮಾಡಿದರು. ಹಾಗೆ ಸಲಹೆ ನೀಡಿದ್ದು ಯಾವ ಅಧಿಕಾರಿಯೋ? ಆಗ ಮಂತ್ರಿಯಾಗಿದ್ದ ಪುಣ್ಯಾತ್ಮ ಯಾರೋ? ಆಗ ಇದ್ದ ವಿಧಾನಸಭೆಯ ಸದಸ್ಯರು ಯಾರೋ ಗೊತ್ತಿಲ್ಲ. ಇಂಥ ಒಂದು ಅವಿವೇಕದ ಮಾತಿನಿಂದ ಕರ್ನಾಟಕ ರಾಜ್ಯದ ಸಾವಿರಾರು ಕೆರೆಗಳೆಲ್ಲಾ ಹೂಳು ತುಂಬಿ ಹೋಯಿತು. ಅವತ್ತೇ ನೀವು ಯಾರಾದರೂ ಮಂತ್ರಿಗಳು ರೆಸ್ಟೋರ್ ಮಾಡದೇ ಇದ್ದರೆ ಕೆರೆಗಳು ಮುಚ್ಚಿಹೋಗುತ್ತವೆ ಎಂದು ಹೇಳಿ ಮೊದಲಿದ್ದಂತೆ ರೆಸ್ಟೋರ್ ಮಾಡಿಕೊಂಡು ಬಂದಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿತ್ತಾ? ದಯವಿಟ್ಟು ಆಲೋಚನೆ ಮಾಡಿ. ಎಲ್ಲಾ ಕೆರೆಗಳಲ್ಲೂ ಹೂಳು ತುಂಬಿದೆ. ಇವತ್ತು ಹೊರಟುಬಿಟ್ಟಿದ್ದೀರಿ, ಏನಾದರೂ ಮಾಡಿ ಹೂಳು ತೆಗೆದುಹಾಕಿಬಿಡಬೇಕೆಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೂಳು ತೆಗೆಯುವ ಕೆಲಸ ಮಾಡಲಿ ಅಂತಲೇ ನಿಮ್ಮ ಹಾಸನ ಜಿಲ್ಲೆಗೆ ನಾಲ್ವರು ಲೋಕೋಪಯೋಗಿ ನೀರಾವರಿ ಸಚಿವರನ್ನು ಕೊಟ್ಟಿದ್ದೇವೆ, ಲಕ್ಕಪ್ಪನವರು, ದೇವೇಗೌಡರು, ಪುಟ್ಟಸ್ವಾಮಿಗೌಡರು, ಶ್ರೀಕಂಠಯ್ಯನವರು -

ಆದರೂ ಇನ್ನೂ ನಮ್ಮ ಕಡೇನೆ ಬೆರಳು ಮಾಡಿ ತೋರಿಸುತ್ತಿದ್ದೀರಲ್ಲಾ.

ಶ್ರೀ ಕೆ.ಎಚ್.ಹನುಮೇಗೌಡ: ಏನು ಮಾಡಲಿ, ಒಂದು ತರಹ ಆಗುತ್ತಿದೆ, ಹೇಳಿಬಿಡಬೇಕು ಎಂದು ಅನ್ನಿಸುತ್ತದೆ. ಲಕ್ಕಪ್ಪಗೌಡರದ್ದೂ ಶ್ರೀಕಂಠಯ್ಯನವರದ್ದೂ ಬಿಡಿ. ಪಾಪದವರು, ಆ ಲಕ್ಕಪ್ಪಗೌಡರು, ಅವರ ಬಗ್ಗೆ ಮಾತನಾಡುವಂತಿಲ್ಲ, ನಾನು ನೋಡಿದಂತೆ honest to the core ರಾಜಕಾರಣಿ. ಇವರಾದರೋ ಒಂದು ಚೂರು ಹತ್ತಿರಹತ್ತಿರ ಬರುತ್ತಾರೆ. ಇನ್ನಿಬ್ಬರು ಇದ್ದಾರಲ್ಲಾ ಆ ಸ್ವಾಮಿಗಳ ಪಾದವೇ ಗತಿ. ಜನಗಳ ಕೆಲಸ ಮಾಡುವವರು ಹೆಚ್ಚು ದಿವಸ ಅಧಿಕಾರದಲ್ಲಿರಲಿ ಎಂದು ಮಾತ್ರ ಹೇಳುತ್ತೇನೆ.

ಶ್ರೀ ಬೈರೇಗೌಡ: ಮುಖ್ಯಮಂತ್ರಿಗಳಿಗೆ ಅವರ ಪಕ್ಷದವರೇ ನಿಮ್ಮ ಜಿಲ್ಲೆಯವರೇ ಏನೇನೋ ನಡೆಯುತ್ತಿದೆ ಎಂದು ಪತ್ರ ಬರೆದಿದ್ದಾರೆ. ನೀವು ನೋಡಿದರೆ ಹೀಗೆ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎಚ್.ಹನುಮೇಗೌಡ: ಈಗ ಕೆರೆಗಳ ಹೂಳು ತೆಗೆಯಲು ತತ್‌ಕ್ಷಣವೇ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ದೇಶ ಬೆಂಗಾಡು ಆಗಿಹೋಗುತ್ತದೆ. ಇನ್ನು 10-20 ವರ್ಷಗಳಲ್ಲಿ ಎಲ್ಲೂ ನೀರು ಸಿಗುವುದಿಲ್ಲ. ಪಾಪ ಈ ಕೆರೆ ರೆಸ್ಟೋರ್ ಮಾಡ್ರಿ ಎಂದು ಹೇಳಿದ ಸ್ವಾಮಿ ಯಾವ ಲೋಕದಲ್ಲಿದ್ದಾನೋ ಕಾಣೆ. ಅವ ಮಾಡಿದ ದ್ರೋಹ ಈ ರಾಜ್ಯಕ್ಕೆ ಒಂದಲ್ಲ, ಎರಡಲ್ಲ, ಖರ್ಗೆಯವರೇ, ನಿಮ್ಮ ಕಡೆ ಕೆರೆಗಳಿಲ್ಲ, ಕಮ್ಮಿ ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನನ್ನ ಕ್ಷೇತ್ರದಲ್ಲೇ 270 ಕೆರೆಗಳಿವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೂಳೆತ್ತುವ ಕಾರ್ಯಕ್ರಮ ತೆಗೆದುಕೊಂಡು ವಿಶ್ವಬ್ಯಾಂಕಿನಿಂದ ಹೋಬಳಿಗೊಂದಾದರೂ ಮಾಡಬೇಕೆಂಬ ಕಾರ್ಯಕ್ರಮ ಹಾಕಿದ್ದಾರೆ. ಅದಕ್ಕೆ ಸಂತೋಷ ವ್ಯಕ್ತಪಡಿಸುವುದು ಬಿಟ್ಟು ಬೈಯೋದೇ ಬೈಯುವುದು.

ಶ್ರೀ ಕೆ.ಎಚ್.ಹನುಮೇಗೌಡ: ಹಾಗಾದರೆ ಮಾಡುತ್ತೀರಿ ಬಿಡಿ. ಸ್ವಾಮಿ ಇದರಿಂದ ಕೆರೆಗಳಿಗೆ ನೀರು ಬಂತು ಅನ್ನಿ, ಆಗ ಏನು ಉಪಯೋಗ ಆಗುತ್ತದೆ ಎಂಬುದನ್ನು ಹೇಳುತ್ತೇನೆ: ವಾಟರ್‌ಟೇಬಲ್ ಮೇಲೆ ಬರುತ್ತದೆ. ಅದರಿಂದ ಕುಡಿಯುವ ನೀರಿನ ಸಮಸ್ಯೆ ತಪ್ಪುತ್ತದೆ. ಈಗ ಖರ್ಚು ಮಾಡುತ್ತಿರುವ ಹಣದಲ್ಲಿ ಕಾಲು ಭಾಗ ಖರ್ಚು ಮಾಡಿದರೆ ಎಲ್ಲಾ ಊರಿಗೂ ನೀವು ನೀರು ಕೊಡಬಹುದು. ಆಮೇಲೆ ಕೆರೆ ತುಂಬುವುದರಿಂದ ಕೆರೆ ಹಿಂದೆ ಅಡಿಕೆ, ತೆಂಗು, ಬಾಳೆ ತೋಟಗಳು ಅಭಿವೃದ್ಧಿಗೆ ಬರುತ್ತವೆ ಇದರಿಂದ ವಾತಾವರಣ ತಂಪಾಗುವುದು. ಮೋಡ ಆಕರ್ಷಣೆಯಾಗಿ ಮಳೆ ಬರುವ ಸಂಭವವೂ ಜಾಸ್ತಿ ಇರುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಮರಗಿಡಗಳು

ಬೆಳೆಯುವುದರಿಂದ ಬಿದ್ದ ಮಳೆಯನ್ನು ಬೇರುಗಳು ಹಿಡಿದಿಡುವುದರಿಂದ ಪೂರಾ ನೀರು ಹೋಗುವುದಿಲ್ಲ, ನೀರು ಭೂಮಿಗೆ ಹೋಗುತ್ತದೆ, ಆಮೇಲೆ ಬೀಳತಕ್ಕಂತಹ ಕಸಕಡ್ಡಿ ಎಲೆ ಎಲ್ಲಾ ಸೇರಿ ಭೂಮಿ ಫಲವತ್ತಾಗುತ್ತದೆ. ಹೀಗೆ ಒಂದು ಕೆರೆ ರಿಪೇರಿಯಾಗಿ ಅದರಲ್ಲಿ ನೀರು ನಿಂತರೆ ಈ ರೀತಿಯ ನಾನಾ ಉಪಕಾರಗಳಾಗುವುದರಿಂದ ತತ್‌ಕ್ಷಣ, ವರ್ಷಕ್ಕೊಂದು ಕೆರೆ ಯೋಜನೆ ಹಾಕಿ ಸುಮ್ಮನೆ ಕೂರಬೇಡಿ, ಕೊಡುವವರು ಹೇಗಿದ್ದರೂ ಸಾಲ ಕೊಡುತ್ತಾರೆ, ಅವರಿಗೂ ಗೊತ್ತು, ನಿಮಗೂ ಗೊತ್ತು, ನೀವು ಕೊಟ್ಟಾಗ, ಅವರು ಈಸಿಕೊಂಡಾಗ, ಅದು ಹೇಗಾದರೂ ಆಗಲಿ. ಅಂತೂ ಒಳ್ಳೆಯ ಮನಸ್ಸು ಮಾಡಿ ಕೊಡುತ್ತಿದ್ದಾರೆ, ಈಗಲೇ ಎಷ್ಟಾಗುವುದೋ ಅಷ್ಟು ತಂದು ಒಂದು ಕಡೆಯಿಂದ ಕೆರೆ ಹೂಳು ಎತ್ತಿಸಿ. ಅದನ್ನು ಆದ್ಯ ಕರ್ತವ್ಯ ಎಂದು ಮಾಡಿ, ಅಲ್ಲಿಗೆ ಈ ದೇಶವನ್ನು ಬರಗಾಲದ ಬಾಧೆಯಿಂದ ಬಿಡುಗಡೆ ಮಾಡಿದ ಪುಣ್ಯ ನಿಮ್ಮ ಸರ್ಕಾರಕ್ಕಿರುತ್ತದೆ.

ಇನ್ನು ಹನಿ ನೀರಾವರಿ. ಇದು ಬಹಳ ಉಪಯುಕ್ತ ಸ್ಕೀಂ. 4 ವರ್ಷಗಳ ಹಿಂದೆ ಈ ಸ್ಕೀಂ ಬಂದಾಗ ನಮ್ಮ ಕಡೆಯವರಿಗೆಲ್ಲಾ ಹೇಳಿದೆ, ನಮ್ಮಂಥೋರ ಜಮೀನಿಗೆಲ್ಲಾ ಹಾಕಿಕೊಂಡು ಆದಮೇಲೆ ಈ ಸಬ್ಸಿಡಿ ಕೊಡುವುದಿಲ್ಲ. ಜಲ್ದಿ ಹಾಕಿಕೊಳ್ರೋ ಅಂತ. ಕೆಲವರು ಹಾಕಿಸಿಕೊಂಡರು. 90 ಪರ್ಸೆಂಟ್ ಸಬ್ಸಿಡಿ ಇದ್ದುದನ್ನು 50, 30 ಪರ್ಸೆಂಟಿಗೆ ಇಳಿಸಿಬಿಟ್ಟಿರಲ್ಲಾ ನ್ಯಾಯವಾ ಅದು? ಬಾವಿಯಲ್ಲಿ ಒಂದಿಂಚು ಎರಡಿಂಚು ನೀರು ಬಂದರೆ ಕೊನೇಪಕ್ಷ ಏಳೆಂಟು ಎಕರೆಗೆ ಹಾಕುವುದರಿಂದ ಬಾಳೆ ತೆಂಗು ಎಲ್ಲಾ ಬರುತ್ತದೆ.

ಶ್ರೀ ಬಿ.ಎಚ್.ಬನ್ನಿಕೋಡ್: ರಾಜ್ಯ ಸರ್ಕಾರ ನಿಲ್ಲಿಸಿಬಿಟ್ಟಿತು 90 ಪರ್ಸೆಂಟ್ ಸಬ್ಸಿಡಿ ಎಂದು ತಾವು ಹೇಳಿದಿರಿ, ಹೆಣ್ಣುಮಕ್ಕಳಿಗೆ, ಎಸ್‌ಸಿ/ಎಸ್‌ಟಿ ಜನಾಂಗದವರಿಗೆ 90 ಪರ್ಸೆಂಟ್ ಸಬ್ಸಿಡಿ ಕೊಡುತ್ತಿತ್ತು, 10 ಪರ್ಸೆಂಟ್ ಅವರು ಹಣ ಹಾಕಿಕೊಂಡು ಹನಿನೀರಾವರಿ ಮಾಡುತ್ತಿದ್ದರು. ಉಳಿದವರಿಗೆ 70 ಪರ್ಸೆಂಟ್ ಸಹಾಯಧನ ಕೊಡುತ್ತಿದ್ದರು. ಇದನ್ನು ತೆಗೆದುಹಾಕಿದ್ದು ನಿಮ್ಮ ಕೇಂದ್ರ ಸರ್ಕಾರ, ಹನುಮೇಗೌಡರೆ,

ಶ್ರೀ ಕೆ.ಎಚ್.ಹನುಮೇಗೌಡ: ಅವಕ್ಕೆ ಸೀಮೆಯೆಣ್ಣೆ ಬುಟ್ಟೆ ಉರಿಸುತ್ತಾರೆ ಅನ್ನುವುದೇ ಗೊತ್ತಿಲ್ಲ, ಅದಕ್ಕೆ ನಾನೇನು ಮಾಡಲಿ. ಸ್ವಾಮಿ ಈ ಹನಿನೀರಾವರಿಗೆ ಮೊದಲಿದ್ದ ಹಾಗೆ ಸ್ವಲ್ಪ ಹೆಚ್ಚು ಸಬ್ಸಿಡಿ ಕೊಡಿ. ಮೊದಲಿನಂತೆ 80 ಪರ್ಸೆಂಟ್ 90 ಪರ್ಸೆಂಟ್ ಕೊಟ್ಟರೆ ಕೊನೇಪಕ್ಷ ಡ್ರೈ ಏರಿಯಾದ ಕಾಲು ಭಾಗ ಭೂಮಿ ಇರಿಗೇಟಾಗಿ ಆ ಭಾಗ ಸಮೃದ್ಧಿ ಆಗುತ್ತದೆ. ಈಗ ಕೆಲವರಿಗೆ ಹಾಕಿಸಿಕೊಳ್ಳಿರೋ ಹನಿನೀರಾವರಿ ಅಂದರೆ ಎಲ್ಲಿ ಸ್ವಾಮಿ 30 ಪರ್ಸೆಂಟ್ ಕೊಡುತ್ತಾರೆ ನಮ್ಮ ಹತ್ತಿರ ದುಡ್ಡಿಲ್ಲ ಅನುತ್ತಾರೆ.

ಆಮೇಲೆ ಹಿಂದೆ ಮೈನರ್ ಇರಿಗೇಷನ್ ಇಲಾಖೆ ಎಂದು ಇತ್ತು. ಅದಕ್ಕೊಂದು ವಾಹನ ಇರುತ್ತಿತ್ತು ಅವರು ಪ್ರತಿ ಊರ ಕೆರೆಯನ್ನೂ ಸರ್ವೆ ಮಾಡುತ್ತಿದ್ದರು. ಬಂಡ್ ಹಾಕುವುದು, ಏರಿಯನ್ನು ಶಕ್ತಿಶಾಲಿ ಮಾಡುವುದು, ಹುಲ್ಲು ಆಗೆಯುವುದು, ತೂಬು ಕಟ್ಟುವುದು, ಕೋಡಿ ರಿಪೇರಿ ಮಾಡುವುದು - ಇಷ್ಟು ಮಾಡಿ ಕಂಪ್ಲೀಟಾಯಿತು ಎಂದು ಆ ಕೆರೆಗೊಂದು ನಂಬರ್ ಕೊಟ್ಟು ಕಲ್ಲುನೆಟ್ಟು ಮುಂದಿನ ಊರಿಗೆ ಹೊರಟುಹೋಗುತ್ತಿದ್ದರು. ಈಗಿನ ಮೈನರ್ ಇರಿಗೇಷನ್‌ನಲ್ಲಿ ಏನು ಕೆಲಸವಾಗುತ್ತಿದೆ ಗೊತ್ತೆ? ನಾನು ಅದರ ಸಚಿವರ ಬಗ್ಗೆ ಹೇಳುತ್ತಿಲ್ಲ. ಈಗೆಲ್ಲಾ ತಾಲ್ಲೂಕು ಪಂಚಾಯ್ತಿ ಜಿಲ್ಲಾ ಪಂಚಾಯ್ತಿ. ಖರ್ಗೆಯವರೇ, ನೀವು ಯಾವುದಾದರೂ ಒಂದು ಸಭೆಗೆ ಹೋಗಿ ನೋಡಬೇಕು. ಐದು ಲಕ್ಷ ಕೊಟ್ಟರೆ ಅದು ಹೇಗೆ ಹಂಚಿಕೆಯಾಗುತ್ತದೆ, ಹೇಗೆ ಕೆಲಸವಾಗುತ್ತದೆ ಎಂದು ಹೋಗಿ ನೋಡಬೇಕು. ಬಿಸಾಕ್ರೀ ನಮ್ಮದು ಅಂತಾರೆ. ನಮ್ಮ ಪಾಲಿನದು ಬಿಸಾಕ್ರೀ ಇತ್ಲಾಗ ಅಂತಾರೆ. ಒಂದು ದಿನ ಹೋಗಿ ಒಂದು ಗಂಟೆ ಕೂತಿದ್ದು ನಮಸ್ಕಾರ ಮಾಡಿ ಇನ್ನು ನಾನು ಮೆಂಬರಾಗಿರುವವರೆಗೂ ಇಲ್ಲಿಗೆ ಬರುವುದಿಲ್ಲ, ಬಂದಿದ್ದು ತಪ್ಪಾಯಿತು ಎಂದು ಹೇಳಿ ವಾಪಸ್ಸು ಬಂದೆ. ಅಂತಹ ಆಸಾಮಿಗಳಿಗೆ ರಿಪೇರಿ ಕೆಲಸ ಕೊಟ್ಟದ್ದೀರಿ. ಸರಿಯಾಗಿ ಬಿಲ್ ಕೊಡದೇ ಇದ್ದರೆ ಅವನು ಟೈ ಕಳೆದುಕೊಳ್ಳುತ್ತಾನೆ. ಪರಿಸ್ಥಿತಿ ಹಂಗೆ ಬಂದು ಕುತಿದೆ. ದಯವಿಟ್ಟು ಅವರಿಗೆ ಆ ಜವಾಬ್ದಾರಿ ವಹಿಸಬೇಡಿ. ಬೇಕಾದರೆ Turnkey Project ತರಹ ಪ್ರತ್ಯೇಕ ಮೈನರ್ ಇರಿಗೇಶನ್ ಇಂಜಿನಿಯರಿಂಗ್ ವಿಭಾಗ ಎಂದು ಮಾಡಿ ಅವರಿಗೆ ಹಣವನ್ನು ಕೊಟ್ಟು ಅವರು ಒಂದು ಕಡೆಯಿಂದ ಕೆಲಸ ಮಾಡಿಕೊಂಡು ಹೋದರೆ ಸರಿ, ನೀವೇನಾದರೂ ತಾಲ್ಲೂಕು ಪಂಚಾಯ್ತಿ ಜಿಲ್ಲಾ ಪಂಚಾಯ್ತಿಯವರನ್ನು ಟ್ಯಾಗ್ ಮಾಡಿದಿರಿ ಅದೇ ಕೆರೆ, ಅದೇ ತೂಬು, ಅದೇ ಏರಿ, ಪ್ರತಿ ವರ್ಷನೂ. ಏನು ಮಾಡುವುದು ಸ್ವಾಮಿ? ಇನ್ನು ಬೇರೆಯವಕ್ಕೆ ಎಲ್ಲಿ ಹೋಗುತ್ತಾರೆ. ಸ್ಕೂಲಿಗೆ ರಿಪೇರಿ ಗ್ರಾಂಟ್ ಎಂದು ಬಂದಿದ್ದನ್ನು

4.40 ಪಿಎಂ

ಹಂಚಿಕೊಂಡುಬಿಟ್ಟರು. ಯಾವ ಬಿಲ್ಡಿಂಗ್ ಚೆನ್ನಾಗಿದ್ದವೋ ಅವುಗಳನ್ನೇ ರಿಪೇರಿ ಮಾಡಿದಂತೆ ಮಾಡಿ ಬಿಲ್ ತೆಗೆದುಕೊಂಡುಬಿಟ್ಟರು. ಅರ್ಧ ಬಿದ್ದಿರುವ ಬಿಲ್ಡಿಂಗ್ ಇವುಗಳ ತಂಟೆಗೆ ಯಾರೂ ಹೋಗುವುದೇ ಇಲ್ಲ. ನಾನು ಹೇಳುತ್ತಿರುವುದು ಹಾಸನ ಜಿಲ್ಲೆಯ ಮಟ್ಟಿಗೆ. ಬೇರೆ ಜಿಲ್ಲೆಯ ಬಗ್ಗೆ ನನಗೆ ಗೊತ್ತಿಲ್ಲ. ಈ ರೀತಿ ಇರುವುದರಿಂದ ಕನ್‌ಸ್ಟ್ರಕ್ಷನ್ ಜವಾಬ್ದಾರಿಯನ್ನು ದಯವಿಟ್ಟು ಬೇರೆ ಒಂದು ಏಜೆನ್ಸಿಯನ್ನು ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟು ಆ ರೀತಿಯಲ್ಲಿ ನೀವು ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡದೆ ಹೋದರೆ ಈಗ ಇರುವ ವ್ಯವಸ್ಥೆಯಲ್ಲಿ ದುಡ್ಡು

ಹಾಳಾಗುತ್ತದೆ. ವರ್ಲ್ಡ್ ಬ್ಯಾಂಕ್ ಹಣವನ್ನು ಕೊಟ್ಟಿದ್ದಾರಲ್ಲಾ, ಅವರು ಮಣ್ಣು ತಿನ್ನುವುದೇ. ಇನ್ನು ಏಳೆಂಟು ವರ್ಷ ಹೋದಮೇಲೆ ಇವರು ಕೊಡಲಿಲ್ಲ, ಅವರು ತೆಗೆದುಕೊಳ್ಳಲಿಲ್ಲ. ಆ ರೀತಿ ಕೊಟ್ಟಿದ್ದು ಸದ್ವಿನಿಯೋಗವಾಗಿ ಅವರಿಗೆ ವಾಪಸ್ ಆದರೂ ಕೊಡುವ ಸ್ಥಿತಿಯಲ್ಲಿರಬೇಕಾದರೆ ಆ ಹಣ ಸದ್ವಿನಿಯೋಗವಾಗುವ ಹಾಗೆ ತಾವು ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಕಾವೇರಿ ನದಿ ನೀರು ಈ ಭಾಗದ ಜನರಿಗೆ ದೇವರು ಕೊಟ್ಟಂಥ ವರ ನಮಗೆ. ಯಾರ್‍ಯಾರೋ ರಾಜಕೀಯ ಮಾಡಿಕೊಂಡು ಯಾರ್‍ಯಾರನ್ನೋ ಪುಸಲಾಯಿಸುವುದಕ್ಕಲ್ಲ ಕೊಟ್ಟಿರುವುದು. 60 ಭಾಗ ಕಾವೇರಿ ನದಿ ಹರಿಯುವುದು ನಮ್ಮ ಕರ್ನಾಟಕದ್ದು. 42 ಭಾಗವೇನೋ ತಮಿಳುನಾಡಿನದು. ನಾನು 972ನೇ ಇಸವಿಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಚನ್ನಬಸಪ್ಪನವರು ಪಿಡಬ್ಲ್ಯೂಡಿ ಮಿನಿಸ್ಟರ್ ಆಗಿದ್ದರು. ಕರ್ನಾಟಕದಲ್ಲಿ ಕಾವೇರಿ ಬೇಸಿನ್‌ನಿಂದ ಎಷ್ಟು ನೀರಾವರಿಯಾಗುತ್ತದೆ ಎಂದು ಕೇಳಿದ್ದೆ. ಮೂರುವರೆ ಲಕ್ಷವೋ ಮೂರುಮುಕ್ಕಾಲು ಲಕ್ಷ ಎಕರೆ ಎಂದು ಹೇಳಿದ್ದರು. ಹಾಗೆಯೇ ತಮಿಳುನಾಡಿನಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ ಎಂದು ಕೇಳಿದ್ದಕ್ಕೆ ಏಳು ಲಕ್ಷ ಎಕರೆ ಎಂದು ಹೇಳಿದ್ದು ಜ್ಞಾಪಕ. 60 ಭಾಗ ನೀರು ನಮ್ಮದು. 42 ಭಾಗವೇನೋ ಎಂದು ಇಂಜಿನಿಯರುಗಳು ಹೇಳುತ್ತಾರೆ. ತಮಿಳುನಾಡಿನಲ್ಲಿ ಕಾವೇರಿ ಬೇಸಿನ್‌ನಲ್ಲಿ ಐದನೇ ಒಂದು ಭಾಗ ಆಗಾಗ ಬರಗಾಲಕ್ಕೆ ತುತ್ತಾಗುತ್ತದೆ. ನಮ್ಮದು ಮೂರನೇ ಒಂದು ಭಾಗ. ಈ ರೀತಿ ಹೋಲಿಕೆ ಮಾಡಿ ನೋಡಿದರೂ ನಮ್ಮ ಕರ್ನಾಟಕದ್ದು ಅಡ್ವಾಂಟೇಜ್ ಇರುವ ಪರಿಸ್ಥಿತಿ. ಈ ರೀತಿಯಿದ್ದರೂ ಮೊನ್ನೆ ಪತ್ರಿಕೆಯಲ್ಲಿ ಓದಿದೆ. ಏಳು ಲಕ್ಷ ಇದ್ದದ್ದು 37 ಲಕ್ಷ ಎಕರೆಯಾಗಿದೆ. ಎಂಥ ಪುಣ್ಯವಂತರು, ಎಂಥ ಭಾಗ್ಯವಂತರು. ಆ ರಾಜ್ಯದ ರಾಜ ರಾಜಕಾರಣಿಗಳು ಮತ್ತು ಇಂಜಿನಿಯರುಗಳಿಗೆ ಎಷ್ಟು ಕೋಟಿ ಥ್ಯಾಂಕ್ಸ್ ಹೇಳಿದರೂ ತೀರದು. ಅವರು ತಪ್ಪಾದರೂ ಮಾಡಲಿ, ಏನಾದರೂ ಮಾಡಲಿ. ಸ್ವಾಮಿ, ನೀವೆಷ್ಟು ಮಾಡಿದ್ದೀರಿ? ಮೂರೂವರೆ ಲಕ್ಷ ಎಕರೆಯಿಂದ ಏಳು ಲಕ್ಷ ಎಕರೆಯಾಗಿದೆ. ಅವರು ಯಾರೋ ಟ್ರಿಬ್ಯೂನಲ್‌ನವರು ತಮಗೆ ಆರ್ಡರ್ ಕೊಟ್ಟಿದ್ದಾರಂತೆ, 11 ಲಕ್ಷ ಎಕರೆ ಮೇಲೆ ಹೋಗಕೂಡದು ಎಂದು ಏಕೆ ಸುಮ್ಮನಾದಿರಿ? ಏನು ಅವರ ಹತ್ತಿರ ದಾಕ್ಷಿಣ್ಯ? ಹೇಮಾವತಿ, ಮತ್ತು ಹಾರಂಗಿ ಯೋಜನೆಗೆ ಹಾಕಿರುವ ಸಾವಿರಾರು ಕೋಟಿ ರೂ.ಗಳು ಕರ್ನಾಟಕದ ಜನರು ಕೊಟ್ಟಿರುವ ದುಡ್ಡು. ಒಂದು ಸಿಂಗಲ್ ಪೈಸೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಬಂದಿಲ್ಲ, ಮದ್ರಾಸ್ ಸರ್ಕಾರದಿಂದ ಬಂದಿಲ್ಲ ಅದು ಈ ರಾಜ್ಯದ ರೈತರು ಕೊಟ್ಟಿರುವ ದುಡ್ಡು, ಅಲ್ಲಿ ನೀವು ಡ್ಯಾಮನ್ನು ಕಟ್ಟಿ ನಿಮ್ಮ ರಾಜಕೀಯ ಅನುಕೂಲಕ್ಕೋಸ್ಕರ ಮದ್ರಾಸಿಗೆ ನೀರು ಬಿಡಿ ಎಂದು ಹೇಳಿ ಜನರು ನಿಮಗೆ ದುಡ್ಡುಕೊಟ್ಟಿದ್ದಾರಾ? ಇದರ ಬಗ್ಗೆ ಯೋಚನೆ ಮಾಡಬೇಡವೇ, ಇಲ್ಲಿರುವ ಇಂಜಿನಿಯರುಗಳು? ಅದಕ್ಕೆ ನಾನು ಹೇಳಿದ್ದು. ಅವರನ್ನು ಜೈಲಿಗೆ ಹಾಕಿ ಎಂದು.

ಬರೀ ಕೊಕ್ಕೆ. ಒಂದು ಸಣ್ಣ ಲಿಫ್ಟ್ ಇರಿಗೇಷನ್ ಹಾಕಿದರೂ ಅದಕ್ಕೂ ಕೊಕ್ಕೆ. ಕೆರೆ ಕಟ್ಟುವುದಕ್ಕೆ ಕೊಕ್ಕೆ. ಈ ರೀತಿ ಎಲ್ಲಾ ಕೊಕ್ಕೆ ಹಾಕಿ ಹಾಕಿ ಅವರಿಗೆ ಅನುಕೂಲ ಮಾಡಿಕೊಟ್ಟರಲ್ಲಾ, ಈ ರೀತಿಯಾದರೆ ನಮ್ಮ ರಾಜ್ಯದ ಗತಿಯೇನು ಸ್ವಾಮಿ? ಹೀಗೆ ಮಾಡಿ ಕರ್ನಾಟಕದಲ್ಲಿ ಹುಟ್ಟಿ ಇಲ್ಲಿ ಅನ್ನ ತಿಂದು ಇಲ್ಲಿ ಸಂಬಳವನ್ನು ತೆಗೆದುಕೊಂಡು ಎಲ್ಲಾ ಅನುಕೂಲವನ್ನು ಮಾಡಿ ಅಲ್ಲಿಗೆ ನೀರು ಹೋಗುವ ಹಾಗೆ ಮಾಡಿದರಲ್ಲಾ, ಇದು ಧರ್ಮವೇ? ಅಂಥವರನ್ನು ಗುರುತಿಸಿ ನಾಲ್ಕು ಜನರನ್ನು ನೀವು ಜೈಲಿಗೆ ಕಳುಹಿಸುವುದಕ್ಕಾಗುವುದಿಲ್ಲವೇ? ಇನ್ನು ಮುಂದಿನವರಾದರೂ ಎಚ್ಚರಗೊಳ್ಳುತ್ತಾರೆ. ಬರೀ ಕೊಕ್ಕೆ ಹಾಕುವುದು. ಇದರ ಬಗ್ಗೆ ಒಂದು ಕೆಲಸವಾಗುವುದಕ್ಕೆ ಬಿಡಲಿಲ್ಲವಲ್ಲಾ? ಈ ರೀತಿ ಪರಿಸ್ಥಿತಿಯಾಯಿತು. ರಾಜಕಾರಣಿಗಳಿಗೆ ಇಲ್ಲದೇ ಇರುವ ಇಚ್ಛಾಶಕ್ತಿ ಮತ್ತು ಇಂಜಿನಿಯರುಗಳ ಅವಿವೇಕದ ದುರಾಸೆಯಿಂದ ಕರ್ನಾಟಕ ರಾಜ್ಯಕ್ಕೆ ತೊಂದರೆಯಾಯಿತು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದನ್ನು ಸರಿಪಡಿಸಿಕೊಳ್ಳುವುದಕ್ಕೆ ನೀವು ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡಿ. ನನಗೆ ಯಾರೋ ಮೊನ್ನೆ ಹೆಚ್.ಕೆ.ಪಾಟೀಲರ ಬಗ್ಗೆ ಹೇಳಿದರು, ಹೆಚ್.ಕೆ.ಪಾಟೀಲರು ದುಡ್ಡನ್ನೆಲ್ಲಾ ತೆಗೆದುಕೊಂಡು ಉತ್ತರ ಕರ್ನಾಟಕಕ್ಕೆ ಹಾಕಿಕೊಂಡುಬಿಟ್ಟಿದ್ದಾರೆ, ಇಲ್ಲಿ ಹಾಕುತ್ತಿಲ್ಲವೆಂದು ಹೇಳಿದರು. ಕೊನೆಯ ಪಕ್ಷ ಆ ವ್ಯಕ್ತಿಗೆ ಆ ಭಾಗವೋ ಈ ಭಾಗವೋ ರೈತರ ಮೇಲೆ ಅಭಿಮಾನ ಇದೆ. ಸಹಾನುಭೂತಿ ಇದೆ. ಇವತ್ತು ಅಲ್ಲಿ ಮಾಡಿರಬಹುದು ಎಂದು ನಾನು ಹೇಳಿದೆ. ಪತ್ರಿಕೆಯಲ್ಲಿ ಬಂದಿದ್ದನ್ನು ನಾನು ಹೇಳುತ್ತಿದ್ದೇನೆ. ತಪ್ಪಾಗಿದ್ದರೆ ಅದನ್ನು ಸರಿ ಮಾಡಿಕೊಳ್ಳಿ. ನಾನು ಒಬ್ಬ ರೈತನಾಗಿ ಆಗಿರುವ ತೊಂದರೆಯನ್ನು ಹೇಳುತ್ತಿದ್ದೇನೆ. ಈಗ 60 ಭಾಗ ನೀರನ್ನು ನಾವು ಕೊಟ್ಟರೂ ಈಗ ಆಗಿರುವ ತೊಂದರೆಯನ್ನು ತಾವು ಏನಾದರೂ ಮಾಡಿ ಪರಿಹರಿಸಬೇಕು. ನೀವು ಆವತ್ತು ರೆಪ್ರೆಸೆಂಟ್ ಮಾಡಲಿಲ್ಲವೋ? ದುಡ್ಡನ್ನು ಕರ್ನಾಟಕದವರು ಕೊಟ್ಟಿದ್ದಾರೆ, ನೀವು ಹೇಳಿದಂತೆ ಕೇಳಿದರೆ ನಮ್ಮನ್ನು ಹಿಡಿದು ಬಡಿಯುತ್ತಾರೆಂದು ಅವರಿಗೆ ಹೇಳಬಾರದೆ? ಅವರು ಯಾರು? ಯಾರೋ ಒಬ್ಬ ಪಾಪ ಪ್ರಧಾನಿಯ ಪ್ರೆಸಿಡೆಂಟ್ ಆಗಿದ್ದರು ಎಂದು ಹೇಳಿ ತಂಜಾವೂರಿನಲ್ಲಿ ಅವರ ಜಮೀನಿಗೆ ನೀರು ಹೋಗುತ್ತದೆ ಎಂದು ಹೇಳಿ ಈ ದ್ರೋಹ ಮಾಡಿಬಿಟ್ಟರಲ್ಲಾ? ನೀವೇನು ಮಾಡುತ್ತಿದ್ದೀರಿ? ನಿಮ್ಮ ಇಂಟೆಲಿಜೆನ್ಸ್ ಎಲ್ಲಿಗೆ ಹೋಗಿತ್ತು? ಇದರ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ ನೋಡಿ. ಇದು ಆಗುವುದು ಆಗಿ ಹೋಯಿತು. ಹೋಗಲಿ, ಒಂದು ಸಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬಂದಿದ್ದರು. ಈ ರೀತಿ ಟ್ರಿಬ್ಯೂನಲ್ ತೀರ್ಮಾನ ಕೊಟ್ಟಿದ್ದಾರೆ. ನಮ್ಮ ಕರ್ನಾಟಕಕ್ಕೆ ಬಹಳ ಅನ್ಯಾಯವಾಯಿತು ಎಂದು ಹೇಳಿದೆ. ಅವರು ನೀವು ಮೇಲಿದ್ದೀರೋ, ಕೆಳಗಡೆ ಇದ್ದೀರೋ ಎಂದು ಕೇಳಿದರು. ನಾವು ಮೇಲಿದ್ದೇವೆ ಎಂದು ಹೇಳಿದೆ. ಮತ್ತೆ ಏಕೆ ಆ

ರೀತಿ ಹೇಳುತ್ತೀರಿ, ಹೋಗಿ ಸುಮ್ಮನೆ. ನಿಮ್ಮ ರಾಜಕಾರಣಿಗಳು ಇದ್ದಾರೆ, ಅವರು ಕಟ್ಟಿಕೊಳ್ಳುತ್ತಾರೆ ಬಿಡಿ ಎಂದರು. ಅವರಿಗೆ ಗೊತ್ತಾಗುತ್ತದೆ ಎಂದು ಹೇಳಿದರು. ಏಕೆ ಇನ್ನೂ ಸುಮ್ಮನೆ ಇದ್ದೀರಿ? ನಿಮಗೇನು ದಾಕ್ಷಿಣ್ಯ? ಅದು ನಮ್ಮ ಹಕ್ಕಲ್ಲವೋ? ಈ ಭಾಗದಲ್ಲಿ ಹುಟ್ಟಿರುವ ರೈತರಿಗೋಸ್ಕರ ಅಲ್ಲವೇ ಆ ಕಾವೇರಿ ನದಿ ಹರಿಯುತ್ತಿರುವುದು? ಯಾರಾದರೂ ರಾಜಕಾರಣ ಮಾಡಿಕೊಳ್ಳಲಿ ಎಂದು ಹೇಳಿ ದೇವರು ಆ ನದಿಯನ್ನು ಸೃಷ್ಟಿಮಾಡಿದ್ದಾನಾ? ಆದ್ದರಿಂದ ಈ ವಿಚಾರದಲ್ಲಿ ಫರ್ಮ್ ಆಗಿ ಕ್ರಮ ತೆಗೆದುಕೊಂಡು ನಮಗೆ ನ್ಯಾಯವಾಗಿ ಎಷ್ಟು ನೀರು ಬರಬೇಕೋ ಅಷ್ಟನ್ನು ಬೇಗನೆ ಏತನೀರಾವರಿಯೋ ಅಥವಾ ಇನ್ನೊಂದು ನೀರಾವರಿಯೋ ಡ್ಯಾಮ್ ಏನೇನೋ ಆಗಬೇಕೋ ಅವನ್ನೆಲ್ಲಾ ಬೇಗನೆ ಕಟ್ಟಿ ನಮಗೆ ಏನು ಸೇರಬೇಕೋ ಅದನ್ನು ತರುವುದಕ್ಕೆ ನೀವು ವ್ಯವಸ್ಥೆಯನ್ನು ಮಾಡಬೇಕು ಹಾಗೆಯೇ ಕೇಂದ್ರಸರ್ಕಾರಕ್ಕೆ ನೀವು ದುಡ್ಡು ಕೊಡಬೇಕೆಂದು ಹೇಳಿ. ಪ್ರತಿಯೊಂದಕ್ಕೂ ಏತಕ್ಕೆ ಆರ್ಡರನ್ನು ಕೊಡುತ್ತೀರಿ ಎಂದು ಹೇಳಿ. ಯಾರೋ ಕೆರೆ ಹೂಳು ಎತ್ತಕೂಡದು ಎಂದು ಆರ್ಡರನ್ನು ಕೊಟ್ಟಿದ್ದಾರಲ್ಲಾ, ಒಂದು ದಿನ ಅವರನ್ನು ಕರೆಸುತ್ತೀರಾ? ಸ್ವಲ್ಪ ಅವರಿಗೆ ಸನ್ಮಾನ ಮಾಡೋಣ. ಸ್ವಾಮಿ, ಕರೆಸಿ, ನೀವು ಮಾಡುವುದಕ್ಕಾಗುವುದಿಲ್ಲ, ನಾವು ಮಾಡುತ್ತೇವೆ. ಹಿಡಿದುಕೊಂಡು ಹೋದರೆ ನನ್ನನ್ನೇ ಹಿಡಿದುಕೊಂಡು ಹೋಗಲಿ. ಇಂಥ ಅವಿವೇಕದಲ್ಲಿ ಒಬ್ಬರಿಗೆ ದ್ರೋಹ ಮಾಡುವ ಅಧಿಕಾರಿಗಳು ಈ ದೇಶದಲ್ಲಿ ಹುಟ್ಟಬಾರದು. ಆ ದೃಷ್ಟಿಯಿಂದ ಹೇಳುತ್ತೇನೆ. ಅವನು ಯಾವ ಊರಿನ ದಾಸಯ್ಯ? ಏಕೆ ಹಾಗೆ ಹೇಳಬೇಕು ಅವನು. ಯಾರೋ ಪುಣ್ಯಾತ್ಮ ಕಟ್ಟಿರುವ ಕೆರೆಗಳ ಮಣ್ಣನ್ನು ಎತ್ತಬಾರದು ಎಂದರೆ ಅವನ್ಯಾರು? ಅವನಿಗೆ ನಾವು ಏನೆಂದು ಹೇಳಬೇಕು. ನಾನೊಬ್ಬ ರೈತನಾಗಿ ಹೇಳುತ್ತಿದ್ದೇನೆ. ದಾಕ್ಷಿಣ್ಯಕ್ಕೆ ಇವೆಲ್ಲಾ ಆಗುವುದಿಲ್ಲ ಸ್ವಾಮಿ, ಎದ್ದು ಹೋರಾಡಬೇಕು. ಈ ರೀತಿ ಅನ್ಯಾಯವುಂಟೇ? 1200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಡ್ಯಾಮ್ ಕಟ್ಟಿ ನೀರನ್ನು ಅವನು ಹೇಳಿದವರಿಗೆಲ್ಲಾ ಕೊಡಬೇಕು. ಹೂಳು ಎತ್ತಕೂಡದು ಎಂದು ಹೇಳುತ್ತಾನೆ. ಯಾರೋ ಕೇಂದ್ರಸರ್ಕಾರದವರಂತೆ ಅವರನ್ನು ಕರೆಸಿ ಸ್ವಾಮಿ. ಬರಗಾಲ ಪ್ರದೇಶ ಬರುತ್ತಿದೆಯಲ್ಲಾ, ಆ ಭಾಗದಲ್ಲಿ ಕೊನೆಯ ಪಕ್ಷ ವಿದ್ಯಾವಂತರಿಗೆ ಆಗ್ರೋಬೇಸ್ಡ್ ಇಂಡಸ್ಟ್ರೀಸ್‌ಗಳನ್ನು ಮಾಡುವುದಕ್ಕಾಗುವುದಿಲ್ಲವೇ? ಕೆಲವರಿಗೆ ಅಪಾಯಿಂಟ್‌ಮೆಂಟ್ ಸಿಗುತ್ತದೆ. ಹೇಗೋ ಮನಿ ಫ್ಲೋ ಆಗುತ್ತದೆ. ಇವೆಲ್ಲಾ ಸ್ವಲ್ಪ ವ್ಯವಸ್ಥೆಯಾಗುತ್ತದೆ. ದಯವಿಟ್ಟು ನೀವು ಆಗ್ರೋಬೇಸ್ಡ್ ಇಂಡಸ್ಟ್ರೀಸ್‌ಗಳನ್ನು ಮಾಡಬೇಕು. ಹಿಂದೆ ಶ್ರೀಕಂಠಯ್ಯನವರು ಪವರ್ ಮಿನಿಸ್ಟರ್ ಆಗಿದ್ದರು. ಅಲ್ಲಿಯೂ ಭಾಷಣ ಮಾಡಿದ್ದನ್ನು ಕೇಳಿದ್ದೆ. ಅದೇನೋ ಮೋಡಕ್ಕೆ ಹಾಕಿ ಮಳೆ ಸುರಿಸುತ್ತಾರಂತಲ್ಲಾ ಕೃತಕ ಮಳೆ ನಿಜವೋ? ಪಶ್ಚಿಮಘಟ್ಟದಲ್ಲಿ ಮಳೆ ಸುರಿದುಬಿಡುತ್ತದೆ. ಹಾಗೆ, ಮಳೆ ಮೋಡ ಮುಂದಕ್ಕೆ ಹೋಗುತ್ತದೆ.

ಆಂಧ್ರಪ್ರದೇಶ ಆ ಕಡೆ ಮಳೆಯಾಗುತ್ತದೆ. ಮಧ್ಯ ಮಳೆ ನೆರಳಿನ ಪ್ರದೇಶ ಅವಕಾಶವಿದ್ದರೆ ಆರ್ಟಿಫಿಶಿಯಲ್ ರೈನ್‌ನ್ನು ಸುರಿಸುವುದಕ್ಕೆ ಪ್ರಯತ್ನವನ್ನು ಮಾಡಿ. ಆ ರೀತಿ ಪ್ರಯತ್ನವನ್ನು ಮಾಡುತ್ತೀರಾ? ಆಮೇಲೆ 1951 ನೇ ಇಸವಿ ವಿಚಾರ ಹೇಳಬೇಕು. ಡೇಟ್ ಮರೆತಿದ್ದೇನೆ. ಡಾ:ಅಂಬೇಡ್ಕರ್ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ನಾನು ಆಗ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದೆ. ಅವರು ಏನು ಹೇಳಿದರು ಎಂದರೆ ಈ ಪಶ್ಚಿಮ ಘಟ್ಟದಲ್ಲಿ 3600, 4000 ಅಡಿ ಬೆಟ್ಟದ ರೇಂಜ್ ಇದೆ. ಇಂದಲ್ಲ ನಾಳೆ ಒಂದು ಕಾಲಕ್ಕೆ ಮುಂದೆ ಕೊನೆಯ ಪಕ್ಷ 200 ಅಡಿ 300 ಅಡಿಯ ಒಂದು 4-5 ವ್ಯಾಲಿಯನ್ನು ಮಾಡಿ ಬಾಂಬ್ ಹಾಕಿ ಅಥವಾ ನ್ಯೂಕ್ಲಿಯರ್ ಪವರ್ ಅನ್ನು ಉಪಯೋಗಿಸಿ 300 ಅಡಿ 400 ಬೆಟ್ಟವನ್ನು ಸ್ವಲ್ಪ ಕಡಿಮೆ ಮಾಡಿದರೆ ಈ ಪೂರ್ವ ಪ್ರದೇಶಕ್ಕೆ ಮಳೆ ಆಗುತ್ತದೆ ಎನ್ನುವ ಒಂದು ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದರು. ನಾನು ಅದನ್ನು ಓದಿದ್ದೆ. ಸ್ವಾಮಿ, ಅದು ಎಷ್ಟರಮಟ್ಟಿಗೆ ಪ್ರಾಕ್ಟಿಕಲ್ ಅಲ್ಲವೋ ಉಂಟು. ಅಂತೂ ಈ ಬರಗಾಲವನ್ನು ಹೋಗಲಾಡಿಸುವುದರ ಬಗ್ಗೆ ಇದಕ್ಕೂ ಒಂದು ನೀವು ಆಲೋಚನೆ ಮಾಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಈ ರೈತರ ಪರವಾಗಿ ಹೇಳಿದ್ದೇನೆ. ನೀವು ಬಂದ ಮೇಲೆ ಕರ್ನಾಟಕದಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ. ಈ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಸ್ವಲ್ಪ ಪರಿಸ್ಥಿತಿ ಉತ್ತಮ ಆಗಿದೆ. ಹೌದು ಅದನ್ನೇ ಹೇಳುತ್ತಿದ್ದೇನೆ. ಕೆಲಸ ಜೋರು ಮಾಡಿ ಮಾಡಿಸಿಕೊಳ್ಳುವ ಶಕ್ತಿ ನಮಗಿಲ್ಲ. ಸ್ವಲ್ಪ ನಾಲ್ಕು ಒಳ್ಳೆಯ ಮಾತನ್ನಾದರೂ ಆಡಿ ಕೆಲಸ ಮಾಡಿಸಬೇಡವಾ? ನಿಮಗೇನು ಹೊಟ್ಟೆ ಉರಿ? ಸ್ವಲ್ಪ ದಯವಿಟ್ಟು ಈ ರೈತರ ಕಡೆಗೆ, ಅದರಲ್ಲೂ ಹಸಿದಿರುವ ರೈತರ ಕಡೆಗೆ ನೀವು ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ. ಸ್ವಾಮಿ, ಇನ್ನು ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕೋಲಾರದಲ್ಲಿ ಮೂರು ಜನ, ಗಂಡ, ಹೆಂಡತಿ ಮತ್ತು ಮಗು ಸತ್ತರಲ್ಲಾ, ಆ ಬಗ್ಗೆ ಅದೇನೋ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೀರಂತಲ್ಲಾ ಯಾಕೆ? ಅವರು ನಿಮ್ಮ ಹತ್ತಿರ ಪಾಪ 50 ಸಾವಿರ ದುಡ್ಡು ತೆಗೆದುಕೊಳ್ಳುವುದಕ್ಕೆ ಪ್ರಾಣ ಕಳೆದುಕೊಳ್ಳುತ್ತಿದ್ದಾರಾ? ನಾನು ಹೇಳುತ್ತೇನೆ ಇದು ರೈತರಿಗೆ ಮಾಡಿದಂತಹ ಅಪಚಾರ. ನೀವೇನಾದರೂ ರೈತರನ್ನು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ದುಡ್ಡು ಕೊಡುತ್ತೇವೆಂದರೆ ಅದು ಅಪಚಾರ ಆಗುತ್ತದೆ. ಆ ಮಗು ಆರು ತಿಂಗಳದ್ದು, ನಾನು ಫೋಟೋದಲ್ಲಿ ನೋಡಿದ್ದೇನೆ. ಪಕ್ಕದಲ್ಲಿ ತಾಯಿ ಮಗುವನ್ನು ಮಲಗಿಸಿಕೊಂಡು ಪ್ರಾಣ ಕಳೆದುಕೊಂಡು ಮಲಗಿದ್ದಾಳೆ. ಅವನು ವರ್ಷವೆಲ್ಲಾ ಬೆಳೆದು ಮಾಡಿ ಮಟ್ಟ, ತನ್ನ ಮಗು, ತನ್ನ ಹೆಂಡತಿ, ತನ್ನ ಸಂಸಾರಕ್ಕೆ ಆಗಬೇಕು ಎಂದು ಅಷ್ಟೊಂದು ದುಡಿದು ಕೊನೆಗೆ ಅಸಹಾಯಕನಾಗಿ ತನ್ನ ಕೈಯಿಂದ ನಾಲ್ಕು ತಿಂಗಳ ಮಗುವನ್ನು ಕೊಲೆ ಮಾಡಬೇಕಾದರೆ ಅವನ ಆರ್ಥಿಕ ಪರಿಸ್ಥಿತಿ ಯಾವ ರೀತಿ ಇತ್ತು ಎನ್ನುವುದನ್ನು ನೀವು

ದಯವಿಟ್ಟು ಯೋಚನೆ ಮಾಡಿ ನೋಡಿ. ಹಾಗಾದರೆ ರೈತರು ಈ ದೇಶಕ್ಕೋಸ್ಕರ ದುಡಿದಿಲ್ಲವಾ? ಬೆವರು ಸುರಿಸಿಲ್ಲವಾ? ಅನ್ನ ಬೆಳೆದಿಲ್ಲವಾ? ನಿಮಗೆ ಕೊಟ್ಟಿಲ್ಲವಾ ಅಥವಾ ಇನ್ನ್ಯಾವುದಾದರೂ ಕೆಟ್ಟ ಚಾಳಿಯಲ್ಲಿ ಅವನು ದುಡ್ಡು ಕಳೆದುಕೊಂಡನಾ? ಏನೂ ಇಲ್ಲವಲ್ಲಾ. ಅವನು ನ್ಯಾಯವಾಗಿ ಬದುಕಿದಂತಹ ರೈತ. ಅಂತಹ ಹೀನ ಸ್ಥಿತಿಗೆ ಬಂದು, ತೊಂದರೆಗೆ ಬಂದು ಅವಮಾನ ಸಹಿಸಲಾರದೆ ನಾಳೆ ಮರ್ಯಾದೆ ಹೋಗುತ್ತಿದೆ ಎಂದು ಹೇಳಿಬಿಟ್ಟು ಅವನು ಸೂಯಿಸೈಡ್ ಮಾಡಿಕೊಂಡರೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಹೇಳುತ್ತೀರಿ, ಇದು ಧರ್ಮವಾ? ಆ ದುಡಿಯತಕ್ಕಂತಹ ರೈತರಿಗೆ, ಆ ಬಡಪಾಯಿಗೆ ನೀವು ಮಾಡತಕ್ಕ ಅಪಚಾರವಲ್ಲವಾ ಇದು? ಯಾವ್ಯವುದಕ್ಕೋ ಖರ್ಚು ಮಾಡುತ್ತೀರಿ. ಸತ್ತಂತಹ ಸಂಸಾರಕ್ಕೆ ಒಂದು ಲಕ್ಷ ರೂಪಾಯಿ ಕೊಟ್ಟರೆ ಏನು ಬಡತನ ಬರುತ್ತದೆ? 17-18 ಸಾವಿರ ಕೋಟಿ ಇನ್‌ಕಂ ಬರುತ್ತಿದೆಯಲ್ಲಾ ಈ ದೇಶದಲ್ಲಿ. ಆ ರೀತಿ ಏಕೆ ಮಾಡುವುದು? ದಯವಿಟ್ಟು ಇನ್ನು ಯಾರಾದರೂ ರೈತರು ತೊಂದರೆ ಆಗಿ ವಿಷ ತೆಗೆದುಕೊಂಡು ಸತ್ತರೆ ಮ್ಯಾಜಿಸ್ಟ್ರೇಟರನ್ನು ಕಳುಹಿಸಬೇಡಿ. ಮೂರಕ್ಕೆ ಸ್ವಲ್ಪ ಏನಾದರೂ ಹೆಚ್ಚು ಕಡಿಮೆ ಆಗಬಹುದು ಅಷ್ಟೇ? ಉಳಿದಂತಹವು ಆಗುವುದಿಲ್ಲ. ಹಾಗೆಯೇ ಸತ್ತು ಬಿಡುತ್ತಾರಾ? ಈಗ ಒಂದು ಲಕ್ಷ ರೂಪಾಯಿ ಕೊಡುತ್ತಾರೆಂದರೆ ನಾನಂತೂ ಸಾಯುವುದಿಲ್ಲ ನೀವು ಸಾಯುತ್ತೀರಾ? ಹೆಂಗಸರು ಮಕ್ಕಳಿಗೆ ಒಂದು ಲಕ್ಷ ರೂಪಾಯಿ ಸಿಗುತ್ತದೆ ಎಂದು ಹೇಳಿ ನೀವು ಸಾಯಲು ಹಗ್ಗ ಹಾಕಿಕೊಳ್ಳುತ್ತೀರಾ? ಯಾವ ಮುಠ್ಠಾಳ ಕೂಡ ಹೆಂಗಸರು, ಮಕ್ಕಳನ್ನು ಬಿಟ್ಟು ಸಾಯಲು ದುಡ್ಡಿಗೋಸ್ಕರ ಒಪ್ಪುವುದಿಲ್ಲ. ಆ ಮನುಷ್ಯನ ಮನಸ್ಸಿನ ನೋವು ಎಷ್ಟು ಇರಬೇಕು? ಅವನು ಸಾಯಬೇಕಾದರೆ ಆತ ಎಷ್ಟು ನೊಂದಿರಬೇಕು? ಈಗ ಈ ದೇಶಕ್ಕೆ ಎಷ್ಟು ಶಾಪ ಹಾಕಿರಬೇಕು? ಈ ಸಮಾಜಕ್ಕೆ ಎಷ್ಟು ಶಾಪ ಹಾಕಿರಬೇಕು? ನೀವು ದಯವಿಟ್ಟು ಆಲೋಚನೆ ಮಾಡಿ ನೋಡಿ. ಸತ್ತ ತಕ್ಷಣ 15 ದಿವಸದೊಳಗೆ ಅವರಿಗೆ ದುಡ್ಡು ಕೊಡಬೇಕು. ಅವರು ಇದ್ದರೆ ಕೊಡಬೇಕು. ಈಗ ಮೂರು ಜನರೂ ಹೋದರು. ನೀವು ಹೇಳುತ್ತಿದ್ದೀರಿ, ಹೆಂಡತಿಗೆ ಕೊಡಲಿ ಎಂದು ಹೇಳಿ ಸತ್ತಿದ್ದಾನೆ ಎಂದು ಹೇಳುತ್ತಿದ್ದೀರಿ. ಗಂಡ, ಹೆಂಡತಿ, ಮಗು ಮೂರು ಜನರೂ ಸತ್ತಿದ್ದಾರಲ್ಲಾ, ಇದಕ್ಕೆ ಏನು ಹೇಳುತ್ತೀರಿ? ಅವನು ಯಾರಿಗೋಸ್ಕರ ಸತ್ತ? ಯಾರಿಗೆ ದುಡ್ಡು ಕೊಡಲು ಸತ್ತ? ನೀವು ದಯವಿಟ್ಟು ಆಲೋಚನೆ ಮಾಡಿ ನೋಡಿ. ಹೀಗಾಗಿರುವುದರಿಂದ ಏನಾದರೂ ಮಾಡಿ. ಆದರೆ ತಿಳಿದೂ ತಿಳಿದೂ ಅಪಚಾರ ಮಾಡಬೇಡಿ. ಆ ಮುಗ್ಧ ರೈತರ ಬಗ್ಗೆ, ಮುಗ್ಧ ರೈತರ ಸಂಸಾರದ ಬಗ್ಗೆ ಆಲೋಚನೆ ಮಾಡಿ. ಸ್ವಾಮಿ, ಅವರು ಬೆಳೆದಿದ್ದಲ್ಲವೇ ನಾವು ತಿನ್ನುವುದು? ಅವರು ಕೊಟ್ಟಂತಹ ತೆರಿಗೆಯಿಂದಲ್ಲವಾ ನಾವೆಲ್ಲ ಇರುವುದು? ಅವನು ಮನುಷ್ಯರಿಗೆ ಆಹಾರ ಬೆಳೆಯಬೇಕು, ದನಕರುಗಳಿಗೆ ಆಹಾರ ಬೆಳೆಯಬೇಕು. ಹಕ್ಕಿ ಪಕ್ಷಿಗಳಿಗೆ ಆಹಾರ

ಬೆಳೆಯಬೇಕು ಹಾಗೆಯೇ ಕ್ರಿಮಿಕೀಟಗಳಿಗೂ ಆಹಾರ ಬೆಳೆಯಬೇಕು. ಅನ್ನ ಕೊಡಬೇಕಲ್ಲಾ ಆ ನೇಗಿಲ ಯೋಗಿ ಎನ್ನುವವನು. ಅವನಿಗೆ ಎಷ್ಟರಮಟ್ಟಿಗೆ ನೀವು ಉಪಯೋಗಿಸಿಕೊಳ್ಳುತ್ತೀರಿ? ನೀವು ದಯವಿಟ್ಟು ಹೇಳಿ, ಆಲೋಚನೆ ಮಾಡಿ ನೋಡಿ. ಅಂತಹ ಒಬ್ಬ ಮುಗ್ಧ ರೈತ ತೊಂದರೆಗೆ ಸಿಕ್ಕಿ ಹಾಕಿಕೊಂಡರೆ ಅವನನ್ನು ಎನ್‌ಕ್ವೈರಿ ಮಾಡಲು ಮ್ಯಾಜಿಸ್ಟ್ರೇಟರನ್ನು ಕಳುಹಿಸುತ್ತೀರಾ? ಇದು ತಪ್ಪು. ದೇವರು ಕ್ಷಮಿಸುವುದಿಲ್ಲ. ಸಮಾಜ ಕ್ಷಮಿಸುವುದಿಲ್ಲ. ನಿಮ್ಮ ಆತ್ಮನೂ ಒಪ್ಪುವುದಿಲ್ಲ. ಪಿನೋ ಕಂದಾಚಾರಕ್ಕೆ ಹೇಳಬಹುದು. ಇಂಥವನ್ನೆಲ್ಲಾ ನಿಲ್ಲಿಸಿಬಿಟ್ಟು ಅವರಿಗೆ ಬಂದಂತಹ ತೊಂದರೆಯನ್ನು ನೀವು ತಪ್ಪಿಸಿ ಈ ಸಂದರ್ಭದಲ್ಲಿ ತಿಳಿಸಲು ನಾನು ಇಚ್ಛಿಪಡುತ್ತೇನೆ. ಇನ್ನೊಂದು ವಿಚಾರ ಹೇಳಬೇಕಾಗಿತ್ತು, ಹೇಳಲಾ?

ಛೇರ್ಮನ್: ನೀವು ಐದು ನಿಮಿಷ ಅವಕಾಶ ಎಂದು ಹೇಳಿ ಈಗ ಹದಿನೈದು ನಿಮಿಷ ಆಗಿ ಹೋಯಿತು.

ಶ್ರೀ ಕೆ.ಎಚ್.ಹನುಮೇಗೌಡ: ಸ್ವಾಮಿ, ನಮ್ಮ ಕಡೆ ಶರಾಬು ಯಥೇಚ್ಛವಾಗಿದೆ. ಸಮೃದ್ಧಿಯಾಗಿ ಇದೆ. ನಾಲ್ಕು ದಾಪು ನೆಗೆದರೆ ಒಂದೊಂದು ಅಂಗಡಿ. ಒಂದೊಂದು ಊರಿನಲ್ಲಿ ಎಲ್ಲಾ ಪೆಟ್ಟಿಗೆ ಅಂಗಡಿಯಲ್ಲೂ ಅದೇ ಇದೆ. ನಾನು ಕೊನೆಯ ಮಾತು ಹೇಳಿ ಮುಗಿಸುತ್ತೇನೆ. ಈಗ ಸ್ತ್ರೀ ಶಕ್ತಿ ಸಂಘಟನೆ ಎಂದು ಮಾಡಿದ್ದೀರಿ. ಎಲ್ಲಾ ಊರಿನಲ್ಲೂ ನಾಲ್ಕೈದು ಸಂಘಗಳು ಇವೆ. ಆ ಹೆಣ್ಣು ಮಕ್ಕಳಿಗೆ ವಿವೇಕ ಬಂದಿದೆ. ಅದೊಂದು ನೀವು ಮಾಡಿದಂತಹ ಬಹಳ ಪುಣ್ಯದ ಒಂದು ಕೆಲಸ. ನೀವು ಆ ಸ್ತ್ರೀ ಶಕ್ತಿಯನ್ನು ಆರ್ಗನೈಸ್ ಮಾಡಿದ್ದು ಪುಣ್ಯದ ಕೆಲಸ. ನಾನು ಒಂದು ಕೋಟಿ ನಮಸ್ಕಾರವನ್ನು ನಿಮಗೆ ಹೇಳುತ್ತೇನೆ. ಇಂತಹ ಒಳ್ಳೆಯ ಕೆಲಸ ಮಾಡಿಕೊಂಡು ಹೋಗುವುದಾದರೆ ಇನ್ನೂ 15-20 ವರ್ಷ ನೀವೇ ಅಧಿಕಾರದಲ್ಲಿ ಇರಿ. ನಾವು ಬೇಡ ಎಂದು ಹೇಳುವುದಿಲ್ಲ. ನನಗೆ ನೋವಾಗುತ್ತಿದೆ. ನಾನು ಹೇಳುವ ತನಕ ಕೇಳಿ. ಆ ನಂತರ ಮಾತನಾಡುವಿರಂತೆ. ಈಗ ಊರಲ್ಲೆಲ್ಲಾ ಹೆಂಗಸರು ಸಂಘಟನೆ ಮಾಡಿಕೊಂಡು ಚಳುವಳಿ ಮಾಡುತ್ತಿದ್ದಾರೆ. ನಮ್ಮ ಊರಿನಲ್ಲಿ ಶರಾಬನ್ನು ಮಾರಕೂಡದು ಹಾಗೆ ಎಂದು ಹೇಳಿ ಚಳುವಳಿ ಮಾಡಲು ಶುರು ಮಾಡಿದ್ದಾರೆ. ಒಂದು ಡೆಪ್ಯುಟಿ ಕಮೀಷನರ್ ಆಫೀಸಿಗೆ ಆ ಹೆಂಗಸರನ್ನೂ ಕರೆದು ಕೊಂಡು ನಾನು ಹೋದೆ. ಒಮ್ಮೆ ಮಾನ್ಯ ಶ್ರೀಕಂಠಯ್ಯನವರಿಗೂ ಭೇಟಿ ಮಾಡಿಸಿದ್ದೆ. 70-80, 100 ಹೆಣ್ಣು ಮಕ್ಕಳು ಬರುತ್ತಾರೆ. ಅವರು ಕಣ್ಣೀರು ಹಾಕಿಕೊಂಡು ಹೇಳುತ್ತಾರೆ. ಕಣ್ಣೀರು ಹಾಕಿಕೊಂಡು ಒಬ್ಬ ಹೆಣ್ಣು ಮಗಳು ಹೇಳಿದಳು ಡೆಪ್ಯುಟಿ ಕಮೀಷನರ್‌ಗೆ ತೋರಿಸಿದಳು. ನಿನ್ನೆ ಸಾಯಂಕಾಲ ನನ್ನ ಗಂಡ ಚಿನ್ನದ ತಾಳಿ ಕಿತ್ತುಕೊಂಡು ಹೋಗಿ ಕುಡಿದು ಬಂದು ಬಿಟ್ಟ. ನಾವು ಹಿಂದೂ ಹೆಂಗಸರು, ಬರೇ ಕೊರಳಲ್ಲಿ ಇರಬಾರದು,

ಗಂಡ ಇದ್ದ ಹಾಗೆ ಎಂದು ಹೇಳಿ ಐದು ರೂಪಾಯಿ ತಾಮ್ರದ ತಾಳಿ ತಂದು ಹಾಕಿಕೊಂಡು ಹೇಳಿದಳು. ನನಗೆ ಎರಡು ಮಕ್ಕಳು ಇದ್ದಾವೆ ಹಾಗೆ ಎಂದು ಹೇಳಿ ಕಣ್ಣೀರು ಹಾಕಿದಳು. ಆಮೇಲೆ ಡೆಪ್ಯುಟಿ ಕಮೀಷನರ್, ಆ ಊರಿನಲ್ಲಿ ದಂಡಿಗನ ಹಳ್ಳಿ ಎಂದು ಅವರ ತಾಲ್ಲೂಕು. ಹೋಬಳಿ ಪ್ರದೇಶ. ಆ ಪ್ರದೇಶದಲ್ಲಿ ಕಲ್ಲು ಒಡೆಯುವ ಒಂದು ಬಂಡೆ ಇದೆ. ಆ ಊರಿನ ಹೆಂಗಸರೆಲ್ಲಾ ಹೋಗಿ ಆ ಕಲ್ಲು ಬಂಡೆ ಮೇಲೆ ಕಲ್ಲು ಚಚ್ಚುತ್ತಾರೆ, ಸ್ವಾಮಿ, ಅವರಿಗೆ ಯಾವಾಗ ದುಡ್ಡು ಬರಲು ಶುರು ಆಯಿತೋ 8-10 ಲಿಕ್ಕರ್ ಶಾಪ್ ಹುಟ್ಟಿ ಬಿಟ್ಟಿತು ಆ ಊರಿನೊಳಗೆ. ಇಲ್ಲಿಂದ ದುಡಿದು ತೆಗೆದುಕೊಂಡು ಹೋಗಿದ್ದನ್ನೆಲ್ಲಾ ಶರಾಬು ಕುಡಿಯುವುದು. ರಾತ್ರಿ ಹೊತ್ತು ಹೆಂಗಸರಿಗೆ ಬಡಿಯುವುದು. ಇಷ್ಟೇ ನಡೆಯುತ್ತಿರುವುದು. ಕೊನೆಗೆ ದೊಡ್ಡ ಹೋರಾಟ ಮಾಡಿ ಅದು ನಿಂತು ಹೋಯಿತು. ಹೀಗೆಯೇ 8-10 ಹಳ್ಳಿಗಳಲ್ಲಿ ಚಳುವಳಿ ನಡೆಯುತ್ತಿದೆ. ಅದು ಬೆಳೆಯುತ್ತಿದೆ, ಹಾಗೆಯೇ ನಿಂತು ಹೋಗಿದೆ. ಮೊನ್ನೆ ಒಂದು ಕುಪ್ಪಳ್ಳಿ ಎಂಬ ಊರಿಗೆ ಹೋದೆ. ಇದು ನಡೆದಂತಹ ಘಟನೆ. ತಾವು ಗೃಹಸಚಿವರಾಗಿರುವುದರಿಂದ ಹೇಳುತ್ತಿದ್ದೇನೆ. ಆ ಊರಿನಲ್ಲಿ 10-20 ಜನ ಎಸ್‌ಎಸ್‌ಎಲ್‌ಸಿ, ಪಿಯುಸಿ ಮಾಡಿದಂತಹ ಹೆಂಗಸರು ಇದ್ದಾರೆ. ನನ್ನನ್ನು ಬಂದು ಕೇಳಿದರು. ಲಾರಿ ಬಂದಾಗ ಸ್ವಲ್ಪ ಅಡ್ಡಗಟ್ಟಿ ಮಾತು ಕೇಳದೇ ಹೋದರೆ ಸ್ವಲ್ಪ ಪರಕೆ ತೆಗೆದುಕೊಂಡು ನಿಂತುಕೊಳ್ಳಿ, ಅದು ನಿಮಗೆ ವಜ್ರಾಯುಧ ಇದ್ದ ಹಾಗೆ. ಅದನ್ನು ನೋಡಿದರೆ ಎಂಥಹ ಗಂಡಸಾದರೂ ಓಡಿ ಹೋಗುತ್ತಾನೆಂದು ಹೇಳಿದ್ದೆ. ಆಗ ಲಾರಿ ಬಂತಂತೆ. ಲಾರಿ ಬಂದಾಗ ಅಡ್ಡಗಟ್ಟಿದ್ದರು. ಒಬ್ಬ ಹುಡುಗ, 20-25 ವರ್ಷದವನು. ಅವನು ಮುಂದೆ ಹೋಗಿ ಬೆತ್ತಲೆ ಆಗಿ ಬಿಟ್ಟನಂತಲ್ಲಾ, ಯೋಚನೆ ಮಾಡಿ. ಅಂತಹ ಸನ್ನಿವೇಶದಲ್ಲಿ ನನ್ನ ಮಗಳೋ, ಅಥವಾ ಹೆಂಡತಿ ಅಥವಾ ನಿಮ್ಮ ಮನೆಯವರು ಅಥವಾ ಮಾನ್ಯ ಶ್ರೀಕಂಠಯ್ಯನವರ ಮನೆಯ ಹೆಂಗಸರು ಮಕ್ಕಳು ಇದ್ದರೆ ಅವರ ಮೇಲೆ ಏನು ಪರಿಣಾಮ ಆಗುತ್ತಿತ್ತು? ಇದರ ಬಗ್ಗೆ ದಯವಿಟ್ಟು ಯೋಚನೆ ಮಾಡಿ. ನಿಮ್ಮ ಹೆಂಗಸರು ಯಾರು ಈ ಸಮಾಜಕ್ಕೋಸ್ಕರ, ಈ ದೇಶಕ್ಕೋಸ್ಕರ ನ್ಯಾಯ ನೀತಿ ಧರ್ಮ ಇಟ್ಟುಕೊಂಡು ಹೋರಾಟ ಮಾಡುತ್ತಿದ್ದಾರೋ ಅವರಿಗೆ ಅವಮಾನ ಆದ ಮೇಲೆ, ಅಂದರೆ ಆ ಸ್ತ್ರೀ ಸಮಾಜಕ್ಕೆ ಅವಮಾನ ಆದ ಮೇಲೆ ಏಕೆ ಸ್ವಾಮಿ, ನಾನು ಎಂಎಲ್‌ಎ ಆಗಿರಬೇಕು? ನೀವ್ಯಾಕೆ ಗೃಹ ಮಂತ್ರಿಗಳಾಗಿ ಇರಬೇಕು? ಅಂತಹ ಹೆಣ್ಣು ಮಕ್ಕಳ ಅವಮಾನವನ್ನು ತಪ್ಪಿಸುವ ಶಕ್ತಿ ನಮಗೆ ಇಲ್ಲದ ಮೇಲೆ ನಾವ್ಯಾಕೆ ಹೀಗೆ ಇರಬೇಕು? ಆಮೇಲೆ ಅವರು ಅಳುತ್ತಾ ಬಂದು ಹೇಳಿದರು. ಎಸ್‌ಪಿ ಅವರಿಗೆ ಹೇಳಿ ನಾನು ಬೆಳಿಗ್ಗೆ ಆ ಊರಿಗೆ ಹೋದೆ. ಊರಿಗೆ ಹೋಗಿ ಎಲ್ಲರನ್ನೂ ಕರೆಸಿದೆ. ಗಂಡು ಹುಡುಗರು, ಹೆಂಗಸರು ಎಲ್ಲರನ್ನೂ ಕರೆಸಿದೆ ಎಲ್ಲರೂ ಒಪ್ಪಿಕೊಂಡರು. ಹೌದು ನಿಜ, ಹೀಗೆ ಮಾಡಿದ ಎಂದು ಒಪ್ಪಿಕೊಂಡರು. ಸ್ವಾಮಿ, ಇದು ಆಗಬಹುದಾ? ನೀವು ಮಾತೇ

ಆಡುವುದಿಲ್ಲವಲ್ಲಾ? ಇದು ಎನ್‌ಕ್ವೈರಿ ಆಗಬೇಕು. ಎಲ್ಲಾ ಊರಿನಲ್ಲೂ ಹೀಗೆ ಬಿಚ್ಚಿಕೊಂಡು ನಿಂತರೆ ಗತಿ ಏನು? ಮಾನ ಮರ್ಯಾದೆ ಹೆಂಗಸರದ್ದು ಉಳಿಯುತ್ತದಾ? ನೋಡಿದ ಜನ ಏನೆನ್ನುತ್ತಾರೆ? ಇದು ಸ್ಪೆಡ್ ಆಗಬಾರದು. ಇದನ್ನು ಅಲ್ಲಿ ಮಾಡಿದ್ದಾರೆ. ನಾಳೆ ದಿವಸ ಹೆಚ್ಚು ಕಡಿಮೆ ಆದರೆ ಬೇರೆ ಬೇರೆ ಊರಲ್ಲಿ ಹೀಗೆಯೇ ಶುರು ಆದರೆ ಹೇಗೆ? ಆ ಹೆಂಗಸರು ನಾಚಿಕೊಂಡು ಹೋಗಲಿ ಎಂದು ಹೀಗೆ ಮಾಡಿದ ಪ್ಲಾನ್, ದೇವರಾಣೆ ಸತ್ಯವಾಗಿ ಹೇಳುತ್ತೇನೆ. ಇದು ನಡೆದಂತಹ ಘಟನೆ. ನಾನು ಕಲ್ಪನೆ ಮಾಡಿ ಹೇಳುತ್ತಿಲ್ಲ. ನಾನು ಎಸ್‌ಪಿ ಅವರಿಗೆ ಬಂದು ಹೇಳಿದೆ. ಇದಕ್ಕಿಂತಲೂ ಅವಮಾನವಾದಂತಹ ವಿಚಾರ ಬೇರೆ ಇಲ್ಲ. ಇಮ್ಮೀಡಿಯಟ್ ಆಗಿ ಎನ್‌ಕ್ವೈರಿ ಮಾಡಿ ಆಕ್ಷನ್ ತೆಗೆದುಕೊಳ್ಳಿ ಎಂದು ಹೇಳಿ ಬಂದಿದ್ದೇನೆ. ತಾವೇನಾದರೂ ಅವನನ್ನು ಹಿಡಿಯುವುದಕ್ಕೆ ಆದೇಶವನ್ನು ಕೊಡುತ್ತೀರಾ? ಆ ಚಳುವಳಿ ನಡೆಯುತ್ತಿರುವ ಬಗ್ಗೆ ನಾನು ಎಕ್ಸೈಸ್ ಅಧಿಕಾರಿಯೊಬ್ಬರನ್ನು ವಿಚಾರಿಸಿದಾಗ 'ದಿವಸಕ್ಕೆ ಒಂದು ಸಾವಿರ ಲೀಟರ್‌ಗಳಷ್ಟು ಶರಾಬನ್ನು ಮಾರಾಟ ಮಾಡುವಂತೆ ಸರ್ಕಾರ ನಿಗದಿಪಡಿಸಿದೆ' ಎಂದರು. ಒಂದು ಕಡೆ ಬರ.

ಛೇರ್ಮನ್: ತಾವು ಪ್ರಸ್ತಾಪಿಸುತ್ತಿರುವ ವಿಷಯಕ್ಕೂ ಬರಗಾಲಕ್ಕೂ ಏನು ಸಂಬಂಧ?

ಶ್ರೀ ಕೆ.ಹೆಚ್.ಹನುಮೇಗೌಡ: ಇದು ಬರಗಾಲದಲ್ಲಿಯೇ ನಡೆಯುತ್ತಿರುವುದು. ಗಂಡಂದಿರು ತಮ್ಮ ಹೆಂಡತಿಯರ ಬಳಿಯಿರುವ ಒಡವೆ, ವಸ್ತ್ರ ತಾಳಿ ಹಾಗೂ ಇರುವುದೆಲ್ಲವನ್ನೂ ಕಿತ್ತುಕೊಂಡು ಹೋಗಿ ಅಡವಿಟ್ಟು ಬಂದ ಹಣದಿಂದ ಕುಡಿಯುತ್ತಿದ್ದಾರೆ. ತಾವು ಬೆಳೆದ ಬೆಳೆ ಏನಾದರೂ ಇದ್ದಿದ್ದರೆ ಅದನ್ನು ಮಾರಿ ಕುಡಿಯುತ್ತಿದ್ದರು. ಈಗ ಬರಗಾಲವಿರುವುದರಿಂದ ಏನೂ ಬೆಳೆಯಿಲ್ಲ. ತಮ್ಮ ಹೆಂಡಂತಿಯರ ಬಳಿಯಿರುವ ವಸ್ತುಗಳನ್ನು ಕಸಿಯಲು ನಿಂತಿದ್ದಾರೆ. ಸತ್ಯವಾಗಿಯೂ ಈ ಘಟನೆ ಜರುಗುತ್ತಿದೆ. ಈ ಕುರಿತು ನಾನು ಒಬ್ಬ ಹೆಂಗಸನ್ನು ಕೇಳಿದಾಗ 'ಹದಿನೈದು ದಿವಸಗಳ ಹಿಂದೆ ನನ್ನ ತಂದೆ ನನಗೊಂದು ಸೀರೆ ತಂದುಕೊಟ್ಟಿದ್ದರು. ನಾನು ಅದನ್ನು ಮನೆಯಲ್ಲಿಟ್ಟು ಹೊಲಕ್ಕೆ ಹೋಗಿದ್ದೆ. ಮನೆಗೆ ಬರುವುದರೊಳಗಾಗಿ ನನ್ನ ಗಂಡ ಸೀರೆಯನ್ನು ತೆಗೆದುಕೊಂಡು ಹೋಗಿ ಮಾರಿ ಅದರಿಂದ ಬಂದ ಹಣದಲ್ಲಿ ಕುಡಿದು ಬಂದಿದ್ದ' ಎಂದಳು. ಮಕ್ಕಳಿಗೋಸ್ಕರ ಅನ್ನ ಮಾಡಿಕೊಡಲು ಅಕ್ಕಿ ತಂದಿಟ್ಟರೆ ಅದನ್ನೂ ಸಹ ತೆಗೆದುಕೊಂಡು ಹೋಗಿ ಮಾರಿ ಕುಡಿದು ಬರುತ್ತಾರಂತೆ! ನಿನಗೇನು ಬಂದಿತ್ತು ಕೇಡು ಎಂದು ನಾನು ಒಬ್ಬನನ್ನು ಪ್ರಶ್ನಿಸಿದರೆ 'ದುಡ್ಡು ಕೊಡು, ಇಲ್ಲವೇ ನಿನ್ನ ಹೆಂಡತಿಯಿಂದ ದುಡ್ಡು ಕೊಡಿಸು' ಎಂದು ನನಗೇ ತಿರುಗುಬಾಣ ಬಿಡುತ್ತಾನೆ. ಎಷ್ಟರಮಟ್ಟಿಗೆ ಈ ದುಶ್ಚಟ ಸಮಾಜದಲ್ಲಿ ಬೆಳೆದು ಎಂತಹ ಘೋರ

ಅಪರಾಧವಾಗುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 'ಸ್ತ್ರೀ ಶಕ್ತಿ' ಎಂಬುದು ನಿಮ್ಮದೇ ಸರ್ಕಾರದ ಪ್ರಾಡಕ್ಟ್. ಆದುದರಿಂದ, ಎಲ್ಲೆಲ್ಲಿ ಇಂತಹ ಘಟನೆಗಳು ಜರುಗುತ್ತಿವೆಯೋ ಅಂತಹ ಕಡೆಗಳಲ್ಲಿ ಶರಾಬು ಮಾರಾಟ ಮಾಡುವುದನ್ನು ನಿಲ್ಲಿಸಿ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠರು ಲೈಸೆನ್ಸ್ ರದ್ದುಗೊಳಿಸಬೇಕು. ಈ ಕುರಿತು ತಾವು ಕ್ರಮ ಕೈಗೊಳ್ಳಬೇಕು. ನಾನು ಇದುವರೆವಿಗೂ ಇರುವ ವಿಚಾರವನ್ನು ಇದ್ದಂತೆಯೇ ಹೇಳಿದ್ದೇನೆ. ಸರ್ಕಾರ ಈ ಬಗ್ಗೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಂಡು ರಾಜ್ಯದ ಜನತೆಗೆ ಉತ್ತಮ ಆಡಳಿತ ಒದಗಿಸಲೆಂದು ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ.ಪಿ.ಅನಸೂಯಮ್ಮ ನಟರಾಜನ್(ಚಿಕ್ಕಬಳ್ಳಾಪುರ): ಮಾನ್ಯ ಛೇರ್ಮನ್‌ರವರೆ, ಸನ್ಮಾನ್ಯ ಮಂತ್ರಿಗಳೇ ಹಾಗೂ ಆತ್ಮೀಯ ಸದಸ್ಯರೆ, ಮನುಷ್ಯನಿಗೆ ಪ್ರಕೃತಿಯಲ್ಲಿ ಗಾಳಿ, ಬೆಳಕು ಸಿಗುತ್ತಿದ್ದು, ಮತ್ತೊಂದು ಅತ್ಯಾವಶ್ಯಕವಾಗಿರುವುದು ನೀರು. ಕುಡಿಯುವ ನೀರಿಗೆ ಈಗ ಎಷ್ಟೊಂದು ಹಾಹಾಕಾರ ಎದ್ದಿದೆ ಎಂಬುದು ನಮಗೆಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಕುಡಿಯುವ ನೀರಿನ ಅಭಾವ ನೀಗಿಸಲು ನಮ್ಮ ಸರ್ಕಾರ ಮೊದಲನೆಯದಾಗಿ ಕಾರ್ಯಪಡೆ ರಚಿಸಿ ಕೊಳವೆಬಾವಿಗಳನ್ನು ಕೊರೆಸಲು ಸಾಕಷ್ಟು ಹಣಕಾಸಿನ ಮಂಜೂರಾತಿ ನೀಡಿತು. ಈ ಹಿಂದೆ ಯಾವ ಹಳ್ಳಿಗೆ ಹೋದಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ಜನರು ಕೇಳುತ್ತಿದ್ದರು. ಆದರೆ, ಈಗ ಸಾಕಷ್ಟು ಹಳ್ಳಿಗಳಲ್ಲಿ ಕೊಳವೆಬಾವಿಗಳನ್ನು ಕೊರೆಸುವುದರ ಮುಖಾಂತರ ನೀರನ್ನು ಸರಬರಾಜು ಮಾಡಿದ್ದೇವೆ. ಶೇಕಡ 75ರಷ್ಟು ಕುಡಿಯುವ ನೀರಿನ ಅಭಾವವನ್ನು ನೀಗಿಸುವಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಮತ್ತು ಯಾವ್ಯಾವ ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ಕೊಳವೆಬಾವಿ ಕೊರೆಸಿರುವುದಿಲ್ಲವೋ ಅಂತಹ ಹಳ್ಳಿಗಳನ್ನು ಕಾರ್ಯಪಡೆ ಮೂಲಕ ಪತ್ತೆಹಚ್ಚಿ ಕೊಳವೆಬಾವಿಗಳನ್ನು ಕೊರೆಸಿದ್ದೇವೆ. ಇದರ ಜೊತೆಗೆ ಮೋಟಾರು, ಪಂಪು, ಪೈಪ್‌ಲೈನ್ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೂ ನಮ್ಮ ಸರ್ಕಾರ ಹಣ ಕಲ್ಪಿಸಿದ್ದು, ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲೂ ಈಗ ನೀರಿನ ಅಭಾವ ಕಡಿಮೆಯಾಗಿರುತ್ತದೆ. ಎರಡನೆಯದಾಗಿ, ಬೆಟ್ಟ-ಗುಡ್ಡಗಳ ಪ್ರದೇಶಗಳಲ್ಲಿ ನೀರು ಹರಿಯುತ್ತಿದ್ದು, ನೀರನ್ನು ಫೀಡರ್ ಚಾನೆಲ್ ಮೂಲಕ ಕೆರೆಗಳಿಗೆ ಹಾಯಿಸಿ ಕೆರೆಗಳ ಮೂಲಕ ಗದ್ದೆಗಳಿಗೆ ನೀರನ್ನು ಫೀಡರ್ ಚಾನೆಲ್ ಮೂಲಕ ಕೆರೆಗಳಿಗೆ ಹಾಯಿಸಿ, ಕೆರೆಗಳ ಮೂಲಕ ಗದ್ದೆಗಳಿಗೆ ನೀರನ್ನು ಹರಿಸಿ ಬೆಳೆ ಬೆಳೆಯುವುದಕ್ಕೆ ಅವಕಾಶವಾಗುವಂತೆ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಜಲಭೂಮಿ ಅಭಿವೃದ್ಧಿ ಮಂಡಳಿ (ಡಿಎಲ್‌ಡಿಬಿ)ಯಿಂದ ಅಲ್ಲಲ್ಲಿ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಿ ನೀರನ್ನು ತಡೆಗಟ್ಟುವುದು, ಆ ನೀರಿನ ಸೌಕರ್ಯವನ್ನು ಪಕ್ಕದಲ್ಲಿರುವ ಹಳ್ಳಿಗಳಿಗೆ ಕಲ್ಪಿಸಿಕೊಡುವುದು ದನ-ಕರುಗಳಿಗೆ ಗೋ-ಕುಂಟೆ ನಿರ್ಮಿಸುವುದು,

ಇತ್ಯಾದಿ ರೈತರಿಗೆ ಅನುಕೂಲವಾಗುವಂಥ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕೆರೆಗಳಲ್ಲಿರುವ ಹೂಳೆತ್ತುವ ಕಾರ್ಯ ವಿಳಂಬವಾಗುತ್ತಿದ್ದು, ಸದರಿ ಕಾರ್ಯವನ್ನು ಸದ್ಯದಲ್ಲಿಯೇ ಹಮ್ಮಿಕೊಳ್ಳಲಾಗುವುದೆಂದು ನಮ್ಮ ಸರ್ಕಾರ ತಿಳಿಸಿದ್ದು, ಇದನ್ನು ಸರ್ಕಾರ ಖಂಡಿತಾ ಮಾಡುತ್ತದೆಂದು ನಾನು ಹೇಳುತ್ತಿದ್ದೇನೆ. ಇನ್ನು ಬಡವರು ಹಾಗೂ ಬಡ ರೈತರ ಬಗ್ಗೆ ಸದನದಲ್ಲಿ ಪ್ರತಿ ದಿನವೂ ಪ್ರಸ್ತಾಪವಾಗುತ್ತಿದ್ದು, ಇವರಿಗೆ ಸಾಗುವಳಿ ಮಾಡಲು ಹೊಲ ಬೇಕಾಗಿರುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಹಲವಾರು ವರ್ಷಗಳಿಂದಲೂ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಅಕ್ರಮ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮಗೊಳಿಸುವ ಸಂಬಂಧ ಸರ್ಕಾರದ ಮುಂದೆ ಸುಮಾರು ಏಳು ಸಾವಿರದಷ್ಟು ಅರ್ಜಿಗಳು ಬಂದಿದ್ದು, ಹಂತ ಹಂತವಾಗಿ ಅರ್ಜಿಗಳನ್ನು ಪರಿಶೀಲಿಸಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ರಾಜ್ಯದ ಅನೇಕ ತಾಲ್ಲೂಕುಗಳಲ್ಲಿ ಇತ್ಯರ್ಥಗೊಳಿಸಲಾಗುತ್ತಿದೆ. ಅದೇ ರೀತಿ ರೈತನಿಗೆ ಭೂಮಿ ಸಿಕ್ಕಿದ ಬಳಿಕ ವ್ಯವಸಾಯ ಮಾಡಲು ನೇಗಿಲು ಒಳಗೊಂಡಂತೆ ಇನ್ನಿತರ ಕೃಷಿ ಉಪಕರಣಗಳು ಬೇಕಾಗುವುದರಿಂದ ಇವುಗಳನ್ನು ಕೊಳ್ಳಲು ಸಾಮಾನ್ಯ ವರ್ಗದವರಿಗೆ ಶೇಕಡ 50ರಷ್ಟು ಸಬ್ಸಿಡಿ ನೀಡಿದರೆ ಪರಿಶಿಷ್ಟ ಜಾತಿಯವರಿಗೆ ಉಚಿತವಾಗಿ ನೀಡಲಾಗುತ್ತಿದೆ. ಯಾವ ಭೂಮಿಯಲ್ಲಿ ಯಾವ ಬೆಳೆ ಬೆಳೆದರೆ ಅನುಕೂಲವಾಗುತ್ತದೆ, ಬಿತ್ತನೆ ಬೀಜ ಯಾವಾಗ ಹಾಕಬೇಕು, ಸಾವಯವ ಹಾಗೂ ರಾಸಾಯನಿಕ ಗೊಬ್ಬರವನ್ನು ಹೇಗೆ ಹಾಕಬೇಕು ಇನ್ನು ಮುಂತಾದ ವ್ಯವಸಾಯಕ್ಕೆ ಸಂಬಂಧಿಸಿದಂತೆ ಅನೇಕ ರೀತಿಯ ಸಲಹೆ, ಸಹಕಾರಗಳನ್ನು ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ತಜ್ಞರುಗಳು ರೈತರಿಗೆ ನೀಡುತ್ತಿದ್ದಾರೆ. ಇನ್ನು ರೈತರಿಗೆ ಅನುಕೂಲ ಕಲ್ಪಿಸಿಕೊಡುವುದಕ್ಕೋಸ್ಕರ ಮಾರ್ಕೆಟಿಂಗ್ ಫೆಡರೇಷನ್‌ನಿಂದ ನಮ್ಮ ತಾಲ್ಲೂಕಿಗೆ ಮೂರು ಲಕ್ಷ ರೂಪಾಯಿಗಳು ಬಂದಿದ್ದು, ಅದರಲ್ಲಿ ಕೇವಲ ಅರವತ್ತು ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದೆ. ನಮ್ಮ ತಾಲ್ಲೂಕಿನ ಮರಸನಹಳ್ಳಿ ಗ್ರಾಮಕ್ಕೆ ಸೇರಿರುವ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಸದನದಲ್ಲಿ ಪ್ರಸ್ತಾಪವಾಗಿದ್ದು, ಒಬ್ಬ ರೈತ ಕೋಸು ಬೆಳೆ ಬೆಳೆದು ನಷ್ಟ ಹೊಂದಿ ಆತ್ಮಹತ್ಯೆಗೀಡಾಗಿದ್ದರೆ ಮತ್ತೊಬ್ಬ ರೈತ ಈರುಳ್ಳಿ ಬೆಳೆದು ನಷ್ಟ ಹೊಂದಿ ಆತ್ಮಹತ್ಯೆಗೀಡಾಗಿದ್ದಾನೆಂದು ತನಿಖೆಯಿಂದ ಸಾಬೀತಾಗಿರುತ್ತದೆ.

5.10 ಪಿಎಂ

12ನೇ ತಾರೀಖು ನನ್ನ ಕ್ಷೇತ್ರದ ಕೊಳವನಹಳ್ಳಿ ಎಂಬಲ್ಲಿ ಮೀನಾಕ್ಷಮ್ಮ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಯಜಮಾನರು ಮೂರು ವರ್ಷಗಳ ಹಿಂದೆ ಅಪಘಾತದಲ್ಲಿ ಮೃತಪಟ್ಟಿದ್ದರು. ಆ ಮಹಿಳೆ ಅವರ ಭಾವ,

ವೈದರವರೊಂದಿಗೆ ಸಾಲ ಮಾಡಿ ಬೆಳೆಯನ್ನು ಇಟ್ಟರು. ಬೆಳೆ ನಾಶವಾಯಿತು. ಆದರೆ ಸಾಲವನ್ನು ಅವರುಗಳೆಲ್ಲರೂ ಆ ಮಹಿಳೆಯ ಮೇಲೆ ಹೊರಿಸಿಬಿಟ್ಟರು. ಆ ಮಹಿಳೆ ಕುಟುಂಬದವರಿಂದ ಮೋಸ ಹೋಗಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಳೇ ಹೊರತು ಬೆಳೆನಷ್ಟದಿಂದ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಏಕೆಂದರೆ ತಂದೆ ಹೇಗೂ ಇಲ್ಲ, ಇರುವ ಇಬ್ಬರು ಮಕ್ಕಳನ್ನು ಬಿಟ್ಟು ತಾಯಿ ಆತ್ಮಹತ್ಯೆ ಮಾಡಿಕೊಳ್ಳಲು ಹೋಗುವುದಿಲ್ಲವೆಂದು ನಾವು ನಿರ್ಣಯ ಮಾಡುತ್ತೇವೆ. ರಾಷ್ಟ್ರಪಿತ ಮಹಾತ್ಮಗಾಂಧಿಯವರ ಕನಸನ್ನು ನನಸು ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರು ಸ್ವಚ್ಛ ಗ್ರಾಮ ಎಂಬ ಕಾರ್ಯಕ್ರಮವನ್ನು ನಮ್ಮ ತಾಲ್ಲೂಕಿನಲ್ಲಿ ಉದ್ಘಾಟನೆ ಮಾಡಿದರು. ಅದರ ಧ್ಯೇಯ ರಸ್ತೆ ಮಾಡುವುದು, ರೈತರು ಬೆಳೆ ಬೆಳೆಯಲು ಸಹಾಯ ಮಾಡುವುದು, ಮಕ್ಕಳು ಶಾಲೆಗೆ ಹೋಗಲು ಸಹಾಯವಾಗುತ್ತದೆ. ರೈತರ ಆರೋಗ್ಯದ ರಕ್ಷಣೆಯ ಸಲುವಾಗಿ ಚರಂಡಿಗಳ ನಿರ್ಮಾಣ, ಗೊಬ್ಬರ ಗುಂಡಿಗಳ ನಿರ್ಮಾಣ ಮಾಡುವುದು, ರೈತರ ಧರ್ಮಪತ್ನಿಯರ ಕಣ್ಣುಗಳು ಮಂಕಾಗದಂತೆ ಹೊಗೆ ರಹಿತ ಒಲೆಗಳನ್ನು ನಿರ್ಮಿಸಿದ್ದಾರೆ. ಇಂಥ ಸ್ವಚ್ಛ ಗ್ರಾಮಗಳು ಅನೇಕ ಕಡೆ ಕಾರ್ಯಪ್ರಗತಿಯಲ್ಲಿದೆ. ಇದಕ್ಕಾಗಿ ನಾವು ಸಂತೋಷಪಡುತ್ತೇವೆ. ನಮ್ಮ ಸರ್ಕಾರದಿಂದ ಇದುವರೆಗೆ ಬಹಳ ಕೆಲಸಗಳು ಆಗಿದೆ. ಇಂಥ ಸಮಯದಲ್ಲಿ ನಾವುಗಳು ಶಾಸಕರಾಗಿರುವುದು ಅದೃಷ್ಟಕರವಾದುದು. ನಮ್ಮ ಮಾನ್ಯ ಮುಖ್ಯಮಂತ್ರಿಗಳು, ಸಚಿವರುಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಜನರಿಂದ ಒಳ್ಳೆಯ ಹೆಸರನ್ನು ಮಾಡುತ್ತಿರುವ ಬಗ್ಗೆ ಹೆಮ್ಮೆಪಡುತ್ತೇನೆ. ಇಷ್ಟು ಮಾತನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಬಿ.ಸುರೇಶ್‌ಬಾಬು(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಸಲ ಮುಂಗಾರು ಮಳೆ ಸರಿಯಾದ ಕಾಲಕ್ಕೆ ಬಾರದೆ ರೈತರುಗಳು ಮುಂಗಾರಿನಲ್ಲಿ ಬೆಳೆಯುವಂಥ ಒಂದು ಬೆಳೆಯನ್ನೂ ಬೆಳೆಯಲು ಆಗದೆ ಸಾಕಷ್ಟು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಪ್ರತಿ ವರ್ಷವು ಪ್ರಕೃತಿ ವಿಕೋಪದಿಂದ ಸಮಸ್ಯೆ ಬರುವುದು ಸಹಜ. ಆದ್ದರಿಂದ ಸರ್ಕಾರ ಮುಂದಾಲೋಚನೆಯಲ್ಲಿ ರೈತರಿಗೆ ಬರುವಂಥ ಕಷ್ಟಗಳನ್ನು ಯಾವ ರೀತಿಯಲ್ಲಿ ಪರಿಹಾರ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಹಲವಾರು ತಾಲ್ಲೂಕುಗಳಲ್ಲಿ ಬೆಳೆಯಾಗದೆ ರೈತರು ತೆಗೆದುಕೊಂಡಿರುವ ಸಾಲವನ್ನೂ ಮರುಪಾವತಿ ಮಾಡಲಾರದಂಥ ಸಂದರ್ಭದಲ್ಲಿ ಕೋಲಾರದಲ್ಲಿ ಹಲವಾರು ಕಡೆ ಆತ್ಮಹತ್ಯೆ ಮಾಡಿಕೊಂಡಿರುವುದು ಇದೆ. ಅವರುಗಳು ಆತ್ಮಹತ್ಯೆ ಮಾಡಿಕೊಳ್ಳುವುದು ಸೂಕ್ತವಲ್ಲವೆಂದು ನಾನು ಭಾವಿಸುತ್ತಾ, ಹಲವಾರು ಜನ ಕುಂಟರು, ಕುರುಡರು ಭಿಕ್ಷೆ ಬೇಡಿಕೊಂಡು ಜೀವನ ಮಾಡುತ್ತಿರಬೇಕಾದರೆ ರೈತರು ದೃತಿಗೆಡದೆ ಯಾವುದಾದರೂ ರೀತಿಯಲ್ಲಿ ಬೆಳೆ ಬೆಳೆಯಲು ಅನುವಾಗಬೇಕು. ರೈತರು ಸಾಕಷ್ಟು ಪ್ರಮಾಣದಲ್ಲಿ ರಾಗಿ, ಜೋಳ

ಮುಂತಾದವುಗಳನ್ನು ಬೆಳೆಯುತ್ತಾರೆ. ಆದರೆ ಅಂಥ ಸಂದರ್ಭದಲ್ಲಿ ಬೆಂಬಲವಾದ ಬೆಲೆ ಸಿಗುವುದಿಲ್ಲ. ಆದ್ದರಿಂದ ಸರ್ಕಾರ ಯಾವ ಬೆಳೆಯನ್ನು ರೈತರು ಬೆಳೆದರೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಮೊದಲೇ ಸಲಹೆ ನೀಡಬೇಕು. ಆ ರೀತಿ ಮಾಡಿದ್ದೇ ಆದರೆ ರೈತರು ಆರ್ಥಿಕವಾಗಿ ಗುಣಮಟ್ಟವನ್ನು ಪಡೆಯಲು ಅನುಕೂಲವಾಗುತ್ತದೆ. ಇವತ್ತು ತೆಂಗಿನ ಬೆಳೆಗೆ ಕಪ್ಪುತಲೆ ಹುಳು, ನುಸಿ ರೋಗ ಸಾಕಷ್ಟು ಬಾಧೆ ನೀಡುತ್ತಿದೆ. ನಮ್ಮ ಭಾಗದಲ್ಲಿ ತೆಂಗನ್ನೇ ಅವಲಂಬಿಸಿರುವ ರೈತರು ಸಂಕಷ್ಟದಲ್ಲಿದ್ದಾರೆ. ತೆಂಗಿನ ಕಾಯಿಗಳೇ ಉದುರಿಹೋಗುತ್ತಿದೆ. ಇದಕ್ಕೆ ಸಹ ಪರಿಹಾರವನ್ನು ಕಂಡುಹಿಡಿಯಬೇಕು. ಇವತ್ತು ಚಿಕ್ಕನಾಯಕನಹಳ್ಳಿಯಲ್ಲಿದ್ದ ಎ.ಪಿ.ಎಂ.ಸಿ.ಯನ್ನು ಹುಳಿಯಾರ್‌ಗೆ ವರ್ಗಾವಣೆ ಮಾಡಿದ್ದಾರೆ. ಚಿಕ್ಕನಾಯಕನಹಳ್ಳಿಯಲ್ಲೂ ಮತ್ತು ಹುಳಿಯಾರ್‌ನಲ್ಲೂ ಎ.ಪಿ.ಎಂ.ಸಿ. ನಡೆಯಬೇಕು. ತಾಲ್ಲೂಕು ಕೇಂದ್ರವಾಗಿರುವ ಚಿಕ್ಕನಾಯಕನಹಳ್ಳಿಯ ಎ.ಪಿ.ಎಂ.ಸಿ.ಯನ್ನು ಯಾವ ಕಾರಣಕ್ಕಾಗಿ ವರ್ಗಾವಣೆ ಮಾಡಿದ್ದಾರೆ ಎಂಬ ಬಗ್ಗೆ ಕೃಷಿ ಸಚಿವರು ದಯಮಾಡಿ ತಿಳಿಸಬೇಕು. ನಿನ್ನೆ ಇದಕ್ಕೆ ವಿರೋಧ ವ್ಯಕ್ತಪಡಿಸಿ ರೈತರುಗಳೆಲ್ಲಾ ಬಂದ್ ಅನ್ನು ಆಚರಿಸಿದರು. ಇದರ ಬಗ್ಗೆ ವಿಧಾನಸಭೆಯಲ್ಲಿ ಈ ವಿಷಯವನ್ನು ಮಂಡಿಸಿ ಸರ್ಕಾರ ಸೂಕ್ತವಾದ ವ್ಯವಸ್ಥೆ ಮಾಡುವಲ್ಲಿ ಏರ್ಪಾಡು ಮಾಡುತ್ತೇವೆ ದಯಮಾಡಿ ಬಂದ್ ಅನ್ನು ನಿಲ್ಲಿಸಿ ಎಂದು ಹೇಳಿ ಅದು ಮುಂದಕ್ಕೆ ಹಾಕುವ ರೀತಿಯಲ್ಲಿ ಮಾಡಿ ಬಂದಿದ್ದೇವೆ. ನಮ್ಮ ಕ್ಷೇತ್ರದವರೇ ಆದ ಕೃಷಿ ಸಚಿವರು, ಜಿಲ್ಲಾ ಮಂತ್ರಿಗಳು ಇದ್ದಾರೆ. ಆದ್ದರಿಂದ ಚಿಕ್ಕನಾಯಕನಹಳ್ಳಿಯಲ್ಲೇ ಎ.ಪಿ.ಎಂ.ಸಿ.ಯನ್ನು ಉಳಿಸಬೇಕು. ಅಲ್ಲಿರುವ ರೈತರು ಪ್ರತಿ ಸೋಮವಾರ ಚಿಕ್ಕನಾಯಕನಹಳ್ಳಿ ಸಂತೆಗೆ ಬರುತ್ತಾರೆ, ಎಲ್ಲಾ ಕಛೇರಿಗಳಿಗೂ ಬರುತ್ತಾರೆ. ಆಗ ಅವರು ಬೆಳೆದಂಥ ಬೆಳೆಗಳನ್ನು ಮಾರಲು ಅನುಕೂಲವಾಗುತ್ತದೆ. ಆದ್ದರಿಂದ ನಮ್ಮ ತಾಲ್ಲೂಕಿನ ಜನತೆಯ ಪರವಾಗಿ ಅದನ್ನು ಅಲ್ಲೇ ಉಳಿಸಿಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವೇನು ಆದೇಶವನ್ನು ಮಾಡಿದ್ದೀರಿ ಅದನ್ನು ವಾಪಸ್ ಪಡೆದು ಎ.ಪಿ.ಎಂ.ಸಿ.ಯನ್ನು ಚಿಕ್ಕನಾಯಕನಹಳ್ಳಿಯಲ್ಲೇ ಉಳಿಸಿಕೊಡಬೇಕು. ಬರಗಾಲದ ಬಗ್ಗೆ ಶಾಸಕಮಿತ್ರರೆಲ್ಲರು ಮಾತನಾಡಿದ್ದೇವೆ. ಇದಕ್ಕೆ ಪರಿಹಾರವಾಗಿ ಸರ್ವಪಕ್ಷದವರು ಸೇರಿಕೊಂಡು ತೀರ್ಮಾನ ತೆಗೆದುಕೊಳ್ಳಬೇಕು. ಪ್ರತಿ ವರ್ಷ ಬರುವ ಈ ಸಮಸ್ಯೆ ನಿವಾರಣೆಯ ಬಗ್ಗೆ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಷಹಜಾನ್ ಇಸ್ಮಾಯಿಲ್ ದೊಂಗರಗಾಂ(ಅಥಣಿ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ತಲೆದೋರಿರುವ ಬರಗಾಲದ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ವಂದನೆಯನ್ನು ಸಲ್ಲಿಸುತ್ತೇನೆ. ಹಿರಿಯ

ಸದಸ್ಯರುಗಳು ಭೀಕರ ಬರಗಾಲದ ಛಾಯೆಯ ಬಗ್ಗೆ ಮಾತನಾಡಿದ್ದಾರೆ. ರಾಜ್ಯದಲ್ಲಿ ವಿಶೇಷವಾಗಿ 120 ತಾಲ್ಲೂಕಿನಲ್ಲಿ ಮುಂಗಾರು ಮಳೆಯಾಗದೆ ಬಿತ್ತನೆಯನ್ನು ಮಾಡಲು ಸಾಧ್ಯವಾಗದೆ ರೈತರು ಕಂಗಾಲಾಗಿದ್ದಾರೆ. ಉದ್ಯೋಗಾವಕಾಶವಿಲ್ಲದೆ ಕುಡಿಯುವ ನೀರಿಲ್ಲದಿರುವ ಪರಿಸ್ಥಿತಿಯಲ್ಲಿ ಹೇಗೆ ಪರಿಹಾರ ಕಂಡುಕೊಳ್ಳಬೇಕು ಎಂಬ ಬಗ್ಗೆ ವಿಚಾರಗಳನ್ನು ಹೇಳಿದ್ದಾರೆ. ಅಥಣಿ ತಾಲ್ಲೂಕು ಹೆಸರಿಗೆ ಬೆಳಗಾಂ ಜಿಲ್ಲೆಗೆ ಸೇರಿದ್ದರು ಭೌಗೋಳಿಕವಾಗಿ ವಾತಾವರಣ, ಭೂಮಿಯ ಹವಾಗುಣವನ್ನು ನೋಡಿದರೆ ಬಿಜಾಪುರ ಜಿಲ್ಲೆಗೆ ಸಾಮ್ಯವಾಗಿರುವಂಥದ್ದು. ಈ ತಾಲ್ಲೂಕಿನಲ್ಲಿ 70 ಹಳ್ಳಿಗಳಲ್ಲಿ ಭೀಕರ ಬರಗಾಲದ ಛಾಯೆ ಕಂಡುಬಂದಿದೆ. 40 ಹಳ್ಳಿಗಳಲ್ಲಿ ಕುಡಿಯುವ ನೀರಿಲ್ಲದೆ ಜನರು ಪರಿತಪಿಸುತ್ತಿದ್ದಾರೆ. ಈ ದಿಸೆಯಲ್ಲಿ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಉಪವಿಭಾಗಾಧಿಕಾರಿಯವರು ಜೂನ್ 26ರಂದು ಅಧಿಕಾರಿಗಳ ವಿಶೇಷವಾದ ಸಭೆಯನ್ನು ಕರೆದಿದ್ದರು. ಬೆಳಗಾಂ ಜಿಲ್ಲಾಧಿಕಾರಿಯವರು ಅಥಣಿ ತಾಲ್ಲೂಕಿನ ಹತ್ತು ಹನ್ನೆರಡು ಹಳ್ಳಿಗಳಿಗೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ನೀಡಿರುತ್ತಾರೆ. ದಿನಾಂಕ 10.7.2001ರಂದು ಶ್ರೀಧರ್ ಎನ್ನತಕ್ಕ ಉನ್ನತಾಧಿಕಾರಿಯ ನೇತೃತ್ವದಲ್ಲಿ ತಂಡವು ಬಂದು ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. 12ರಂದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಭೆ ನಡೆದು ಜಿಲ್ಲೆಯ ಸಮಸ್ಯೆಯ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಬರಗಾಲದ ಛಾಯೆ ಈಗ ಪ್ರಾರಂಭವಾಗಿದೆ. ಆದಷ್ಟು ಬೇಗ ಸರ್ಕಾರದಿಂದ ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತಿದೆ. ನನ್ನ ಮತಕ್ಷೇತ್ರದಲ್ಲಿ ಈಗಾಗಲೇ 12 ಗ್ರಾಮಗಳಲ್ಲಿ ಟ್ಯಾಂಕರ್ ಮುಖಾಂತರ ನೀರನ್ನು ಒದಗಿಸುವಂತಹ ಪ್ರಕ್ರಿಯೆ ಪ್ರಾರಂಭವಾಗಿದೆ. 2 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆಯಾಗಿದೆ ಎಂದು ನಾನು ಈ ಸದನದಲ್ಲಿ ತಮ್ಮ ಮೂಲಕ ವ್ಯಕ್ತಪಡಿಸಬಯಸುತ್ತೇನೆ. ಬರ ಪರಿಹಾರಕ್ಕಾಗಿ ಯಾವ್ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ಈಗಾಗಲೇ ಮಾನ್ಯ ಹಿರಿಯ ಸದಸ್ಯರುಗಳು ಮಾತನಾಡಿ ಸಲಹೆಗಳನ್ನು ಕೊಟ್ಟಿದ್ದಾರೆ. ನಾನೂ ಸಹ ನನ್ನ ಒಂದೆರಡು ಸಲಹೆಗಳನ್ನು ಸರ್ಕಾರದ ಮುಂದಿಡಬಯಸುತ್ತೇನೆ. ಪ್ರಥಮವಾಗಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ನೀರಿನ ಲಭ್ಯತೆಯನ್ನು ನಾವು ನೋಡಬೇಕಾಗುತ್ತದೆ. ನೀರು ಎಲ್ಲಿ ಸಮೀಪದಲ್ಲಿ ಲಭ್ಯ ಇರುತ್ತದೆಯೋ ಅದನ್ನು ಆದಷ್ಟು ಬೇಗನೆ ಟ್ಯಾಂಕರ್‌ಗಳ ಮುಖಾಂತರವಾಗಲೀ ಅಥವಾ ಪೈಪ್‌ಲೈನ್‌ಗಳ ಮುಖಾಂತರವಾಗಲೀ ನೀರನ್ನು ಒದಗಿಸಲು ತ್ವರಿತವಾಗಿ ಸರ್ಕಾರ ಕ್ರಮಗಳನ್ನು ಜರುಗಿಸಬೇಕಾಗಿದೆ. ಎಲ್ಲೆಲ್ಲಿ ನೀರು ಸಿಗುತ್ತದೆ ಎಂಬುದನ್ನು ಪತ್ತೆ ಹಚ್ಚಿ ಕೊಳವೆ ಬಾವಿಗಳನ್ನು ಅಥವಾ ತೆರೆದ ಬಾವಿಗಳನ್ನು ತ್ವರಿತಗತಿಯಲ್ಲಿ ತೋಡಿಸಬೇಕಾಗಿದೆ. ಕೆರೆಯ ಹಿಂದೆ ಕೆಲವೆಡೆ ನೀರಿನ ಸಂಗ್ರಹ

ಇರುತ್ತದೆ. ಅಂತಹ ಸಂದರ್ಭದಲ್ಲಿ ಕೆರೆಯ ಹಿಂದೆ ಓಪನ್ ವೆಲ್ಸ್ ಮಾಡಿ ಪೈಪ್‌ಲೈನ್ ಮುಖಾಂತರ ನೀರನ್ನು ಒದಗಿಸುವ ಬಗ್ಗೆ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ದನಕರುಗಳ ಜೊತೆಗೆ ನಮ್ಮ ಭಾಗದಲ್ಲಿ ಕುರಿಗಳ ಸಂಖ್ಯೆ ಜಾಸ್ತಿ ಇದೆ. ಮಳೆಯಾಗದೇ ಹುಲ್ಲು ದೊರೆಯದೇ ಕುರಿಗಳನ್ನು ಎಲ್ಲಿ ಮೇಯಿಸಬೇಕು ಎಂಬ ಸಮಸ್ಯೆ ಇವತ್ತು ಕುರಿ ಸಾಕುವವರಿಗೆ ಉಂಟಾಗಿದೆ. ಅವರು ಮೇವು ಹುಡುಕಿಕೊಂಡು ನೆರೆಯ ರಾಜ್ಯವಾದ ಮಹಾರಾಷ್ಟ್ರಕ್ಕೆ ಹೋಗುವಂತಹ ಪರಿಸ್ಥಿತಿ ಉಂಟಾಗಿದೆ. ಇದನ್ನು ಹೋಗಲಾಡಿಸಲು ಸರ್ಕಾರ ಆದಷ್ಟು ಬೇಗನೆ ಗೋಶಾಲೆಗಳನ್ನು ತೆರೆದು ಅಥವಾ ಇನ್ಯಾವುದೇ ವ್ಯವಸ್ಥೆ ಮೂಲಕ ಮೇವನ್ನು ಒದಗಿಸುವ ಕೆಲಸವನ್ನು ಮಾಡಬೇಕಾಗಿದೆ. ಕೃಷಿ ಕಾರ್ಮಿಕರು ನೆರೆ ರಾಜ್ಯಕ್ಕೆ ವಲಸೆ ಹೋಗದಂತೆ ಮಾಡಲು ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಹೇಳಿದಂತೆ ಕೇಂದ್ರ ಸರ್ಕಾರದಿಂದ ಉದ್ಯೋಗ ಭರವಸೆ ಯೋಜನೆ ಅಡಿಯಲ್ಲಿ ಹೆಚ್ಚಿನ ಅನುದಾನ ಪಡೆಯುವಂತಹ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಬೇಕು. ವಿರೋಧ ಪಕ್ಷವಾದ ಬಿ.ಜೆ.ಪಿ. ಸರ್ಕಾರ ಕೇಂದ್ರದಲ್ಲಿದೆ. ಅವರೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ಹೆಚ್ಚಿನ ಅನುದಾನವನ್ನು ಕರ್ನಾಟಕಕ್ಕೆ ಕೊಡಿಸಬೇಕು ಎಂದು ಈ ಸದನದಲ್ಲಿ ತಮ್ಮ ಮೂಲಕ ಅವರಿಗೆ ನಾನು ವಿನಂತಿಸುತ್ತೇನೆ. ಮಾನ ಸದಸ್ಯರಾದ ಹನುಮೇಗೌಡರು ಮತ್ತು ಇತರರು ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿದ್ದಾರೆ. ಕೆರೆಗಳಲ್ಲಿ ಹೂಳೆತ್ತುವುದರಿಂದ ಕೃಷಿ ಕಾರ್ಮಿಕರಿಗೆ ಉದ್ಯೋಗ ಸಿಗುವುದಲ್ಲದೆ ಕೆರೆಗಳಲ್ಲಿ ನೀರಿನ ಸಂಗ್ರಹಣೆ ಹೆಚ್ಚು ಮಾಡಲಿಕ್ಕೆ ಅವಕಾಶವಾಗುತ್ತದೆ. ಇದರ ಜೊತೆಗೆ ಅಂತರ್ಜಲವನ್ನೂ ಕೂಡ ಹೆಚ್ಚಿಸಬಹುದಾಗಿದೆ. ಚೆಕ್ ಡ್ಯಾಂ, ನಾಲಾ ಬಂಡಿಂಗ್, ಪಾಂಡ್‌ಗಳನ್ನು ನಿರ್ಮಿಸುವುದರಿಂದ ಸಹ ಜನರಿಗೆ ಉದ್ಯೋಗ ಸಿಗುತ್ತದೆ ಹಾಗೂ ಅಂತರ್ಜಲ ಹೆಚ್ಚಾಗುತ್ತದೆ. ಇಂತಹ ಎಲ್ಲಾ ಕಾರ್ಯಕ್ರಮಗಳನ್ನು ತೀವ್ರಗತಿಯಿಂದ ಸರ್ಕಾರ ಜಾರಿಗೊಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ 'ನಮ್ಮ ಹೊಲ, ನಮ್ಮ ರಸ್ತೆ' ಎಂಬ ಒಂದು ಹೊಸ ಕಾರ್ಯಕ್ರಮವನ್ನು ನಮ್ಮ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಇಂಟ್ರಡ್ಯೂಸ್ ಮಾಡಿದ್ದಾರೆ. ಈ ಕಾರ್ಯಕ್ರಮದನ್ವಯ ಸರ್ಕಾರ ಶೇಕಡ 60ರಷ್ಟು ಹಾಗೂ ರೈತರು ಶೇಕಡ 40 ರಷ್ಟು ಹಣ ಭರಿಸುತ್ತಾರೆ. ರೈತರು ಭರಿಸಬೇಕಾಗಿರುವ ಹಣವನ್ನೂ ಸಹಾ ಸರ್ಕಾರದಿಂದಲೇ ಕೊಡಬೇಕು. ಆಹಾರ ಧಾನ್ಯಗಳನ್ನು ಕೃಷಿ ಕಾರ್ಮಿಕರಿಗೆ ಪೂರೈಕೆ ಮಾಡಬೇಕು. ಈಗಾಗಲೇ ಕೇಂದ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆ ಇದೆ. ಕೇಂದ್ರದಿಂದ ನಾವು ಅನುದಾನವನ್ನು ಪಡೆಯುವಾಗ, ಅನುದಾನದ ರೂಪದಲ್ಲಿ ನಾವು ಆಹಾರ ಧಾನ್ಯಗಳನ್ನು ಪಡೆದು, ಕೃಷಿ ಕಾರ್ಮಿಕರಿಗೆ ಹಣದ ಬದಲಾಗಿ ಆಹಾರ ಧಾನ್ಯಗಳನ್ನು ವಿತರಿಸಿ ಅವರ ಜೀವನೋಪಾಯ ಚೆನ್ನಾಗಿ ಆಗುವಂತೆ

ನೋಡಿಕೊಳ್ಳಬೇಕು. 'ನಮ್ಮ ಹೊಲ, ನಮ್ಮ ರಸ್ತೆ' ಕಾರ್ಯಕ್ರಮವನ್ನು ಈ ದಿಸೆಯಲ್ಲಿ ಕೈಗೆತ್ತಿಕೊಂಡು ರಸ್ತೆಗಳ ನಿರ್ಮಾಣ ಮಾಡಿದರೆ ಈ ಸಂದರ್ಭದಲ್ಲಿ ಬಹಳಷ್ಟು ಸಹಕಾರಿಯಾಗುತ್ತದೆ ಎಂದು ನಾನು ನನ್ನ ಸಲಹೆಯನ್ನು ಈ ಸದನದ ಮುಂದಿಡುತ್ತಿದ್ದೇನೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಕೇವಲ ರಾಜ್ಯ ಸರ್ಕಾರದ ಅನುದಾನದಿಂದಲೇ ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ. ಎಲ್ಲರೂ ಒಟ್ಟುಗೂಡಿ ಪ್ರಯತ್ನ ಮಾಡಿ ಇದಕ್ಕಾಗಿ ಹೆಚ್ಚಿನ ಅನುದಾನವನ್ನು ಕೇಂದ್ರದಿಂದ ಪಡೆದು ಈ ಒಂದು ಗಂಭೀರ ಪರಿಸ್ಥಿತಿಯನ್ನು ಎದುರಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಹೇಳಿ, ತಾವು ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜ್ಯದ 17ಕ್ಕಿಂತ ಹೆಚ್ಚಿನ ಜಿಲ್ಲೆಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಉಂಟಾಗಿರುವ ಬಗ್ಗೆ ಸಾಕಷ್ಟು ಸದಸ್ಯರುಗಳು ವಿವರವಾದ ಚರ್ಚೆಯನ್ನು ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಗಡಿ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯಲ್ಲಿ ಮುಂಗಾರು ಮಳೆ ವಿಫಲವಾಗಿರುವುದರಿಂದ ಸಾಕಷ್ಟು ಹಾನಿ ಉಂಟಾಗಿ ರೈತರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ತಲೆತೋರಿದೆ ಮತ್ತು ಕೃಷಿ ಕಾರ್ಮಿಕರಿಗೆ ಉದ್ಯೋಗ ದೊರೆಯದೇ ತೊಂದರೆಯಾಗಿದೆ. ಸಾಮಾನ್ಯವಾಗಿ ಜೂನ್ ತಿಂಗಳ ಅವಧಿಯಲ್ಲಿ ನಮ್ಮ ಜಿಲ್ಲೆಯಲ್ಲಿ 1065 ಮಿ.ಮೀ. ಮಳೆಯಾಗಬೇಕಾಗಿತ್ತು. ಇದೇ ಸಂದರ್ಭದಲ್ಲಿ ಕಳೆದ ವರ್ಷ 900 ಮಿ.ಮೀ. ಮಳೆಯಾಗಿದೆ. ಆದರೆ ಈ ವರ್ಷ 500 ಮಿ.ಮೀ.ಗಿಂತ ಕಡಿಮೆ ಮಳೆ ನಮ್ಮ ಜಿಲ್ಲೆಯಲ್ಲಿ ಆಗಿದೆ. ಇದನ್ನು ನೋಡಿದಾಗ ನಮ್ಮ ಜಿಲ್ಲೆಯಲ್ಲಿ ಹಿಂದೆಂದಿಗಿಂತ ಅತಿ ಕಡಿಮೆ ಮಳೆಯಾಗಿರುವ ಸನ್ನಿವೇಶವನ್ನು ನಾವು ಇವತ್ತು ಕಾಣುತ್ತಿದ್ದೇವೆ. ಈಗ ಆಗಿರುವ ಮಳೆ ಕೂಡ ಏಪ್ರಿಲ್ 12-13ನೇ ತಾರೀಖಿನಲ್ಲಿ ಒಂದೇ ಮಳೆಯಲ್ಲಿ ಆದಂತಹ ಮಳೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಸುಮಾರು 1 ಲಕ್ಷ 40 ಸಾವಿರ ಹೆಕ್ಟೇರ್‌ಗಳಷ್ಟು ವ್ಯವಸಾಯ ಯೋಗ್ಯ ಭೂಮಿ ಇದೆ. ಈವರೆಗೆ ಇದರಲ್ಲಿ ಕೇವಲ 45 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಮಾತ್ರ ಬಿತ್ತನೆಯಾಗಿದೆ. ವಿಶೇಷವಾಗಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಏಪ್ರಿಲ್ ತಿಂಗಳಿನಲ್ಲೇ ಬಿತ್ತನೆ ಕಾರ್ಯನಡೆಯುತ್ತದೆ. ಚಾಮರಾಜನಗರದ ಭಾಗದಲ್ಲೂ ಕೂಡ ಹೆಚ್ಚು ಕಡಿಮೆ ಅದೇ ಸಂದರ್ಭದಲ್ಲಿ ಬಿತ್ತನೆಯಾಗುತ್ತದೆ. 45 ಸಾವಿರ ಹೆಕ್ಟೇರ್ ಬಿತ್ತನೆಯಾದಂತಹ ಜಾಗದಲ್ಲಿ ಏಪ್ರಿಲ್ ನಂತರ ಮಳೆಯಾಗದೇ ಸುಮಾರು 35 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿದ್ದ ಬೆಳೆ ಸಂಪೂರ್ಣವಾಗಿ ನಾಶವಾಗಿ ರೈತ ಕಂಗಾಲಾಗಿದ್ದಾನೆ. ಸುಮಾರು 34 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಮುಖಾಂತರ ವ್ಯವಸಾಯ

ಮಾಡತಕ್ಕಂಥ ಸೌಲಭ್ಯ ನಮ್ಮ ಜಿಲ್ಲೆಯಲ್ಲಿದೆ. ಅದರಲ್ಲಿ ಬಹುತೇಕ ಅಂದರೆ ಶೇ.80ರಷ್ಟು ಐ.ಪಿ. ಸೆಟ್ಟುನಿಂದ ಕೊಳವೆ ಬಾವಿಗಳ ಮುಖಾಂತರ ವಿದ್ಯುತ್ತಿನ ಸೌಲಭ್ಯದೊಂದಿಗೆ ವ್ಯವಸಾಯ ಮಾಡತಕ್ಕಂಥ ಪ್ರದೇಶ ಇದೆ. ರಾತ್ರಿ ವೇಳೆ ಪೂರ್ಣವಿದ್ಯುತ್ ಅನ್ನು ಪಂಪ್‌ಸೆಟ್ಟುಗಳಿಗೆ ನಾವು ನೀಡುತ್ತೇವೆ ಎಂದು ಸರ್ಕಾರ ಘೋಷಣೆ ಮಾಡಿದ್ದರೂ ಕೂಡ ಇದುವರೆಗೂ ಕೂಡ ಆ ಒಂದು ಪ್ರಯೋಗ ಯಶಸ್ವಿಯಾಗದೇ, ರೈತರು ವೋಲ್ಟೇಜ್ ಸಮಸ್ಯೆಯಿಂದಾಗಿ ಪ್ರತಿ ದಿನ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗುತ್ತಿರುವುದರಿಂದ ತೊಂದರೆಗೀಡಾಗಿದ್ದಾರೆ. ಕೊಳವೆ ಬಾವಿಗಳ ಮೂಲಕ ನೀರಾವರಿ ಮಾಡತಕ್ಕಂಥ ರೈತನೂ ಕೂಡ ಇವತ್ತು ಬಹಳ ಸಂಕಷ್ಟಕ್ಕೆ ಈಡಾಗುವಂತಹ ಪರಿಸ್ಥಿತಿ ಇದೆ. ಇನ್ನು ನುಸಿ ರೋಗ ನಮ್ಮ ಭಾಗದಲ್ಲಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನ ಫಸಲಿಗೆ ಬಂದಿರುವುದರಿಂದ ಆ ರೈತರಿಗೂ ಕೂಡ ಜೀವನಾಂಶಕ್ಕೆ ಬಹಳ ತೊಂದರೆಯಾಗಿರುವ ಪರಿಸ್ಥಿತಿಯನ್ನು ನಾವು ನಮ್ಮ ಜಿಲ್ಲೆಯಲ್ಲಿ ಕಾಣುತ್ತಿದ್ದೇವೆ. ಇದಲ್ಲದೇ ಸುಮಾರು 5,400 ಕೊಳವೆ ಬಾವಿಗಳು ನಮ್ಮ ಜಿಲ್ಲೆಯಲ್ಲಿದ್ದು ಅದರಲ್ಲಿ ಸುಮಾರು 2,000ರಷ್ಟು ಕೊಳವೆ ಬಾವಿಗಳು 300-350 ಅಡಿಯವರೆಗೂ ಬೋರ್ ಹಾಕಿಸಿದರೂ ಕೂಡ ನೀರು ಬಾರದಿರುವಂತಹ ಪರಿಸ್ಥಿತಿ ಉಂಟಾಗಿ ಎಲ್ಲಾ ಡ್ರೈ ಆಗಿವೆ. ಅದರಿಂದ ಕುಡಿಯುವ ನೀರಿಗೂ ಕೂಡ ಬಹಳ ತೊಂದರೆಯಾಗಿದೆ. ಸುಮಾರು 1,000 ಮಿನಿ ವಾಟರ್ ಸಪ್ಲೈ ಮತ್ತು ಮೇಜರ್ ವಾಟರ್ ಸಪ್ಲೈ ಯೋಜನೆಗಳಿದ್ದು ಅವುಗಳಲ್ಲಿ ಸುಮಾರು 200ಕ್ಕೂ ಹೆಚ್ಚು ಬೋರ್‌ವೆಲ್‌ಗಳಲ್ಲಿ ನೀರು ಇಲ್ಲದಿರುವುದರಿಂದ ಅವು ಕೆಲಸ ಮಾಡುವುದಕ್ಕೆ ಸಾಧ್ಯವಾಗದಿರುವಂತಹ ಪರಿಸ್ಥಿತಿ ಇದೆ. ದನಕರುಗಳಿಗೂ ಕೂಡ ಯಾವುದೇ ಒಂದು ಮೇವಿನ ವ್ಯವಸ್ಥೆ ಇಲ್ಲದೇ, ಈಗ ಬಿತ್ತನೆ ಮಾಡಿರತಕ್ಕಂಥ ಫಸಲು ಕೂಡ ಮೊಳಕೆಯಲ್ಲೇ ಹೋಗಿರುವುದರಿಂದ ಅದು ದನಕರುಗಳಿಗೆ ಮೇವು ಆಗುವುದಕ್ಕೂ ಕೂಡ ಸಾಧ್ಯವಾಗದೇ ರೈತರ ದನಕರುಗಳಿಗೆ ನೀರು ಮತ್ತು ಮೇವು ಒದಗಿಸಲಿಕ್ಕೆ ಕೂಡ ಬಹಳ ಕಷ್ಟದ ಪರಿಸ್ಥಿತಿ ಇವತ್ತು ನಮ್ಮ ಜಿಲ್ಲೆಯಲ್ಲಿ ಬಂದಿದೆ. ಅದರಲ್ಲೂ ವಿಶೇಷವಾಗಿ ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕುಗಳು ಬರದ ಛಾಯೆಯಲ್ಲಿ ಸಂಪೂರ್ಣವಾಗಿ ಇರುವಂತಹ ಪರಿಸ್ಥಿತಿಯನ್ನು ಈಗಾಗಲೇ ನಾವು ಕಾಣುತ್ತಿದ್ದೇವೆ. ಮಾನ್ಯ ಮಂತ್ರಿಗಳು ಕೆಲವು ದಿವಸದ ಹಿಂದೆ 50 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿದ್ದರು. ಕೊಳವೆ ಬಾವಿಗಳನ್ನು ಕೊರೆಸುವ ವಿಚಾರವಾಗಿ ಸಭೆ ಸೇರಿದ್ದಾಗಲೂ ಸಹಾ ನಾವು ನಮ್ಮ ಜಿಲ್ಲೆಯನ್ನು ಪ್ರಥಮವಾಗಿ ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು ಎಂಬ ನಿರ್ಣಯವನ್ನು ಕೈಗೊಂಡಿದ್ದರೂ ಕೂಡ ಇದುವರೆಗೆ ಈ ಬಗ್ಗೆ ಸರ್ಕಾರ ಮುಂದೆ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಏನನ್ನೂ ತಿಳಿಸದೇ ಇರುವುದರಿಂದ

ರೈತರು ಬಹಳ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಸುಮಾರು 10 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಸಹಕಾರ ಸಂಘಗಳಿಂದ ನಮ್ಮ ಜಿಲ್ಲೆಯಲ್ಲಿ ಸಾಲ ವಿತರಣೆಯಾಗಿದೆ. ಈ ಸಾಲವನ್ನು ರೈತರು ಕಟ್ಟಿದರೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಸರ್ಕಾರ ಘೋಷಣೆ ಮಾಡಿದೆ. ಆದರೆ ಈ ಬರದ ಛಾಯೆಯಲ್ಲಿ ಅವನ ಜೀವನ ನಡೆಸುವುದೇ ಕಷ್ಟವಾಗಿರುವ ಪರಿಸ್ಥಿತಿಯಲ್ಲಿ ಅಸಲು ಕಟ್ಟುವುದಾದರೂ ಸಹ ರೈತನಿಗೆ ಸಾಧ್ಯವಾಗುವುದಿಲ್ಲ. ಬಡ್ಡಿಯನ್ನು ಮನ್ನಾ ಮಾಡಬೇಕು. ಸಾಲ ವಸೂಲಾತಿಯನ್ನು ಮುಂದಕ್ಕೆ ಹಾಕಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಸಣ್ಣ ನೀರಾವರಿ ಇಲಾಖೆಯಿಂದ ಹೂಳೆತ್ತುವ ಕೆಲಸ ಮಾಡುತ್ತಿದ್ದಾರೆ. ಇದು ಹೋಬಳಿಗೆ ಒಂದು ಕೆರೆ ಎಂದು ಘೋಷಣೆ ಮಾಡಿದರೂ ಕೂಡ ಆ ಯೋಜನೆ ಅಡಿಯಲ್ಲಿ ಯಾವುದೇ ಕಾಮಗಾರಿಗಳು ನಮ್ಮಲ್ಲಿ ಪ್ರಾರಂಭವಾಗಿಲ್ಲ. ಬೇರೆ ಬೇರೆ ಯೋಜನೆಯಡಿಯಲ್ಲಿ ಅಥವಾ ರೆಗ್ಯುಲರ್ ಆಕ್ಷನ್ ಪ್ಲಾನ್‌ನಲ್ಲಿ ಬಂದಿರುವ ಕಾರ್ಯಕ್ರಮಗಳಲ್ಲಿ ಹೂಳೆತ್ತುವುದಕ್ಕೆ ಪ್ರಾರಂಭ ಮಾಡಿದ್ದೇವೆ. ನಮ್ಮ ಭಾಗದಲ್ಲಿ ಕೆಲಸವಿಲ್ಲವೆಂದು ಐದಾರು ಸಾವಿರ ಜನ ಪ್ರತಿ ದಿನ ಕೂಲಿ ಕೆಲಸಕ್ಕಾಗಿ ಕೇರಳದ ವೈನಾಡು ಮತ್ತು ಕ್ಯಾಲಿಕಟ್‌ಗಳಿಗೆ ಹೋಗಿ ಕೆಲಸ ಮಾಡಿ ದುಡಿಯತಕ್ಕಂತಹ ವ್ಯವಸ್ಥೆ ಇತ್ತು. ಅಲ್ಲಿಯೂ ಕೂಡ ತೆಂಗಿನ ವಿಫಲತೆ ಮತ್ತು ಬೇರೆ ಬೇರೆ ಕಾರಣಗಳಿಂದ ನಮ್ಮ ಕಡೆಯಿಂದ ಹೋದ ಕೂಲಿ ಕಾರ್ಮಿಕರಿಗೆ ಕೂಲಿ ನೀಡದೆ ರಬ್ಬರ್ ಪ್ಲ್ಯಾಂಟೇಷನ್‌ಗೆ ಇಟ್ಟುಕೊಂಡಿದ್ದ ನಮ್ಮ ಕಾರ್ಮಿಕರನ್ನು ವಾಪಸ್ ಕಳುಹಿಸುತ್ತಿದ್ದಾರೆ. ನಾವು ನಿಮಗೆ ಕೂಲಿ ಕೊಡುವುದಕ್ಕೆ ಸಾಧ್ಯವಿಲ್ಲ. ನೀವು ನಿಮ್ಮ ನಿಮ್ಮ ಊರುಗಳಿಗೆ ವಾಪಸ್ ಹೋಗಿ ಎಂದು ಹೇಳುತ್ತಿದ್ದಾರೆ. ಸುಮಾರು 8 ರಿಂದ 10 ಸಾವಿರ ಜನ ನಮ್ಮ ಕಡೆಯಿಂದ ಹೋಗಿದ್ದವರು ನಮ್ಮ ತಾಲ್ಲೂಕುಗಳಿಗೆ ವಾಪಸ್ ಬಂದು ಯಾವುದೇ ಕೂಲಿ ಸಿಗತಕ್ಕಂತಹ ಕೆಲಸ ಸಿಗುತ್ತಿಲ್ಲ. ನಾವು ಮೈನರ್ ಇರಿಗೇಷನ್, ಪಿಡಬ್ಲ್ಯುಡಿ ರಸ್ತೆ ವೈಡನ್ ಮಾಡುವುದು, ಟ್ರಂಚಸ್ ಮಾಡುವುದು, ಎಲ್ಲದಕ್ಕೂ ನಾವು ಪೋಕ್ ಲೈನ್ ಅನ್ನು ಬಳಸುವುದಕ್ಕೆ ಪ್ರಾರಂಭ ಮಾಡಿರುವುದರಿಂದ ಕೃಷಿ ಕಾರ್ಮಿಕರಿಗೆ ಕೆಲಸ ಕೊಡುವ ಯಾವುದೇ ವ್ಯವಸ್ಥೆ ವ್ಯವಸ್ಥಿತವಾಗಿ ಆಗುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಚಾಮರಾಜ ನಗರ ಜಿಲ್ಲೆಗೆ ಸರ್ಕಾರ ವಿಶೇಷ ಗಮನ ಕೊಟ್ಟು ಕೂಡಲೇ ಬರ ಪ್ರದೇಶ ಎಂದು ಘೋಷಣೆ ಮಾಡಿ ರೈತರಿಗೆ ಸಾಲ ಬಡ್ಡಿ ಮನ್ನಾ ಮಾಡುವುದು, ಸಾಲ ವಸೂಲಾತಿಯನ್ನು ಮುಂದೂಡತಕ್ಕಂತಹ ವ್ಯವಸ್ಥೆಯಾಗಬೇಕು. ಕೃಷಿ ಕಾರ್ಮಿಕರಿಗೆ ಕೂಡಲೇ ಕೆಲಸ ಕೊಡುವ ವ್ಯವಸ್ಥೆಯಾಗಬೇಕು. ಮತ್ತು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ 300 ಅಡಿ ಮೇಲೆ ಬೋರ್‌ವೆಲ್ ಡೀಪ್ ಮಾಡಿದರೆ ಬಿಲ್ ಕೊಡುವುದಿಲ್ಲವೆಂದು ಬೋರ್‌ವೆಲ್ ರಿಗ್‌ಗಳಿಗೆ ಇನ್‌ಸಿಸ್ಟ್ ಮಾಡಿದ್ದಾರೆ. ಅವರು 300 ಅಡಿವರೆಗೆ ಕೊರೆದು ನೀರು ಬರಲಿ ಬಾರದೆ ಇರಲಿ

ರಿಗ್‌ನ್ನು ಬೇರೆ ಕಡೆ ತೆಗೆದುಕೊಂಡು ಹೋಗುತ್ತಾರೆ. ಇನ್ನು ಆಳವಾದ ಬೋರ್ ಕೊರೆದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಒಣಗಿ ಹೋಗಿರುವ ಕೊಳವೆ ಬಾವಿಗಳನ್ನು ಡೀಪನಿಂಗ್ ಮಾಡುವುದಕ್ಕೆ ವಿಶೇಷ ಯೋಜನೆ ಮಾಡಬೇಕು. ಸರ್ಕಾರದಲ್ಲಿ ಡೀಪನಿಂಗ್ ಮಾಡುವುದಕ್ಕೆ ಯಾವುದೇ ನಿರ್ದಿಷ್ಟವಾದ ಯೋಜನೆ ಇಲ್ಲದೆ ಇರುವುದರಿಂದ ಯಾರೂ ಕೂಡ ಡೀಪನಿಂಗ್ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ನಮ್ಮ ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸಿ ಡ್ರೈ ಆಗಿರತಕ್ಕಂತಹ ಕೊಳವೆ ಬಾವಿಗಳನ್ನು ಡೀಪನಿಂಗ್ ಮಾಡುವುದಕ್ಕೆ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳಿ, ರೈತನಿಗೆ ನೆರವಾಗತಕ್ಕಂತಹ ಕಾರ್ಯಕ್ರಮಗಳನ್ನು ಮಾಡಿ ಕೂಡಲೇ ನಮ್ಮ ಜಿಲ್ಲೆಯನ್ನು ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

+ ಶ್ರೀ ವಿ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ರಾಜ್ಯದ ಬರಗಾಲ ಪ್ರದೇಶಗಳ ಬಗ್ಗೆ ನಮ್ಮ ಅನೇಕ ಮಿತ್ರರು ಮಾತನಾಡಿದ್ದಾರೆ. ನಾವು ಎಂದೂ ಕಾಣದ ಬರಗಾಲವನ್ನು ಇವತ್ತಿನ ದಿವಸ ನೋಡುತ್ತಿದ್ದೇವೆ. ಅದರಲ್ಲೂ ಕೂಡ ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಇವತ್ತಿನವರೆಗೆ ಬಿತ್ತನೆ ಕಾಳು ನಾವು ನೋಡಲಿಲ್ಲ. ಮೇಜರ್ ಆಗಿ ನಾವು ಎಳ್ಳು, ಕಡಲೆಕಾಯಿ ಮತ್ತು ರಾಗಿಯನ್ನು ಬಿತ್ತನೆ ಮಾಡುತ್ತೇವೆ. ಯಾವ ನೀರಾವರಿ ಸೌಕರ್ಯಗಳೂ ಇಲ್ಲ. ನಾವು ಭತ್ತವನ್ನು ಪುಣಜಿ ಹಾಕತಕ್ಕಂತಹ ಜನ. ಒಂದೇ ಒಂದು ಕಾಳು ಪುಣಜಿ ಇವತ್ತಿನ ದಿವಸ ಆಗಲಿಲ್ಲ. ನಮ್ಮ ಮಂತ್ರಿಗಳೂ ಕೂಡ ನಮ್ಮ ಸಭೆ ಕರೆದಿದ್ದರು. ಅವರು ಬಹಳ ಪ್ರಭಾವಶಾಲಿಗಳಾದ ಮಂತ್ರಿಗಳು. ಅವರು ಯಾವಾಗ ಸಭೆ ಕರೆದಿದ್ದರು ಎಂದರೆ, ಶ್ರೀ ಬಚ್ಚೇಗೌಡರು ಮತ್ತು ಶ್ರೀ ಸಿಂಧ್ಯರವರು ಆ ಸಮಯದಲ್ಲಿ ಬಂದಿರಲಿಲ್ಲ. ನಾವು ಇಬ್ಬರು ಶಾಸಕರು ಮಾತ್ರ ಹೋಗಿದ್ದೆವು. ಏಕೆಂದರೆ, ನಾಳೆ ಮೀಟಿಂಗ್ ಮಾಡುತ್ತಾರೆಂದರೆ ಇವತ್ತು ದೂರವಾಣಿ ಮಾಡಿ ಕರೆದಿದ್ದರು. ನಮ್ಮ ಬಳಿ ಯಾವ ಮಾಹಿತಿ ಇರಲಿಲ್ಲ. ಯಾವ ವಿಧವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಗೊತ್ತಿರಲಿಲ್ಲ. ಮಳೆ ಬಂದರೂ ಕೂಡ ಇವತ್ತಿನ ದಿವಸ ಬಿತ್ತನೆ ಮಾಡುವುದಕ್ಕಾಗಲಿಲ್ಲ. ಭತ್ತ ಮತ್ತು ರಾಗಿ ಬಿತ್ತನೆ ಮಾಡುವುದಕ್ಕೆ ಸಮಯ ಆಗಿ ಹೋಯಿತು. ಕನಕಪುರದಲ್ಲಿ ಎಳ್ಳು ಹಾಕಿದ್ದರು ಒಣಗಿ ಹೋಯಿತು. ಇನ್ನು ಅನೇಕ ಕಡೆ ಕಡಲೆ ಕಾಯಿ ಹಾಕಿರಬಹುದು, ಜೋಳ ಹಾಕಿರಬಹುದು, ಯಾವ ಬೆಳೆಯೂ ಹಾಕುವ ಪರಿಸ್ಥಿತಿಯಲ್ಲಿ ಇಲ್ಲ. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಸಹಕಾರಿ ಸಂಘಗಳ ಸಾಲದ ಬಗ್ಗೆ ಹೇಳುವುದಾದರೆ, ಶ್ರೀಕಂಠಯ್ಯನವರು ಸಹಕಾರಿ ಮಂತ್ರಿಗಳಾಗಿದ್ದರು, ನಾನು ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿದ್ದೆ. 96,000 ಕೋಟಿ ರೂಪಾಯಿ ಜಿಲ್ಲಾ ಸಹಕಾರಿ

ಬ್ಯಾಂಕುಗಳಲ್ಲಿ ನಷ್ಟವಾಗಿದೆ. 10 ಸಾರಿ ಪ್ರಶ್ನೆ ಕೇಳಿದರೂ ಉತ್ತರ ಬರುವುದಿಲ್ಲ. ಎಲಿಜಿಬಿಲಿಟಿ ಇಲ್ಲವೆಂದು ಹೇಳುತ್ತಾರೆ. ಈ ಸಾರಿ ರಿಸರ್ವ್ ಬ್ಯಾಂಕ್‌ನವರು ಅದರ ಲೈಸನ್ಸ್ ಅನ್ನು ಕೂಡ ರಿನೀವಲ್ ಮಾಡಲಿಲ್ಲ. ನಮ್ಮ ಸಹಕಾರಿ ಮಂತ್ರಿಗಳು ಬಹಳ ಬಲಶಾಲಿಗಳು. ಇವತ್ತಿನ ದಿವಸ ಕ್ಯಾಬಿನೆಟ್‌ನಲ್ಲಿ ಬಹಳ ಬಲಶಾಲಿಯಾದ ಮಂತ್ರಿಗಳಾದವರು ಅವರೂ ಕೂಡ ಇಲ್ಲಿಲ್ಲ. ಇವತ್ತು ಸಹಕಾರಿ ಸಂಘಗಳ ಸಾಲ ಮಾಡಬೇಕಾದರೆ, ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತನೆ ಮಾಡಬೇಕಾದರೆ, ರೆವಿನ್ಯೂ ಇಲಾಖೆಯವರು ಅದನ್ನು ಬರ ಪೀಡಿತ ಪ್ರದೇಶ ಎಂದು ಡಿಕ್ಲೇರ್ ಮಾಡಬೇಕೆಂದು ಬರೆಯುತ್ತಾರೆ. ಇದುವರೆಗೆ ಯಾವುದೂ ಆಗಲಿಲ್ಲ. ಮುಂದಿನ ಬೆಂಚ್‌ನಲ್ಲಿ ಯಾವ ಮಂತ್ರಿಗಳೂ ಹಾಜರಿಲ್ಲ, ಅವರಿಗೂ ಬರ ಬಂದಿದೆ. ಯಾವ ಸಹಕಾರ ಸಂಘ ಕೊಡಬೇಕಾದರೂ ನಮ್ಮ ಸಹಕಾರ ಸಂಘದಲ್ಲಿ ಸಾಲ ಕೊಡುವುದಕ್ಕೆ ಆಗುವುದಿಲ್ಲ, ಮನ್ನಾ ಮಾಡುವುದಕ್ಕೆ ಆಗುವುದಿಲ್ಲ. ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಹೇಳಬೇಕಾಗಿದೆ. ಭತ್ತದ ಬೆಳೆ ನಾವು ಮಾಡುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್ ಆಳ 120 ಅಡಿ ಇದ್ದುದು, 400, 500 ಅಡಿಗೆ ಹೋಗಿದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮುಖ್ಯವಾಗಿ ಕೃಷಿ ಮಂತ್ರಿಗಳಿದ್ದಾರೆ, ಕಂದಾಯ ಮಂತ್ರಿಗಳಿದ್ದಾರೆ. ಫುಡ್ ಮಿನಿಸ್ಟರ್ ಇದ್ದಾರೆ, ಇನ್ನು ಎಷ್ಟು ಬೇಕು?

ಶ್ರೀ ಎ.ಕೃಷ್ಣಪ್ಪ: ನಮಗೆ ಆಹಾರಕ್ಕೆ ಏನೂ ತೊಂದರೆ ಇಲ್ಲ. ನಮಗೆ ಮುಖ್ಯವಾಗಿ ಬೇಕಾಗಿರುವುದು ನೀರು ಮತ್ತು ಮೇವು. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬರಗಾಲದ ಬಗ್ಗೆ ಚರ್ಚೆ ಪ್ರಾರಂಭವಾದಾಗಿನಿಂದ ಬಂದಿಲ್ಲ. ರೆವಿನ್ಯೂ ಮಂತ್ರಿಗಳು ಬರಗಾಲ ಪ್ರದೇಶವೆಂದು ಡಿಕ್ಲೇರ್ ಮಾಡಿದ ಮೇಲೆ ನಬಾರ್ಡ್‌ನವರು ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತನೆ ಮಾಡಿದರು. ಅದನ್ನು ಮೊದಲು ಮಂತ್ರಿಗಳ ಕೈಯಲ್ಲಿ ಮಾಡಿಸಿ. ಇವತ್ತಿನ ದಿವಸ ವಾಟರ್ ಲೆವಲ್ 100 ಅಡಿ ಇದ್ದು 400,500 ಅಡಿಗೆ ಹೋಗಿದೆ. ಒಬ್ಬ ರೈತ 25,000 ರೂಪಾಯಿ ಕಟ್ಟಿ ಅವನು ಪಂಪ್‌ಸೆಟ್ ಸರ್ವೀಸ್ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಬರಗಾಲದಲ್ಲಿ ಅವನು ಸರ್ವೀಸ್ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯಾ? ಇವತ್ತಿನ ಪರಿಸ್ಥಿತಿಯಲ್ಲಿ ಮೂರು ದಿವಸಗಳಾದರೂ ಈ ಕಡೆ ಕರೆಂಟ್ ಇರುವುದಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಹೀಗಿದೆ ಎಂದರೆ, ದನಕರುಗಳ ವ್ಯವಸ್ಥೆ ಏನು? ಕೆರೆಗಳಲ್ಲಿ ನೀರು ಇಲ್ಲ. ಕುಂಟೆಗಳಲ್ಲಿ ನೀರು ಇಲ್ಲ, ದಯವಿಟ್ಟು ಸರ್ಕಾರಕ್ಕೆ ಆದೇಶ ಕೊಡಿ, ಒಂದು ಟ್ರಾನ್ಸ್ ಫಾರ್ಮರ್ ಕೊಡುತ್ತಾರೆ, ತಿಂಗಳಿಗೆ ಹತ್ತು ಸಾರಿ ರಿಪೇರಿಗೆ ಹೋಗುತ್ತದೆ. ರಿಪ್ಲೇಸ್‌ಮೆಂಟ್ ಮಾಡಬೇಕಾದರೆ ಎಂಟು ದಿವಸಗಳು ಬೇಕು. ಎಂಟು ದಿವಸಗಳಾದರೂ ಊರಿನಲ್ಲಿ

ದನಕರು ಮತ್ತು ಜನತೆಗೆ ಕುಡಿಯುವ ನೀರಿನ ವ್ಯವಸ್ಥೆಯಾಗಲಿಲ್ಲ. ಸರ್ಕಾರ ಈ ವರ್ಷ ಯಾವುದೇ ಪಂಪ್‌ಸೆಟ್ ಡಿಸ್‌ಕನೆಕ್ಟ್ ಮಾಡುವುದಿಲ್ಲವೆಂದು ಆಶ್ವಾಸನೆ ಕೊಡಬೇಕು.

5.40 ಪಿಎಂ

ಇನ್ನು ಸಣ್ಣ ನೀರಾವರಿ ಮಂತ್ರಿಗಳು ಹೋಬಳಿಗೆ ಒಂದು ಕೆರೆಯಲ್ಲಿ ಹೂಳೆತ್ತುವುದಾಗಿ ಹೇಳುತ್ತಾರೆ. ಆದರೆ ಬಜೆಟ್‌ನಲ್ಲಿ ಇದಕ್ಕೆ ಪ್ರಾವಿಷನ್ ಇಲ್ಲದಿರುವಾಗ ಈ ಹೂಳೆತ್ತುವ ಕೆಲಸವನ್ನು ಯಾವಾಗ ಮಾಡುತ್ತಾರೆ? ಬಜೆಟ್‌ನಲ್ಲಿ ನೀರಾವರಿಗೆ ಪ್ರಾವಿಷನ್ ಇಲ್ಲದಿದ್ದರೂ ಮಂತ್ರಿಗಳು ಈ ಮಾತನ್ನು ಹೇಗೆ ಹೇಳಿದರು.?

ಶ್ರೀ ಕುಮಾರ್ ಬಂಗಾರಪ್ಪ(ಸಣ್ಣ ನೀರಾವರಿ ಸಚಿವರು): ಹೋಬಳಿಗೆ ಒಂದು ಕೆರೆಯಲ್ಲಿ ಹೂಳೆತ್ತುವ ಕೆಲಸವನ್ನು ಹಮ್ಮಿಕೊಳ್ಳಲಾಗಿದೆ. ಈ ವಾರದಲ್ಲಿ ಇದಕ್ಕೆ ಹಣಕಾಸನ್ನು ಬಿಡುಗಡೆ ಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ಹೇಳಿದ್ದೇವೆ.

ಶ್ರೀ ವಿ.ಕೃಷ್ಣಪ್ಪ: ವಿಶ್ವಬ್ಯಾಂಕ್‌ನವರು ಹೇಳಿರುವ ಪ್ರಕಾರ ಈ ಕಾರ್ಯಕ್ರಮಕ್ಕಾಗಿ ಹಣ ಕೊಡಲು ಮುಖ್ಯವಾಗಿ ಆ ಪ್ರದೇಶದ ಸುತ್ತಮುತ್ತ ಎಸ್.ಸಿ./ಎಸ್.ಟಿ. ಜನಗಳು ಹೆಚ್ಚು ಇರಬೇಕು ಮತ್ತು ಮಹಿಳೆಯರೇ ಹೆಚ್ಚು ಇರಬೇಕೆಂದು ಹೇಳುತ್ತಾರೆ. ಇದು ನಿಮಗೂ ತಿಳಿದಿರುತ್ತದಲ್ಲವೆ?

ಶ್ರೀ ಕುಮಾರ್ ಬಂಗಾರಪ್ಪ: ವಿಶ್ವಬ್ಯಾಂಕ್‌ನಿಂದ ಈ ಕಾರಣದಿಂದಾಗಿ ಹಣಕಾಸು ಬಿಡುಗಡೆಗಾಗಿ ಕಾಯಬಾರದು ಎಂದು ಹೇಳಿದ್ದೇವೆ. ಏಕೆಂದರೆ ಅಲ್ಲಿಂದ ಬರುವ ಹಣವನ್ನು ನಿರೀಕ್ಷಿಸಿದರೆ ಬಹಳ ಸಮಯವಾಗುತ್ತದೆಯಾದ ಕಾರಣ ತಕ್ಷಣದಲ್ಲಿಯೇ 747 ಕೆರೆಗಳಲ್ಲಿ ಹೋಬಳಿವೈಸ್ ಹೂಳೆತ್ತುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ ಆದಷ್ಟು ಬೇಗ ಈ ಕಾರ್ಯಕ್ರಮ ಜಾರಿಗೆ ಬರುತ್ತದೆ.

ಶ್ರೀ ವಿ.ಕೃಷ್ಣಪ್ಪ: ಇನ್ನು ನೀವು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಷ್ಟೆ. ಇನ್ನೂ ಕಾರ್ಯಕ್ರಮ ಪ್ರಾರಂಭ ಮಾಡಬೇಕಾಗಿದೆ.

ಶ್ರೀ ಕುಮಾರ್ ಬಂಗಾರಪ್ಪ: ಹೋಬಳಿಗೆ ಒಂದು ಕೆರೆಯಲ್ಲಿ ಹೂಳೆತ್ತುವ ಸಂಬಂಧವಾಗಿ ಈಗಾಗಲೇ ಹಲವಾರು ಶಾಸಕ ಮಿತ್ರರುಗಳು ಕೆರೆಯ ಬಗ್ಗೆ ವಿವರ ಕೊಟ್ಟಿದ್ದಾರೆ. ಯಾವ ಯಾವ ಶಾಸಕರುಗಳು ಕೊಟ್ಟಿಲ್ಲವೋ ಅವರೆಲ್ಲರೂ ಇವತ್ತು ಅಥವಾ ನಾಳೆಯೊಳಗೆ ಕೊಟ್ಟರೆ ಒಳ್ಳೆಯದು. ಇನ್ನು ಮುಖ್ಯಮಂತ್ರಿಗಳೂ ಕೂಡ ಈ ಕಾರ್ಯಕ್ರಮಕ್ಕೆ ವಿಶ್ವಬ್ಯಾಂಕ್‌ನಿಂದ ಹಣವನ್ನು ಕಾಯುತ್ತಿಲ್ಲ. ನಮ್ಮ ರಾಜ್ಯದ

ಹಣಕಾಸಿನ ವ್ಯವಸ್ಥೆಯಲ್ಲಿಯೇ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ಹೇಳಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವ್‌ಪ್ರಸಾದ್: ಹೋಬಳಿಗೆ ಒಂದು ಕೆರೆಯಲ್ಲಿ ಹೂಳೆತ್ತುವುದಾಗಿ ಬಹಳ ದಿನಗಳಿಂದಲೇ ಹೇಳಿಕೊಂಡು ಬಂದಿದ್ದೀರಿ. ಆದರೆ ಇದಕ್ಕೆ ಇನ್ನೂ ಹಣಕಾಸು ಬಿಡುಗಡೆ ಆಗಿಲ್ಲ.

ಶ್ರೀ ಎಂ.ಮಹದೇವ್(ರೇಷ್ಮೆ ಸಚಿವರು): ವಿಶ್ವಬ್ಯಾಂಕ್‌ಗೆ, ನಬಾರ್ಡ್‌ಗೆ ಇದರ ಬಗ್ಗೆ ಅಪ್ರೋಚ್ ಮಾಡಿ ಪ್ರೊಸೀಜರ್ ಪ್ರಕಾರ ಮಾಡಬೇಕಾಗುತ್ತದೆ. ಇದನ್ನು ಬಿಟ್ಟು ನೀವು ಹೇಳಿದ ಕೂಡಲೇ ಹೂಳೆತ್ತಬೇಕು ಎಂದರೆ ಹೇಗಾಗುತ್ತದೆ?

ಶ್ರೀ ವಿ.ಕೃಷ್ಣಪ್ಪ: ಸಣ್ಣ ನೀರಾವರಿ ಮಂತ್ರಿಗಳು ಇನ್ನು ಮುಂದಾದರೂ ಇದರ ಬಗ್ಗೆ ಕಾಳಜಿ ವಹಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆರೆಗಳಲ್ಲಿ ಹೂಳೆತ್ತುವ ಕೆಲಸವನ್ನು ತೆಗೆದುಕೊಂಡರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇದನ್ನು ಮಾಡುವುದರಿಂದ ಕುಡಿಯುವುದಕ್ಕೆ ನೀರು ಸಿಗುವುದಲ್ಲದೆ ಹಲವಾರು ಜನರಿಗೆ ಕೂಲಿ ಕೆಲಸವೂ ಕೂಡ ಈ ಯೋಜನೆಯಿಂದ ಸಿಗುತ್ತದೆಯಾದ ಕಾರಣ ಈ ನಿಟ್ಟಿನಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕೆಂದು ಹೇಳುತ್ತೇನೆ. ಏಕೆಂದರೆ ಇಂದು ಯಾವ ಕೆರೆಗಳಲ್ಲೂ ನೀರೇ ಇಲ್ಲದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಹೇಳುತ್ತೇನೆ. ಇನ್ನು ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕೆಂದು ಹೇಳಬಯಸುತ್ತೇನೆ. ಇದನ್ನು ಮಾಡಬೇಕಾದರೆ ಕಂದಾಯ ಮಂತ್ರಿಗಳು ಗಮನಹರಿಸಿ ಅಂಥ ಪ್ರದೇಶಗಳು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿಸಬೇಕು. ಈ ರೀತಿಯಲ್ಲಿ ಡಿಕ್ಲೇರ್ ಆದರೆ ಮಾತ್ರ ನಬಾರ್ಡ್‌ನವರು ಬಡ್ಡಿ ಮನ್ನಾ ಮಾಡುವಲ್ಲಿ ಗಮನಹರಿಸುತ್ತಾರೆಯಾದ ಕಾರಣ ಇದನ್ನು ಬೇಗ ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮುಖ್ಯವಾಗಿ ಹೇಳಬೇಕೆಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎಲ್ಲೂ ಕೂಡ ನೀರಿನ ಅಭಾವ ಇಲ್ಲ, ಆದರೆ ಕರೆಂಟ್ ಅಭಾವ ಜಾಸ್ತಿ ಇದೆ. ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡು ಮಾನ್ಯ ಕಂದಾಯ ಸಚಿವರು ದೊಡ್ಡ ಮನಸ್ಸು ಮಾಡಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮೊದಲು ಮಾಡಿಕೊಡಬೇಕು ಮತ್ತು ದನಕರುಗಳಿಗೆ ಮೇವಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಆರ್.ಯಾವಗಲ್(ನರಗುಂದ): ಮಾನ್ಯ ಛೇರ್‌ಮನ್‌ರವರೆ, ಇಂದು ಬರಗಾಲದ ಭೀಕರ ಛಾಯೆಯ ಹಿನ್ನೆಲೆಯಲ್ಲಿ ನಾವೆಲ್ಲರೂ ಚರ್ಚೆಯನ್ನು

ಮಾಡುತ್ತಿದ್ದೇವೆ. ನನ್ನ ಕ್ಷೇತ್ರ ಕೂಡ ಬರಗಾಲಕ್ಕೆ ಇನ್ನೊಂದು ಹೆಸರೇ ಎಂದು ಹೇಳುವಂಥ ಪ್ರದೇಶವಾಗಿದೆ. ಇಲ್ಲಿ ಕೆಲವು ದಿನಗಳ ಹಿಂದೆ ನದಿಗಳಲ್ಲಿ ಗುಬ್ಬಿ ಕೂಡ ನೀರು ಕುಡಿಯಲು ಸಿಗುತ್ತಿರಲಿಲ್ಲವೆನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಪರಿಸ್ಥಿತಿ ಮಲಪ್ರಭ, ಘಟಪ್ರಭ ಹಾಗೂ ಕೃಷ್ಣಾ ನದಿಯಲ್ಲೂ ಕೂಡ ಇಂಥ ಪರಿಸ್ಥಿತಿ ಉಂಟಾಗಿತ್ತು. ಹೀಗಾಗಿ ಆ ಪ್ರದೇಶಗಳ ವ್ಯಾಪ್ತಿಯಲ್ಲಿ ಮುಂಗಾರು ಬೆಳೆಯನ್ನು ಏನು ಬೆಳೆಯಬಹುದಾಗಿತ್ತೋ, ಮತ್ತು ಎರಡು ಕಾಲದ ಬೆಳೆಗಳನ್ನು ಏನು ಬೆಳೆಯಬಹುದಾಗಿತ್ತೋ ಅದೆಲ್ಲವೂ ಮಳೆ ಇಲ್ಲದ ಕಾರಣದಿಂದಾಗಿ ಬೆಳೆಯಲು ಸಾಧ್ಯವಾಗಿಲ್ಲ. ಒಂದು ಕಡೆ ನೀರಾವರಿ ಪ್ರದೇಶವೆಂದು ಹೇಳುವುದರಿಂದ ನೀರಾವರಿ ಕಾನೂನಿನ ಪ್ರಕಾರ ಅದಕ್ಕೆ ಅರ್ಹತೆ ಕೂಡ ಇಲ್ಲ. ನೀರಾವರಿ ಒದಗಿಸಿಕೊಟ್ಟ ಕಾರಣದಿಂದಾಗಿ ಅಲ್ಲಿ ಬರಗಾಲ ಬಂದರೆ ಯಾವುದೇ ರೀತಿಯ ಅನುಕೂಲತೆಗಳನ್ನಾಗಲಿ, ಲ್ಯಾಂಡ್ ರೆವಿನ್ಯೂ ಸಸ್ಪೆನ್‌ಶನ್ ಆಗಲಿ ಮಾಡುವುದಕ್ಕೆ ನೀರಾವರಿ ಕಾನೂನಿನ ತೊಡಕುಗಳು ಇದೆ. ಇನ್ನೊಂದು ಕಥೆಯಲ್ಲಿ ಚಿಂತನೆ ಮಾಡಿ ಹೇಳುವುದಾದರೆ ಕೇವಲ ಒಂದು ಮಳೆಯಾಗಿ ಮುಂದೆ ಮಳೆಯೇ ಆಗದಂಥ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ಹದಮಾಡಿ ಉಳುಮೆ ಏನು ಮಾಡಲಾಗಿರುತ್ತದೆ ಅಲ್ಲೆಲ್ಲಾ ಜಮೀನಿನಲ್ಲಿ ಸಣ್ಣ ಸಣ್ಣ ಹೆಂಟೆಗಳಾಗಿರುತ್ತದೆ. ಇಂದು ಅದು ಕೂಡ ಕರಗಿ ಮೊದಲು ಯಾವ ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿಯಲ್ಲಿಯೇ ಈಗಲೂ ಕೂಡ ಹಾಗೆಯೇ ಇದೆ. ಇತ್ತೀಚೆಗೆ ಸ್ವಲ್ಪ ಮಳೆಯಾಗಿ ರಿಸರ್ವಾಯರ್‌ಗಳಲ್ಲಿ ನೀರು ಬಂದಿದ್ದರೂ ಕೂಡ ಆ ನೀರನ್ನು ಇಂದು ಬಿಟ್ಟರೂ ಕೂಡ ಬಹುತೇಕ ಜನಗಳೇ ಜಗಳವಾಡಿ ತೊಂದರೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದರಿಂದ ಕಾನೂನು ಸುವ್ಯವಸ್ಥೆ ಹದಗೆಡುವಂಥ ಪರಿಸ್ಥಿತಿ ಕೂಡ ಅಲ್ಲಿದೆ. ಇದಕ್ಕೆ ಕಾರಣವೆಂದರೆ ನೀರು ಬಿಟ್ಟಾಗ ಮೇಲಿನ ಪ್ರದೇಶಗಳಲ್ಲಿರುವ ಜನರು ನೀರನ್ನು ತಡೆ ಹಿಡಿದು ಕೆಳಗಡೆ ಅದನ್ನು ಬಿಡುವುದಿಲ್ಲ. ಇಂದು ತಕ್ಷಣದಲ್ಲಿ ಎಷ್ಟು ನೀರು ಬಿಟ್ಟರೂ ಕೂಡ ಬೇಸಿಗೆಯಲ್ಲಿ ಭೂಮಿ ಒಣಗಿ ಬಿರುಕು ಬಿಟ್ಟಿರುತ್ತದೆಯಾದ ಕಾರಣ ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಡೀ ಮಲಪ್ರಭಾ ನೀರನ್ನೇ ಬಿಟ್ಟರೂ ಕೂಡ ತಕ್ಷಣದಲ್ಲಿ ಸಾಗುವಳಿ ಮಾಡಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಅಲ್ಲಿ ಜಮೀನುಗಳು ಒಣಗಿಹೋಗಿವೆ. ಹೀಗಾಗಿ ಅಲ್ಲಿ ಹೆಚ್ಚಾಗಿ ಮಳೆ ಆಗಲೇಬೇಕು. ಈಗ ಆ ಪ್ರದೇಶ ಸಂರಕ್ಷಿತ ನೀರಾವರಿ ಪ್ರದೇಶವೆಂದೇ ಹೇಳಲಾಗಿದೆ. ಯಾವಾಗ ಮಳೆ ಬರದೇ ಬೆಳೆ ನಾಶವಾಗುತ್ತದೆ ಆಗ ಅದಕ್ಕೆ ಬೇಕಾಗುವ ಪ್ರಮಾಣದಲ್ಲಿ ನೀರನ್ನು ಒದಗಿಸಿ ಬೆಳೆಯನ್ನು ಉಳಿಸಿಕೊಳ್ಳಲು ಮತ್ತು ಅದಕ್ಕೆ ಹೊಂದುವಂಥ ಬೆಳೆಯನ್ನು ಬೆಳೆಯಲು ಅನುಕೂಲ ಮಾಡಿಕೊಟ್ಟ ಪ್ರದೇಶವೇ ಇದಾಗಿದೆ. ಆದರೆ ಇಂದು ನಾವು ಏನೇ ಮಾಡಿದರೂ ಕೂಡ ಅಲ್ಲಿರುವಂಥ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ಅಲ್ಲಿ

ನಿರ್ಮಾಣವಾಗಿದೆ. ಈ ರೀತಿಯಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿ ಮುಂಗಾರು ಬೆಳೆಯನ್ನು ಬೆಳೆಯಬೇಕಾಗಿತ್ತೋ ಅಲ್ಲೆಲ್ಲಾ ಆಗಿದೆ. ಇವತ್ತು ಮುಂಗಾರು ಬೆಳೆ ಬೆಳೆಯುವಂತಹ ಕಾಲದಲ್ಲಿ ಈಗಾಗಲೇ ಜೂನ್ ಮುಗಿದು ಜುಲೈ ತಿಂಗಳು ದಾಟದ್ದೇವೆ. ಈಗ ಅಲ್ಪಸ್ವಲ್ಪ ಮೋಡಗಳನ್ನು ನೋಡುತ್ತಿದ್ದೇವೆ. ಅದರ ಪರಿಸ್ಥಿತಿಯನ್ನು ಅವಲೋಕಿಸಿದಾಗ, ಈಗಲೂ ಕೂಡ ಮಳೆ ಬರುವಂತಹ ಪರಿಸ್ಥಿತಿ ಇಲ್ಲವೇನೋ ಎಂದು ಅನಿಸುತ್ತದೆ. ಬೆಂಗಳೂರಿನಲ್ಲಿ ಸ್ವಲ್ಪ ಮಳೆಯಾಗಿದೆ. ನಮ್ಮ ಕಡೆ ಹೋದರೆ ತುಂತುರು ಮಳೆಯಾಗಿದೆ. ಸಂಜೆಯವರೆಗೂ ಗಾಳಿ ಬೀಸುತ್ತಿರುತ್ತದೆ, ರಾತ್ರಿ ಥಂಡಿ ಬಡಿಯುತ್ತದೆ. ಆದರೆ ಮಳೆಯಾಗುವ ಯಾವುದೇ ಲಕ್ಷಣಗಳು ಅಲ್ಲಿ ಕಾಣುತ್ತಿಲ್ಲ. ಹಾಗಾಗಿ ಇವತ್ತು ಮಳೆಯಾಗುವ ಸಾಧ್ಯತೆಗಳು ಇಲ್ಲ. ಇವತ್ತು ಜೂನ್ ಮೊದಲ ಅಥವಾ ಮೇ ತಿಂಗಳ ಕೊನೇ ಭಾಗದಲ್ಲಿ ಬರುವಂತಹ ರೋಹಿಣಿ ಮಳೆಯಿಂದ ಹೆಸರು, ಶೇಂಗಾ ಅಥವಾ ಜೋಳ ಇರಬಹುದು ಇಂತಹ ಮುಂಗಾರು ಬೆಳೆಗಳನ್ನು ಬಿತ್ತುವುದಕ್ಕೆ ಸಾಧ್ಯವಾಗಿಲ್ಲ. ಅಥವಾ ಇವತ್ತು ಮಳೆ ಬಂದು ಬಿತ್ತಿದರೂ ಕೂಡ ಅವು ಸರಿಯಾಗಿ ಫಲ ಬರುವುದಕ್ಕೆ ಸಾಧ್ಯವಿಲ್ಲ. ಸೀಜನಲ್ ಕ್ರಾಪ್ಸ್ ಇರುತ್ತವೆ, ಬೇರೆ ಕಾಲದಲ್ಲಿ ಹಾಕಿದರೆ ಅವುಗಳು ಬರುವುದಿಲ್ಲ. ಆದರೆ ಒಂದೇ ಒಂದು ಬೆಳೆ ಬೆಳೆಯುವುದಕ್ಕೆ ಸಾಧ್ಯವಿದೆ. ಅದೆಂದರೆ ಸ್ವಲ್ಪ ನಿಧಾನವಾಗಿ, ತಡವಾಗಿ ಬಿತ್ತಿದರೂ ಸಹ ಗೋವಿನ ಜೋಳವನ್ನು ಬೆಳೆಯಬಹುದು. ಆದರೆ ನೀರಿನ ಪ್ರಮಾಣ ಮಾತ್ರ ಸಾಕಷ್ಟು ಬೇಕಾಗುತ್ತದೆ. ಅಷ್ಟು ನೀರು ಇವತ್ತು ಸಿಗುವುದಕ್ಕೆ ಕಷ್ಟವಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗಾಗಿ ಇವತ್ತು ರಾಜ್ಯದ ಅನೇಕ ಕಡೆ ಇಂತಹ ಪರಿಸ್ಥಿತಿ ಇರುವಾಗ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯವೇ ಒಂದು ಬರಪೀಡಿತವಾಗಿದೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿ 70 ರಿಂದ 80 ಭಾಗ ನಾವು ಬರದಿಂದ ಬಳಲುತ್ತಿದ್ದೇವೆ. ಎಲ್ಲಿ ಮುಂಗಾರು ಬೆಳೆ ಬೆಳೆಯುವುದಕ್ಕೆ ಸಾಧ್ಯವಿದೆಯೋ ಅದು ಹಳೆ ಮೈಸೂರು ಭಾಗದಲ್ಲಿ ಸ್ವಲ್ಪಮಟ್ಟಿಗೆ ಹಿಂಗಾರು ಬೆಳೆ ಸಾಧನೆ ಮಾಡುವುದಕ್ಕೆ ಸಾಧ್ಯವಿದೆ. ಈ ಹಿಂಗಾರು ಬೆಳೆ ಬೆಳೆಯುವುದಕ್ಕೂ ಸಹ ಸೆಪ್ಟೆಂಬರ್, ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಲ್ಲಿ ಬಿತ್ತುವಂತಹ ಬೆಳೆಗೆ ಅಲ್ಪಸ್ವಲ್ಪ ಮಳೆಯಾಗಿ ಭೂಮಿ ಹದವಾದರೆ ಮಾತ್ರ ಬೆಳೆ ಬರುತ್ತದೆ. ಆದರೆ ಒಂದೆರಡು ಮಳೆಯಿಂದ ಹಿಂಗಾರು ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 70 ರಿಂದ 80 ಭಾಗದಲ್ಲಿ ಇರುವಂತಹ ಬರ ಪ್ರದೇಶವನ್ನು ಹಾಗೂ ಅಲ್ಲಿರುವಂತಹ ಜನ ಹಾಗೂ ದನಗಳನ್ನು ರಕ್ಷಣೆ ಮಾಡುವಂತಹ ಜವಾಬ್ದಾರಿ ಮತ್ತು ಭವಿಷ್ಯದಲ್ಲಿ ಇದು ಪುನರಪಿ ಆಗಬಾರದು ಎನ್ನುವ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆನ್ನುವುದು ನನ್ನ ಅಭಿಪ್ರಾಯ ಇದ್ದು ಅದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಳೆ ಬಂದರೆ ನಾವೆಲ್ಲರೂ ಸಂತೋಷ ಪಡೋಣ.

ಅಷ್ಟಾದರೂ ಬೆಳೆ ಬಂದರೆ ನಮಗೆ ಅನುಕೂಲ ಆದೀತು ಎನ್ನುವ ಅಭಿಪ್ರಾಯ ಬಂದಿದ್ದು ಸಹ ಇದೆ. ಆದರೆ ಇವತ್ತು ಕಾಲಕಾಲಕ್ಕೆ ನಾವು ಈ ಸೈಕಲ್‌ನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿದ್ದೇವೆ. ನನ್ನ ಅನುಭವದಲ್ಲಿ 1964ರಲ್ಲಿ, 1973ರಲ್ಲಿ ಹಾಗೂ 1985-86ರಲ್ಲಿ ಬರಗಾಲ ಬಂದಿತ್ತು. ಇವತ್ತಿನ ಲಕ್ಷಣ ನೋಡಿದರೆ ಇದು ಬರದ ವರ್ಷ ಎಂದು ಕಾಣುವಂತಹ ಸ್ಥಿತಿ ಇದೆ. ಆದರೆ ಯಾವರೀತಿ ಹಿಂದೆ ಇತ್ತು, ಒಂದು ಕಾಲದಲ್ಲಿ ನನ್ನ ಅನುಭವದಲ್ಲಿ ಬೆಳೆ ಹೋದಾಕ್ಷಣ ಬರ ಬಿದ್ದಾಕ್ಷಣ ಸರ್ಕಾರಗಳು ಜವಾಬ್ದಾರಿಯನ್ನು ತೆಗೆದುಕೊಳ್ಳುವಂತಹ ಕೆಲಸವಾಗುತ್ತಿತ್ತು. ಅದೆಂದರೆ ಜನಗಳಿಗೆ ಆಹಾರ ಒದಗಿಸುವುದು, ನೀರನ್ನು ಒದಗಿಸುವುದು, ಅದರ ಜೊತೆಗೆ ದನಗಳಿಗೆ ಮೇವು ಒದಗಿಸುವಂತಹ ಜವಾಬ್ದಾರಿ. ಹೇಗೋ ಎಲ್ಲರೂ ಜೀವಂತ ಇರಬೇಕು, ನಂತರ ಬರಗಾಲ ಕಳೆದು ಮರುವರ್ಷ ಬೆಳೆ ಸುಭಿಕ್ಷೆಯಾಗಿ ಬಂದಾಗ ಜನ ಮತ್ತೆ ತಮ್ಮ ಜಾಗಕ್ಕೆ ವಾಪಸ್ಸು ಹೋಗುತ್ತಿದ್ದರು. ಹಿಂದೆ ಬರ ಬಂದಾಗ ಊರುಗಳಲ್ಲಿ ಕೆಲವರು ಮಾತ್ರ ದನಗಳನ್ನು ಹಾಗೂ ಪದಾರ್ಥಗಳನ್ನು ಉಳಿಸಿಕೊಂಡು ಇರುವಂತಹ ಪರಿಸ್ಥಿತಿ ಇತ್ತು. ನೀರಿಗೆ ಬಹಳ ತೊಂದರೆ ಇತ್ತು, ನೀರನ್ನು ಅನೇಕ ಮೈಲಿಗಳ ದೂರ ಹೋಗಿ ತರುವಂತಹ ಪರಿಸ್ಥಿತಿ ಇತ್ತು. ನನ್ನ ಸ್ವಂತ ಅನುಭವದಲ್ಲಿ ಬಹುತೇಕ ಊರುಗಳಲ್ಲಿ 80 ಪಾಲು ಹಳ್ಳಿಯಲ್ಲಿ ಮನೆಗಳಿಗೆ ಬೀಗ ಹಾಕಿ ಬೇರೆ ಕಡೆ ಗುಳೆ ಹೋಗುವಂತಹ ಪರಿಸ್ಥಿತಿ ಆವತ್ತು ಇತ್ತು. ಆದರೆ ಇವತ್ತು ಆ ಪರಿಸ್ಥಿತಿ ಇದೆ ಎಂದು ನಾನು ಭಾವಿಸುವುದಿಲ್ಲ. ಇವತ್ತು ಜನಗಳಿಗೆ ಆಹಾರದ ಕೊರತೆ ಆದೀತು ಎನ್ನುವ ಭಯವಿದೆ ಎಂದು ನಾನು ತಿಳಿದುಕೊಳ್ಳುವುದಿಲ್ಲ ಅಥವಾ ನೀರನ್ನು ಪೂರೈಸುವುದಕ್ಕೆ, ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಸ್ಥಿತಿ ಇದೆಯೆಂದು ನಾನು ಭಾವಿಸುವುದಿಲ್ಲ. ಯಾವ ಕಾಲದಲ್ಲಿ ಈ ಬರದ ಕಲ್ಪನೆ ಇತ್ತು ನಮಗೆ, ವಿನಪ್ಪ, ಜನಗಳಿಗೆ ಆಹಾರ ಹಾಗೂ ನೀರನ್ನು ಒದಗಿಸಿ ಅವರನ್ನು ಪೋಷಣೆ ಮಾಡಿ ಈ ವರ್ಷದಿಂದ ಮುಂದಿನ ವರ್ಷಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವುದಿತ್ತು ಅದು ಬದಲಾವಣೆಯಾಗಬೇಕು ಎನ್ನುವುದೇ ನನ್ನ ವಿಚಾರ. ಬರ ಬಂದಿದ್ದು ಒಂದು ರೀತಿಯಿಂದ ಅನಾನುಕೂಲವಾದರೂ, ಬರುವ ವರ್ಷಗಳಲ್ಲಿ ಆ ಅವಧಿಯನ್ನು ಉಪಯೋಗ ಮಾಡುವಂತಹ ಒಂದು ಕೆಲಸವಾಗಬೇಕು ಎನ್ನುವುದು ನನ್ನ ವಿಚಾರ. ಇವತ್ತು ಮಳೆ ಇಲ್ಲದಂತಹ ಪರಿಸ್ಥಿತಿಯಲ್ಲಿ ಅನೇಕ ವಿಧವಾದ ಕೆಲಸಗಳನ್ನು ಕೈಗೆ ತೆಗೆದುಕೊಳ್ಳುವಂಥಾದ್ದು ಮತ್ತು ಅನೇಕ ನೀರಾವರಿ ಕೆರೆಗಳು, ಕುಡಿಯುವ ನೀರಿನ ಕೆರೆಗಳು ಇರಬಹುದು, ಬ್ಯಾರೇಜ್ ಇರಬಹುದು ಅಥವಾ ಒಡ್ಡುಗಳನ್ನು ಹಾಕುವುದಿರಬಹುದು ಅಥವಾ ನಾಲಾಗಳು, ಹೊಳೆ, ಹಳ್ಳಗಳನ್ನು ಇವತ್ತು ನೋಡುತ್ತೇವೆ. ಅಲ್ಲಿ ಬೆಳೆದಂತಹ ಕಂಟಿ ಗಿಡಗಳು ಅಲ್ಲಿನ ಕೆಟ್ಟ ಪರಿಸ್ಥಿತಿಯನ್ನು ನೋಡಿದಾಗ, ಅಲ್ಲಿಂದ ನೀರು ಹರಿದು ಬರುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಬಹುತೇಕ ಸ್ವಲ್ಪ ದೂರ ನೀರು ಹರಿದು ಬಂದರೂ ಒಂದು

ರೀತಿಯಲ್ಲಿ ಬುಕ್ಕಾನು ಮಾಡುವಂತಹ ಪರಿಸ್ಥಿತಿ ಇದೆ. ಆದುದರಿಂದ ದೊಡ್ಡ ಪ್ರಮಾಣದಲ್ಲಿ ಯುದ್ಧದೋಪಾದಿಯಲ್ಲಿ ಇವುಗಳ ಕೆಲಸಗಳನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯಾಗಬೇಕೆನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದಕ್ಕೋಸ್ಕರ ಇದು ದೂರಗಾಮಿ ಪರಿಣಾಮವನ್ನು ಬೀರುತ್ತದೆ ಹಾಗೂ ಖಾಯಂ ಆಗಿ ಅನುಕೂಲ ಮಾಡಿಕೊಡುತ್ತದೆ. ನಮ್ಮ ಪ್ರದೇಶದಲ್ಲಿ ಸುಮಾರು 30 ವರ್ಷಗಳ ಹಿಂದೆ ಕಾಲುವೆ ಮಾಡಿದ್ದು, ಅವುಗಳನ್ನು ನೋಡಿದರೆ ಬಹುತೇಕ ಕಾಲುವೆಗಳು ಬಹಳ ದುಸ್ಥಿತಿಯಲ್ಲಿವೆ. ನಾನು ಈಗಾಗಲೇ ನಾಲೆ, ಹಳ್ಳ ಹಾಗೂ ಹೊಳೆ ಬಗ್ಗೆ ಏನು ಹೇಳಿದೆ ಅಲ್ಲಿ ಕಂಟಿ ಬೆಳೆದು ನೀರು ಹೋಗುವಂತಹ ಪರಿಸ್ಥಿತಿ ಇಲ್ಲ. ದೊಡ್ಡ ಕಾಲುವೆಯಾಗಲಿ, ಸಣ್ಣ ಕಾಲುವೆಯಾಗಲಿ ವರ್ಷದ ಕೊನೆಯವರೆಗೂ ನೀರು ಪಡೆದುಕೊಳ್ಳುತ್ತೇವೆ. ಕ್ಲೋಜರ್ ಪೀರಿಯಡ್ ಕಡಿಮೆ ಇರುತ್ತದೆ, ಅಥವಾ ಅದಕ್ಕೆ ಸಂಪನ್ಮೂಲ ಸಾಕಾಗುವುದಿಲ್ಲ, ಒದಗಿಸಿದಂತಹ ದುಡ್ಡು ಸಾಕಾಗುವುದಿಲ್ಲ. ಅಥವಾ ಅದನ್ನು ಮಾಡುವುದಕ್ಕೆ ಸಮಯಾವಕಾಶ ಇರುವುದಿಲ್ಲ. ಆದರೆ ಈ ಒಂದು ಅವಕಾಶವನ್ನು ಉಪಯೋಗ ಮಾಡಿ ಸುಮಾರು 30 ವರ್ಷವಿರಬಹುದು ಅಥವಾ ತುಂಗಭದ್ರಾದಲ್ಲಿ ಇನ್ನು ಹೆಚ್ಚು ವರ್ಷವಾಗಿರಬಹುದು, ಇಷ್ಟು ವರ್ಷಗಳ ಕಾಲ ದುರಸ್ತಿ ಮಾಡದೇ ಇರುವಂತಹ ಕಾಲುವೆಗಳನ್ನು ಈ ಸಮಯದಲ್ಲಿ ದುರಸ್ತಿ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಾವೇನು ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಿದೆ, ಟೂ ಸೀಜನಲ್ ಕ್ರಾಪ್ಸ್ ಇರಬಹುದು, ಅಥವಾ ಹಿಂಗಾರು ಬೆಳೆ ಇರಬಹುದು, ನಮ್ಮ ಭಾಗದಲ್ಲಿ ಮಳೆಯಾದರೆ ಮಾತ್ರ ಈರುಳ್ಳಿ, ಮೆಣಸಿನಕಾಯಿ ಹಾಗೂ ಹತ್ತಿ ಬೆಳೆಯಬಹುದು. ಮಳೆಯಾಗದೇ ಇದ್ದರೆ ಯಾವ ಶಾರ್ಟ್ ಡ್ಯೂರೇಷನ್ ಬೆಳೆ ಬೆಳೆಯುವುದಕ್ಕೆ ಅವಕಾಶವಿದೆ? ಅದಕ್ಕೆ ಇವತ್ತು ರಿಸರ್ವಾಯರ್‌ನಲ್ಲಿ ಮತ್ತೊಂದು ಕಡೆ ಇರುವಂತಹ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ಇವತ್ತು ಜನಗಳಿಗಿಂತ ಹೆಚ್ಚಾಗಿ ಪ್ರಾಣಿಗಳಿಗೆ ಬಹಳ ಕುತ್ತು ಬಂದಿದೆಯೆಂದು ಸಭೆಯ ಗಮನಕ್ಕೆ ತರಬಯಸುತ್ತೇನೆ. ದೊಡ್ಡ ರೈತರು ಸ್ವಲ್ಪಮಟ್ಟಿಗೆ ಮೇವು ಹಾಗೂ ಹೊಟ್ಟನ್ನು ಸಂಗ್ರಹ ಮಾಡಿರುತ್ತಾರೆ. ಆದರೆ ಸಣ್ಣ ರೈತರು ದನ, ಆಡು ಕಟ್ಟಿಕೊಂಡು ಇರುವಂತಹ ಕೂಲಿಕಾರರು ಇವರು ಮೇವಿನ ಸಂಗ್ರಹ ಜಾಸ್ತಿ ಮಾಡಿಕೊಂಡಿರುವುದಿಲ್ಲ. ಇವರ ಹತ್ತಿರ ಬಹಳ ಎಂದರೆ ಮೂರು ತಿಂಗಳಿಗೆ ಆಗುವಷ್ಟು ಸಂಗ್ರಹಣೆ ಮಾತ್ರ ಇರುತ್ತದೆ. ಅವರು ಮಳೆಯಾಧಾರಿತವಾಗಿ ಹುಲ್ಲು ಬಂದಾಗ ಅದನ್ನು ತೆಗೆದುಕೊಂಡು ಹೋಗಿ ಹಾಕುತ್ತಾರೆ. ಅಥವಾ ಬೇರೆ ಕಡೆ ಹೊಲಗಳಿಗೆ ಹೋಗಿ ಯಥೇಚ್ಛವಾಗಿ ಮೇವು ಬರುತ್ತದೆ ಅದನ್ನು ತಂದು ಹಾಕುತ್ತಾರೆ. ಅದನ್ನೆಲ್ಲಾ ಉಪಯೋಗ ಮಾಡಿ ವರ್ಷಾವಧಿ ತಮ್ಮ ದನಗಳನ್ನು ಸಾಕಾಣಿಕೆ ಮಾಡಿಕೊಂಡು ಬರುತ್ತಾರೆ. ಆದರೆ ದುರ್ದೈವ ಇವತ್ತು ಆ ಪರಿಸ್ಥಿತಿ ಇಲ್ಲ. ಬರದ

ಕಾರಣದಿಂದ ನಾವು ಎಲ್ಲೆ ಹೋದರೂ ಸಹ ಕಟುಕರಿಗೆ ದನಗಳನ್ನು ಹೊಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು ಒಂದು ಹಿಂಡು, ಎರಡು ಹಿಂಡು ಎತ್ತುಗಳು, ಎಮ್ಮೆಗಳನ್ನು ಹೊಡೆದುಕೊಂಡು ಹೋಗಿ ಕಸಾಯಿಖಾನೆಗೆ ಹೊಡೆಯುವಂತಹ ಚಿತ್ರಣವನ್ನು ನೋಡುತ್ತಿದ್ದೇವೆ. ಆದುದರಿಂದ ಎಲ್ಲಿ ಬೆಳೆಯುವುದಕ್ಕೆ ಸಾಧ್ಯವಿದೆ ಆ ಪ್ರದೇಶದಲ್ಲಿ ಮೇವನ್ನು ಬೆಳೆಸುವುದಕ್ಕೆ ದಯವಿಟ್ಟು ಸರ್ಕಾರ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಇವತ್ತು ರೈತರಿಗೆ ಒಂದು ಯೋಜನೆ ಇರುತ್ತದೆ ಅದು ನಮ್ಮ ಸ್ವಭಾವದಲ್ಲಿ ಬರುತ್ತದೆ. ಅದೇನೆಂದರೆ ಈ ವರ್ಷ ಇಷ್ಟು ಮುಂಗಾರು ಬೆಳೆ ಇಷ್ಟು ಹಿಂಗಾರು ಬೆಳೆ ಮಾಡೋಣ. ಮಾಡಿದರೆ ಇಷ್ಟು ಪ್ರಮಾಣದಲ್ಲಿ ಬರಬಹುದು ಈ ರೀತಿಯಾದ ಒಂದು ವ್ಯವಸ್ಥೆ ಇರುತ್ತದೆ. ಆದರೆ ಬರಗಾಲ ಬಂದಾಗ ಆ ವ್ಯವಸ್ಥೆ ಎಲ್ಲಾ ಹಾಳಾಗಿ ಅದು ತೊಂದರೆಯಾಗುತ್ತದೆ. ಎಲ್ಲಾ ಕಡೆ ಮಳೆಯಾದರೆ ಹಿಂಗಾರು ಬೆಳೆಬೆಳೆಯುವುದಕ್ಕೆ ಪ್ರಯತ್ನ ಮಾಡಬಹುದು. ಕೆಲವು ಸಮಯ ಮಳೆ ಆಗದಂತಹ ಪರಿಸ್ಥಿತಿ ಇರಬಹುದು. ಅನೇಕರು ಬೀಜ, ಗೊಬ್ಬರ ತಂದು ಹಾಕಿರುತ್ತಾರೆ. ಅದಕ್ಕಾಗಿ ಇಂದು ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ ಮಳೆ ಕಡಿಮೆ ಬಂದರೂ ಕೂಡ ಶಾರ್ಟ್ ಡ್ಯೂರೇಷನ್ನ್‌ಲ್ಲಿ ಯಾವ ಯಾವ ಬೆಳೆಯನ್ನು ಬೆಳೆಯಬಹುದು ಎಂಬುದಕ್ಕೆ ಸಂಬಂಧಪಟ್ಟಂತೆ ರೈತರಿಗೆ ಕಿಟ್ಸ್ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ರೈತರಿಗೆ ಆಗ ಯಾವ ರೀತಿಯ ಬೀಜದ ಅವಶ್ಯಕತೆ ಇದೆಯೋ ಅದನ್ನು ಕೂಡ ಒದಗಿಸಿಕೊಡಬೇಕೆನ್ನುವ ಸಲಹೆಯನ್ನು ಕೊಡಬಯಸುತ್ತೇನೆ. ಇದಕ್ಕೆಲ್ಲಾ ಹೆಚ್ಚಿನ ಹಣಕಾಸು ಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ರಾಜ್ಯ ಸರ್ಕಾರಕ್ಕೆ ಈ ವಿಚಾರದಲ್ಲಿ ಅದರದೇ ಆದ ಇತಿಮಿತಿಗಳಿರುತ್ತವೆ. ಇಂದು ಶೇಕಡ 60 ರಿಂದ 70 ರಷ್ಟು ವರಮಾನದ ಭಾಗವನ್ನು ಸಂಬಳ ಕೊಡುವುದಕ್ಕೆ ಖರ್ಚು ಮಾಡಲಾಗುತ್ತಿದೆಯಾದ ಕಾರಣ ಸಾಲವನ್ನು ಮಾಡಿಯಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾದ ಪರಿಸ್ಥಿತಿಗೆ ನಾವಿಂದು ಬಂದಿದ್ದೇವೆ. ಬಹಳ ದೊಡ್ಡ ಮಟ್ಟದ ಹಣಕಾಸಿನ ಸಾಲವನ್ನು ಅಭಿವೃದ್ಧಿ ಕೆಲಸಗಳ ಸಲುವಾಗಿ ಪಡೆಯುತ್ತಿರುವುದು ಎಲ್ಲರಿಗೂ ಗೊತ್ತಿದೆ. ಇದರಲ್ಲಿ ಸಣ್ಣ ಮತ್ತು ದೊಡ್ಡ ನೀರಾವರಿ ಇರಬಹುದು, ರಸ್ತೆಗಳ ನಿರ್ಮಾಣವಿರಬಹುದು, ಇದಲ್ಲದೇ ಇತರ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದೂ ಕೂಡ ಸೇರಿಕೊಂಡಿದೆ. ಈ ರೀತಿಯ ಪರಿಸ್ಥಿತಿ ಇರುವಾಗ ರಾಜ್ಯ ಸರ್ಕಾರ ನಮ್ಮ ಪ್ರಯಾರಿಟಿಸ್‌ನ್ನು ಬದಲಾವಣೆ ಮಾಡಬೇಕಾಗಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ಯೋಚನೆ ಮಾಡಲೇಬೇಕಾಗಿದೆ. 1985-86ರಲ್ಲಿ ನಮ್ಮ ಸರ್ಕಾರವೇ ಪ್ರಯಾರಿಟಿಗಳನ್ನು ಬದಲಾವಣೆ ಮಾಡುವ ಮೂಲಕ ಸಾಕಷ್ಟು ಹಣವನ್ನು ಒದಗಿಸಲಿಕ್ಕೆ ಪ್ರಯತ್ನವನ್ನು ಮಾಡಿತ್ತು. ಅದೇ ರೀತಿ ಈಗಲೂ ಮಾಡಬೇಕಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರ ಕೂಡ ಇದಕ್ಕೆ ಸ್ಪಂದಿಸಬೇಕು. ಇಂದು ದೇಶದಲ್ಲಿ ಅನೇಕ ಕಡೆ

ಪ್ರಕೃತಿಯ ಏಕೋಪದಿಂದಾಗಿ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿರುವುದು ಎಲ್ಲರಿಗೂ ಗೊತ್ತಿದೆ. ಗುಜರಾತ್, ಒರಿಸ್ಸಾ ಮತ್ತು ಆಂಧ್ರಪ್ರದೇಶಗಳಲ್ಲಿ ಪ್ರಕೃತಿಯ ಏಕೋಪದಿಂದಾಗಿ ಕೆಟ್ಟ ಪರಿಣಾಮವಾದಾಗ ಗುಜರಾತ್ ಹಾಗೂ ಆಂಧ್ರಪ್ರದೇಶಗಳಲ್ಲಿ ಹಣಕಾಸಿನ ನೆರವನ್ನು ಕೊಡಲು ಹಾಗೂ ಇನ್ನಿತರ ಮೂಲಭೂತ ವ್ಯವಸ್ಥೆಗಳನ್ನು ಮಾಡಲು ಹಲವಾರು ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಸರ್ಕಾರ ಹೆಚ್ಚಿನ ನೆರವಿಗೆ ಮುಂದಾಗಿ ಬಂದವು. ಗುಜರಾತ್‌ನಲ್ಲಿ ಭೂಕಂಪದಿಂದಾಗಿ ಕೆಟ್ಟ ಪರಿಣಾಮವಾದಾಗ ಕೇಂದ್ರ ಸರ್ಕಾರ ತನ್ನಲ್ಲಿದ್ದ ಎಲ್ಲಾ ಸಂಪನ್ಮೂಲಗಳಿಂದಲೂ ಅಲ್ಲಿಗೆ ನೆರವನ್ನು ಕೊಡಲು ಕಾರ್ಯಕ್ರಮ ತೆಗೆದುಕೊಂಡಿತು. ಅಲ್ಲಿ ಎಂ.ಪಿ.ಗಳಿಗೆ ನೀಡುವ ಪ್ರದೇಶಾಭಿವೃದ್ಧಿ ಹಣವನ್ನು ಕೂಡ ಡೈವರ್ಟ್ ಮಾಡುವ ಕ್ರಮ ತೆಗೆದುಕೊಂಡರು. ಸಡಕ್ ಯೋಜನೆಯ ಹಣವನ್ನೂ ಕೂಡ ಅಲ್ಲಿಗೆ ಡೈವರ್ಟ್ ಮಾಡಿ ಹಣವನ್ನು ಒದಗಿಸಿಕೊಡುವ ಕ್ರಮ ತೆಗೆದುಕೊಳ್ಳುವಲ್ಲಿ ಮುಂದಾದರು. ಒಟ್ಟಾರೆ ದುರಂತಕ್ಕೊಳಗಾದ ಪ್ರದೇಶವನ್ನು ರೀ-ಕನ್‌ಸ್ಟ್ರಕ್ಟ್ ಮಾಡುವ ಪ್ರಯತ್ನ ನಡೆದಿದೆ. ಆದರೆ ಒರಿಸ್ಸಾದಲ್ಲೂ ಕೂಡ ಚಂಡಮಾರುತದಿಂದ ದುರಂತವಾದಾಗ ಇದೇ ರೀತಿಯಲ್ಲಿ ನೆರವನ್ನು ನೀಡಲು ಕೇಂದ್ರ ಸರ್ಕಾರ ಗಮನ ಹರಿಸಲಿಲ್ಲ. ಒಂದು ರೀತಿಯಲ್ಲಿ ತಾರತಮ್ಯ ಮಾಡಿದಂತೆಯೇ ಆಗಿದೆ. ಇನ್ನು ಮೊನ್ನೆ ಆಂಧ್ರಪ್ರದೇಶದಲ್ಲಿ ಪ್ರವಾಹವಾದಾಗ ಪ್ರಧಾನಮಂತ್ರಿಗಳೇ ಆ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಹಣಕಾಸನ್ನು ಒದಗಿಸುವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿಯಲ್ಲಿಯೇ ಕರ್ನಾಟಕ ರಾಜ್ಯಕ್ಕೂ ಹಣಕಾಸಿನ ನೆರವನ್ನು ನೀಡಬೇಕು. ಅವರು ಕೊಡುವುದಿಲ್ಲವೆಂದು ನಾನು ಹೇಳುತ್ತಿಲ್ಲ. ತಾರತಮ್ಯ ಧೋರಣೆಯನ್ನು ಅನುಸರಿಸಬಾರದು ಎಂದು ನಾನು ಹೇಳಿದೆ. ಇಂದು ಕೇಂದ್ರ ಸರ್ಕಾರದಿಂದ ಎರಡು ರೀತಿಯಲ್ಲಿ ಹಣಕಾಸಿನ ನೆರವು ಬರಬೇಕಾಗಿದೆ. ಇದು ಅಡ್ವಾನ್ಸ್ ಪ್ಲಾನ್ ಅಸಿಸ್ಟೆನ್ಸ್ ಹಾಗೂ ನೇರವಾಗಿ ನೆರವನ್ನು ಕೊಡುವ ಮೂಲಕ ಬರುತ್ತದೆ. ಇದನ್ನು ಬಹಳ ಹೆಚ್ಚಿನ ಪ್ರಮಾಣದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಒದಗಿಸಬೇಕು. ಏಕೆಂದರೆ ಬಹಳ ಭೀಕರವಾದ ಬರಗಾಲ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬಂದಿದೆ. ಆದುದರಿಂದ ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೂಡ ಹೆಚ್ಚು ಗಮನಹರಿಸಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ಇಂದು ಶೇಕಡ 70ರಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಇದರಲ್ಲಿ ಸಣ್ಣ ರೈತರು, ದೊಡ್ಡ ರೈತರು, ಕೃಷಿ ಕೂಲಿಕಾರರು ಇದ್ದಾರೆ. ಇದರಲ್ಲಿ ಸುಮಾರು ಶೇಕಡ 30 ರಷ್ಟು ಕೃಷಿ ಕೂಲಿಕಾರರೇ ಇದ್ದಾರೆ. ಇವರುಗಳ ಜೀವನ ಕೃಷಿಯ ಮೇಲೆಯೇ ನಿಂತಿದೆ. ಇಂದು ಮೂಲ ರೈತರ ಪರಿಸ್ಥಿತಿ ಕೃಷಿ ಕೂಲಿಕಾರರಿಂಗಿಂತ ಹೆಚ್ಚು ಕೆಟ್ಟ ಪರಿಸ್ಥಿತಿಯದ್ದಾಗಿದೆ ಎಂದರೆ ತಪ್ಪಾಗುವುದಿಲ್ಲ. ಇಂದು ಸರ್ಕಾರ ಕೃಷಿ ಕಾರ್ಮಿಕರಿ ನೆರವಿಗೆ ಬರುವ ಯೋಜನೆ ಇರುವುದರಿಂದ ಕೃಷಿ ಕಾರ್ಮಿಕರಿಗೆ ಆರ್ಥಿಕವಾಗಿ

ಹೊಡೆತ ಬಿದ್ದಿಲ್ಲವೆಂದರೆ ತಪ್ಪಾಗುವುದಿಲ್ಲ. ಆದರೆ ಕೃಷಿಯ ಮೇಲೆಯೇ ಅವಲಂಬಿತವಾಗಿರುವ ಸಣ್ಣ ರೈತರು ಹಾಗೂ ದೊಡ್ಡ ರೈತರುಗಳಿಗೆ ಯಾವುದೇ ರೀತಿಯ ಅನುಕೂಲತೆಗಳು ಇವೊತ್ತು ಇಲ್ಲ. ಅದು ಬೆಳೆಗಳ ಬೆಲೆಯ ದೃಷ್ಟಿಯಿಂದ ಆಗಿರಬಹುದು, ಬೆಳೆ ಬೆಳೆಯಲು ಪಡೆಯಬೇಕಾದ ಸಾಲದ ವ್ಯವಸ್ಥೆಯ ದೃಷ್ಟಿಯಿಂದಾಗಿರಬಹುದು. ಇಂದು ರೈತರು ಪಡೆದುಕೊಂಡ ಸಾಲವನ್ನು ಹಿಂತಿರುಗಿಸುವುದಕ್ಕೆ ಸಾಧ್ಯವಾಗಿಲ್ಲ. ಹೀಗಿರುವಾಗ ಅವರಿಗೆ ಮತ್ತೆ ಸಾಲ ಸಿಗುವ ವ್ಯವಸ್ಥೆ ಇಲ್ಲವೆ ಇಲ್ಲ. ಇವರಿಗೆ ಖಾಸಗಿಯವರಿಂದ ಸಾಲ ದೊರೆಯುವ ಪರಿಸ್ಥಿತಿ ಇಂದಿಲ್ಲ. ಹೀಗಿರುವಾಗ ಬರಗಾಲದ ದವಡೆಗೆ ಸಿಕ್ಕ ರೈತರು ಮತ್ತೆ ಮೇಲೇಳಲು ಸುಮಾರು ವರ್ಷಗಳೇ ಬೇಕಾಗುತ್ತದೆ. ಇವೊತ್ತು ಸಾಲವನ್ನು ಕಡ್ಡಾಯವಾಗಿ ವಸೂಲಿ ಮಾಡುವ ವ್ಯವಸ್ಥೆ ಇದೆ. ಆದರೆ ರೈತರು ಸಾಲಗಳನ್ನು ತೀರಿಸುವುದಕ್ಕೆ ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದಾರೆ. ರೈತರಿಗೆ ಬೇರೆ ಕಡೆಯಿಂದ ಸಾಲ ದೊರೆಯುವುದೂ ಕೂಡ ಆಗದಿರುವುದರಿಂದ ಇಂದು ಹಲವಾರು ಕಡೆಗಳಲ್ಲಿ ರೈತರು ಜೀವನ ನಿರ್ವಹಣೆಯನ್ನು ಮಾಡುವುದಕ್ಕೂ ಕೂಡ ಆಗದ ಪರಿಸ್ಥಿತಿ ಇದೆ. ನಮ್ಮ ಪ್ರದೇಶದಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಹೀಗಿರುವಾಗ ವಸೂಲಾತಿ ಹೇಗಾಗಬೇಕು? 1980ರ ದಶಕದಲ್ಲಿ ಇದೇ ಹಿನ್ನೆಲೆ ಇದ್ದಾಗ ರೈತರ ಚಳುವಳಿಯಾಗಿತ್ತು. ಇದನ್ನು ಸದನದ ಗಮನಕ್ಕೆ ನಮ್ರವಾಗಿ ಹೇಳಬಯಸುತ್ತೇನೆ. ಆ ದೃಷ್ಟಿಯಿಂದ ಇಂದು ರೈತರು ಸಾಲದ ಹೊರೆಯಿಂದ ಹೊರಬಂದು ಕನಿಷ್ಟ ಅವರು ಜೀವನ ನಡೆಸುವುದಕ್ಕಾದರೂ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ವಿರೋಧ ಪಕ್ಷದ ಸದಸ್ಯರುಗಳು ಹೇಳಿದ ಹಾಗೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದಾಗಲಿ ಅಥವಾ ಸಾಲವನ್ನೇ ಮನ್ನಾ ಮಾಡಿದರೂ ಪರವಾಗಿಲ್ಲ. ನಾನು ಇದನ್ನು ವಿರೋಧ ಮಾಡುವುದಿಲ್ಲ. ಒಟ್ಟಾರೆಯಾಗಿ ರೈತರು ಬದುಕುವುದಕ್ಕೆ ಅನುಕೂಲ ಮಾಡಿಕೊಡಬೇಕು. ಈಗಾಗಲೇ ಡಬ್ಲ್ಯೂ.ಟಿ.ಒ.ನಿಂದ ರೈತ ತತ್ತರಿಸಿಹೋಗಿದ್ದಾನೆ. ಇದರ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿಯೇ ಚರ್ಚೆಯಾಯಿತು. ಈ ಎಲ್ಲಾ ರೀತಿಯಿಂದ ತತ್ತರಿಸಿಹೋಗಿರುವ ರೈತರು ಜೀವನ ನಡೆಸುವುದಕ್ಕೆ ಸರ್ಕಾರ ಅನುಕೂಲ ಮಾಡಿಕೊಡಲು ಮುಂದೆ ಬರಬೇಕೆಂದು ಹೇಳಬಯಸುತ್ತೇನೆ. ಇಂದು ರೈತ ಆತ್ಮಹತ್ಯೆ ಮಾಡಿಕೊಂಡಾಗ ಆರ್ಥಿಕವಾಗಿ ಸಬಲರಾದಂಥವರು ಬಹಳ ತಾತ್ಸಾರದಿಂದ ಅವನು ಸಾಲ ಮಾಡಿಕೊಂಡಿದ್ದ, ತೀರಿಸುವುದಕ್ಕೆ ಆಗದೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಹೀಗಿರುವಾಗ ಅವನ ಕುಟುಂಬದವರಿಗೇಕೆ ಪರಿಹಾರ ಕೊಡಬೇಕು ಎಂದು ಹೇಳುವವರು ಇದ್ದಾರೆ. ಇಂದು ಆ ದೃಷ್ಟಿಕೋನ ಸಬಲರಿಂದ ಹೋಗಬೇಕು. ಬಹುತೇಕವಾಗಿ ಆತ್ಮಹತ್ಯೆ ಪ್ರಕರಣಗಳು ಬದುಕಿನಲ್ಲಿ ನಿರಾಶೆಯಾದಾಗ, ಬೇರೆ

ದಾರಿಯೇ ಕಾಣದಿದ್ದಾಗ, ಸಾಲದ ಹೊರೆಯ ಭಾರವನ್ನು ನಿಭಾಯಿಸಲು ಆಗದೇ ಇದ್ದಾಗ ಮಾತ್ರ ಆತ್ಮಹತ್ಯೆಗೆ ಜನರು ಮುಂದಾಗುತ್ತಾರೆ. ಇಂದು ಈ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ರೈತ ವರ್ಗ ಬಂದಿದೆ. ಇಂಥವರ ಮೇಲೆ ಸರ್ಕಾರ ಅನುಕಂಪ ತೋರಿಸುವ ಧೋರಣೆಯನ್ನು ಅನುಸರಿಸಬೇಕು. ಇಂದು ನನ್ನ ಕ್ಷೇತ್ರದಲ್ಲಿ ಸಾಲದ ಸಲುವಾಗಿಯೇ ಮೂರು ಪ್ರಕರಣಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರು ತೆಗೆದುಕೊಂಡ ಸಾಲವನ್ನು ಮೊದಲ ವರ್ಷದಲ್ಲಿ ತೀರಿಸಲು ಸಾಧ್ಯವಾಗಲಿಲ್ಲ. ಮುಂದಿನ ವರ್ಷವಾದರೂ ಕೊಡೋಣವೆಂದು ಕೊಂಡರು, ಆದರೆ ಆ ವರ್ಷವೂ ಕೂಡ ಬೆಳೆ ಬರದೇ ಸಾಲ ತೀರಿಸಲು ಇವರಿಗೆ ಸಾಧ್ಯವಾಗಲಿಲ್ಲ. ಇವರೆಲ್ಲರಿಗೂ ಸಮಾಜದಲ್ಲಿ ಮರ್ಯಾದೆ ಇತ್ತು. ಸಾಲವನ್ನು ತೀರಿಸಲು ಇವರಿಗೆ ಸಾಧ್ಯವಾಗಲೇ ಇಲ್ಲವಾದ ಕಾರಣ ತಮ್ಮ ಮರ್ಯಾದೆ ಹೋಗುತ್ತದೆ, ಬಹಳಷ್ಟು ಅಪಮಾನವಾಗುತ್ತದೆ ಎಂದು ನಿರ್ಧರಿಸಿ ಸಾಲ ತೀರಿಸಲು ಬೇರೆ ದಾರಿಯೇ ಇಲ್ಲವೆಂದಾಗ ಇವರುಗಳು ಆತ್ಮಹತ್ಯೆ ಮಾಡಿಕೊಳ್ಳುವ ಕೆಟ್ಟ ಧೈರ್ಯಕ್ಕೆ ಮುಂದಾದರು. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ನಾನು ಹೇಳಬಯಸುತ್ತೇನೆ. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಇದನ್ನು ಪ್ರಸ್ತಾಪ ಮಾಡಿದ್ದರು. ಒಂದು ಘಟನೆಯಲ್ಲಿ ಗಾಯಕ್‌ವಾಡ್ ಎನ್ನುವಂಥ ವ್ಯಕ್ತಿ ಸಾಲವನ್ನು ಪಡೆದಿದ್ದ. ಈತ ಒಳ್ಳೆಯ ಗುಣವಂತ ಹಾಗೂ ಸಮಾಜದಲ್ಲಿ ಮರ್ಯಾದೆಯನ್ನು ಸಂಪಾದಿಸಿದವನೇ ಆಗಿದ್ದ. ಅವನಿಗೆ ಆರು ಎಕರೆ ಜಮೀನು ಇತ್ತು.

6.10 ಪಿಎಂ

ದುರ್ದೈವಕ್ಕೆ ಆ ಆರು ಎಕರೆ ಜಮೀನು ಅವನ ಹೆಂಡತಿಯ ತಾಯಿಯ ಹೆಸರಿನಲ್ಲಿ ಇತ್ತು. ಹೆಂಡತಿಯ ಲಗ್ನದಿಂದಾಗಿ ಅವನು ಅಲ್ಲಿಯೇ ಹೋಗಿ ಅವನ ಅತ್ತೆಯ ಮನೆಯಲ್ಲಿ ಇರುತ್ತಿದ್ದ ಕಾರಣಾಂತರದಿಂದ ಆ ಜಮೀನು ಅವನ ಹೆಸರಿಗೆ ವರ್ಗಾವಣೆ ಆಗಿರಲಿಲ್ಲ. ಆದರೆ ಆ ಮನೆಯ ಹಿರಿತನ ಮಾಡುವವನು, ಯಜಮಾನಿಕೆ ಮಾಡುವವನು ಅವನೇ ಆಗಿದ್ದ. ಇಲ್ಲಿ ಅಣ್ಣತಮ್ಮಂದಿರು ಅಕ್ಕತಂಗಿಯರನ್ನು ಮದುವೆ ಮಾಡಿಕೊಂಡಿದ್ದರು. ಇಬ್ಬರಿಗೂ ಸೇರಿ 12 ಎಕರೆ ಜಮೀನಿದ್ದು ಅದು ಹೆಂಡತಿಯ ತಾಯಿಯ ಹೆಸರಿನಲ್ಲಿ ಇದ್ದಂಥದ್ದಕ್ಕೆ 5 ಲಕ್ಷ ರೂಪಾಯಿ ಸಾಲ ಮಾಡಿದರು. ಇವನ ಹೆಸರಿಗೆ ಎರಡೂವರೆ ಲಕ್ಷ ಸಾಲ ಬಂತು. ಸಾಲ ಏಕಾಯಿತು ಎಂದು ಕೇಳಿದವರಿಗೆ - ಏನು ಮಾಡುವುದು ಸರ್, ನಾಲ್ಕು ವರ್ಷಗಳಿಂದ ನಮ್ಮ ಟೈಮ್ ಸರಿಯಿಲ್ಲ, ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ, ಏನು ಬೆಳೆ ಬೆಳೆದರೂ ಫಸಲು ಚೆನ್ನಾಗಿ ಬರುತ್ತಿಲ್ಲ, ಬಂದ ಫಸಲಿಗೂ ಬೆಲೆ ಇಲ್ಲ ಹೀಗಾಗಿ ಸಾಲ ಮಾಡಬೇಕಾಯಿತು ಎಂದು ಹೇಳುತ್ತಿದ್ದ

ಆ ಸಾಲ ತೀರಿಸುವುದಕ್ಕಾಗಿ ಆ ಆರು ಎಕರೆ ಜಮೀನನ್ನು ಮಾರಿದ. ಆ ಬಂದ ಹಣದಲ್ಲಿ ಸ್ವಲ್ಪ ಸಾಲ ತೀರಿಸಿದ. ಆದರೂ ಈ ಸಾಲ ಮುಗಿಯುವುದಿಲ್ಲವೆಂದು ಬಹಳ ಮಾನಸಿಕವಾಗಿ ನೊಂದು, ಏಕೆಂದರೆ ಸಾಲದ ಜೊತೆಗೆ ಐದಾರು ಜನ ಹೆಣ್ಣುಮಕ್ಕಳು, ಹೆಂಡತಿ ಹೀಗೆ ದೊಡ್ಡ ಸಂಸಾರವಾಗಿದ್ದರಿಂದ ಹೋಗಿ ನೇಣು ಹಾಕಿಕೊಂಡು ಸತ್ತ. ಆದರೆ ದುರ್ದೈವದಿಂದ ಅವನ ಹೆಸರಿನಲ್ಲಿ ಸಾಲ ಇಲ್ಲ, ಅವನ ಹೆಸರಿನಲ್ಲಿ ಜಮೀನು ಇಲ್ಲ, ಇದರಿಂದ ಅವನಿಗೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುವಂಥ ಆ ದೃಷ್ಟಿಕೋನ ಬದಲಾವಣೆ ಆಗಬೇಕು. ಮೂರು ಪ್ರಕರಣಗಳಲ್ಲಿ ಕೂಡ ಇದೇ ರೀತಿ ಆಗಿದೆ. ಆದ್ದರಿಂದ ಸಹಾಯ ಯಾವ ರೀತಿಯಾಗಿ ಮಾಡುತ್ತೀರೋ ಗೊತ್ತಿಲ್ಲ, ಇವುಗಳನ್ನು ತಾಂತ್ರಿಕವಾಗಿ ನೋಡದೆ ಮಾನವೀಯ ದೃಷ್ಟಿಯಿಂದ ನೋಡಿ ಅವರಿಗೆಲ್ಲ ಮುಕ್ತವಾಗಿ ಸಹಾಯ ಮಾಡಬೇಕೆಂದು ವಿನಂತಿಸುತ್ತಾ, ಹಾಗೆಯೇ ಮೇವಿನ ದಾಸ್ತಾನು ಆಗಲಿ, ಕುಡಿಯುವ ನೀರನ್ನು ಒದಗಿಸುವುದಾಗಲಿ, ಇವುಗಳನ್ನು ಅತೀ ಶೀಘ್ರದಲ್ಲಿಯೇ ಮಾಡಬೇಕು. ಜನಜಾನುವಾರುಗಳು ಬಹಳ ಕಷ್ಟದಲ್ಲಿದ್ದಾರೆ. ಮತ್ತು ಆ ಪ್ರದೇಶದಲ್ಲಿ ಅಲ್ಪಸ್ವಲ್ಪ ನೀರಾವರಿ ಬಂದಿರುವುದನ್ನು ಉಪಯೋಗಿಸಿ ಕೃಷಿ ಮತ್ತು ನೀರಾವರಿ ಇಲಾಖೆಯವರು ಸೇರಿ ಎಲ್ಲಾದರೂ ಒಂದು ಕಡೆ ಸ್ವಲ್ಪಮಟ್ಟಿಗೆ ಬೆಳೆ ಬೆಳೆಯಲಿಕ್ಕೆ ಅವಕಾಶ ಮಾಡುವಂಥ ಪ್ರಯತ್ನವನ್ನು ಮಾಡಬೇಕು, ಮತ್ತು ಬೆಳೆದಂಥ ಬೆಳೆಗೆ ಒಳ್ಳೆಯ ಬೆಲೆಯನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದು, ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಹಾಂತೇಶ್ ಎಸ್.ಕೌಜಲಗಿ(ಬೈಲಹೊಂಗಲ): ಮಾನ್ಯ ಚೇರ್‌ಮನ್-ರವರೆ, ಈಗಾಗಲೇ ಮಾನ್ಯ ಸದಸ್ಯರುಗಳು ನಿನ್ನೆಯಿಂದ ಬರಗಾಲ ಪರಿಸ್ಥಿತಿಯ ಬಗ್ಗೆ ಅನೇಕ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿರುತ್ತಾರೆ. ಸುಮಾರು 21 ಜಿಲ್ಲೆಗಳ ಹೆಚ್ಚಿನ ಭಾಗಗಳಲ್ಲಿ ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕಾಗಿರುವುದು ನಮ್ಮ ಕಣ್ಣಮುಂದಿದೆ. ಅದರಲ್ಲಿ ಬೆಳಗಾಂ ಜಿಲ್ಲೆ ಕೂಡ ಸೇರಿದೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಶೇಕಡ 70ಕ್ಕಿಂತ ಹೆಚ್ಚಿನ ರೈತರು ಒಣ ಬೇಸಾಯ ಮಾಡುತ್ತಿದ್ದು ಅವರೆಲ್ಲ ಸಂಪೂರ್ಣವಾಗಿ ಮಳೆಯ ಮೇಲೆ ಅವಲಂಬಿತರಾಗಿದ್ದಾರೆ. ಈ ಭಾಗದಲ್ಲಿ ಮಳೆ ಬಾರದಿರುವುದರಿಂದ ರೈತರು ಹಾಗೂ ಕೂಲಿ ಕಾರ್ಮಿಕರು ಅತ್ಯಂತ ಸಂಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದು ಅವರು ಬೇರೆ ಕಡೆಗೆ ವಲಸೆ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಸರ್ಕಾರದವರು ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಪರಿಹಾರ ಕಾಮಗಾರಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಅಥವಾ ಮುಂದೆ ಈ ರೀತಿಯಾದಂಥ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದರೆ ಬಹುಶಃ

ರೈತರು ಸ್ವಲ್ಪಮಟ್ಟಿಗೆ ನಿಟ್ಟುಸಿರು ಬಿಡುವಂಥ ಪರಿಸ್ಥಿತಿ ಉಂಟಾಗುತ್ತಿತ್ತು. ನಮ್ಮ ಭಾಗದಲ್ಲಿ ರೈತರು ಹೆಚ್ಚಾಗಿ ಹೆಸರು, ಶೇಂಗಾ, ಸೋಯಾಬಿನ್ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ನಮ್ಮಲ್ಲಿ ಮಳೆ ಕಡಿಮೆ ಆಗಿದ್ದರಿಂದ ಹೆಸರು ಕಾಳು ಬೆಳೆಯುವವರು ಕೇವಲ ಶೇಕಡ 10ರಷ್ಟು ಮಾತ್ರ ಬಿತ್ತನೆ ಮಾಡಿದ್ದು ಅದು ಸಹ ಸಂಪೂರ್ಣವಾಗಿ ನಾಶವಾಗಿದೆ. ಬರಗಾಲ ಪರಿಸ್ಥಿತಿಯ ಬಗ್ಗೆ ನಿನ್ನೆಯಿಂದ ಈ ಸದನದಲ್ಲಿ ಚರ್ಚೆ ಮಾಡುತ್ತಿರುವುದನ್ನು ನೋಡಿದರೆ ಬಹುಶಃ ಒಬ್ಬರ ಮೇಲೆ ಇನ್ನೊಬ್ಬರು ಬೊಟ್ಟು ಮಾಡಿ ತೋರಿಸುವಂಥ ಚರ್ಚೆಯನ್ನು ನಾವು ನೋಡುತ್ತಿದ್ದೇವೆ. ಅಂದರೆ ರಾಜ್ಯಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ, ಕೇಂದ್ರ ಸರ್ಕಾರದ ಪರವಾಗಿ ರಾಜ್ಯ ಸರ್ಕಾರದ ಮೇಲೆ ಬೊಟ್ಟು ಮಾಡಿ ತೋರಿಸುವಂಥ ಚರ್ಚೆಯನ್ನು ನಾವು ನೋಡುತ್ತಿದ್ದೇವೆ. ನಾವು ಒಬ್ಬರ ಮೇಲೆ ಒಬ್ಬರು ಬೊಟ್ಟು ಮಾಡಿ ತೋರಿಸುವುದನ್ನು ಬಿಟ್ಟು ರೈತರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವ ಹಾಗೆ ಇಲ್ಲಿ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಒಳ್ಳೆಯ ಪರಿಹಾರವನ್ನು ಕಂಡುಕೊಳ್ಳಲಿಕ್ಕೆ ನಾವು ಎಲ್ಲಾ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ರಾಜ್ಯ ಸರ್ಕಾರವನ್ನು ಕೋರುತ್ತೇನೆ. ಬರಗಾಲ ಪರಿಸ್ಥಿತಿ ಎಂದ ಕೂಡಲೇ ರೈತರ ಸಮಸ್ಯೆ ಜೊತೆಗೆ ಎಲ್ಲಾ ಗ್ರಾಮಗಳಲ್ಲಿ ಕೂಡ ಕುಡಿಯುವ ನೀರಿನ ಸಮಸ್ಯೆ ನಮ್ಮ ಕಣ್ಣಮುಂದೆ ಬರುತ್ತದೆ. ನಮ್ಮ ಭಾಗದಲ್ಲಿ ಎಂದೂ ಆಗದಂಥ ಕುಡಿಯುವ ನೀರಿನ ಸಮಸ್ಯೆ ಈ ಸಲ ಉಂಟಾಗಿದೆ. ಏಕೆಂದರೆ ಬಹುಶಃ 25 ವರ್ಷಗಳಲ್ಲಿ ಮಲಪ್ರಭಾ ನದಿ ಈ ರೀತಿಯಾಗಿ ಬತ್ತಿ ಹೋಗಿರುವುದು ನಾವು ನೋಡಿಲ್ಲ. ಮಲಪ್ರಭಾ ನದಿ ಎಲ್ಲಿದೆ ಎಂದು ಹುಡುಕುವಂಥ ಪರಿಸ್ಥಿತಿ ಈ ಸಲ ಉಂಟಾಗಿದೆ. ಅನೇಕ ಕಡೆಗಳಲ್ಲಿ ನೀರಿನ ಕೊರತೆ ಉಂಟಾಗಿದೆ. ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರನ್ನು ಬೇರೆ ಬೇರೆ ಕಡೆಗೆ ಹೋಗಿ ತರುವಂಥ ಪರಿಸ್ಥಿತಿ ಉಂಟಾಗಿದೆ. ಒಂದು ಕೊಡ ಕುಡಿಯುವ ನೀರು ಸಿಕ್ಕಿದರೆ ಸಾಕೆಂದು ರಾತ್ರಿ ಎರಡು ಗಂಟೆಗೆ ಎದ್ದು ಜನರು ಅಡ್ಡಾಡುವಂಥ ಪರಿಸ್ಥಿತಿ ಉಂಟಾಗಿದೆ. ಕೆಲವೊಂದು ಗ್ರಾಮಗಳಲ್ಲಿನ ಬಾವಿಗಳಿಗೆ ಸರ್ಕಾರದಿಂದ ಗಾಡಿಗಳ ಮುಖಾಂತರ ನೀರನ್ನು ಸರಬರಾಜು, ಹಾಕಿ ಬರುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಒಂದೊಂದು ಕೊಡ ನೀರಿಗೋಸ್ಕರ ಆ ಬಾವಿಗೆ ಇಳಿದು ನೀರು ತುಂಬುವಂಥ ಪರಿಸ್ಥಿತಿ ನಮ್ಮ ಎದುರಿಗೆ ಕಂಡುಬರುತ್ತಿದೆ. ಅಂದರೆ ಈಗಲೇ ಈ ರೀತಿಯಾದಂಥ ಸಮಸ್ಯೆ ಇದ್ದರೆ ಮುಂದೆ ಯಾವ ರೀತಿಯಾದಂಥ ಸಮಸ್ಯೆಯನ್ನು ನಾವು ಕಾಣಬಹುದೆಂಬುದರ ಬಗ್ಗೆ ಎಚ್ಚೆತ್ತುಕೊಂಡು ಕುಡಿಯುವ ನೀರಿನ ಸಲುವಾಗಿ ಹೆಚ್ಚಿನ ಸೌಕರ್ಯವನ್ನು ಒದಗಿಸಬೇಕೆಂದು ನಾನು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಈಗಾಗಲೇ ರೈತರು ಯಾವ ರೀತಿಯಾದಂಥ ಪರಿಸ್ಥಿತಿಯಲ್ಲಿ ಇದ್ದಾರೆನ್ನುವ ಬಗ್ಗೆ ಸನ್ಮಾನ್ಯ ಯಾವಗಲ್ ಅವರು ಬಹಳ ಚೆನ್ನಾಗಿ ಮಾತನಾಡಿದರು. 1983ರಲ್ಲಿ ನಾವು ಬರಗಾಲ

ಪರಿಸ್ಥಿತಿಯನ್ನು ಎದುರಿಸುವ ಸಂದರ್ಭದಲ್ಲಿ ಅವರು ಆಗಿನ ಸರ್ಕಾರದಲ್ಲಿ ಸಚಿವರಾಗಿದ್ದು ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿರುವುದರಿಂದ, ಈಗ ಯಾವ ಯಾವ ರೀತಿಯಾಗಿ ಕೆಲಸಗಳನ್ನು ಮಾಡಬೇಕೆಂದು ಅತ್ಯಂತ ಒಳ್ಳೆಯ ಸಲಹೆಗಳನ್ನು ಕೊಟ್ಟರು. ಬಹುಶಃ ಮನುಷ್ಯ ಎಲ್ಲಿ ಹೋದರೂ ಬದುಕಬಹುದು ಆದರೆ ಪ್ರಾಣಿಗಳಿಗೆ ಮಾತ್ರ ಬಹಳ ಕಷ್ಟ ಆಗುತ್ತದೆ. ನಮ್ಮ ಭಾಗದಲ್ಲಿ ಮಳೆ ಆಗದಿರುವುದರಿಂದ ರೈತರ ಮನೆಗಳಲ್ಲಿ ಒಬ್ಬೊಬ್ಬರು ಮಾತ್ರ ತಮ್ಮ ತಮ್ಮ ದನಗಳನ್ನು ನೋಡಿಕೊಳ್ಳುವ ಸಲುವಾಗಿ ಉಳಿದು ಬಾಕಿ ಎಲ್ಲಾ ಜನರು ಕೂಲಿ ಕೆಲಸಕ್ಕಾಗಿ ಗೋವಾ, ಮಹಾರಾಷ್ಟ್ರ ಮುಂತಾದ ಕಡೆಗಳಿಗೆ ಹೋಗುತ್ತಾರೆ. ಒಬ್ಬೊಬ್ಬರು ಏಕೆ ಮನೆಗಳಲ್ಲಿ ಉಳಿಯುತ್ತಾರೆಂದರೆ ತಮ್ಮ ದನಕರುಗಳನ್ನು ಬಿಟ್ಟು ಹೋಗುವ ಹಾಗಿಲ್ಲ ಅಥವಾ ತೆಗೆದುಕೊಂಡು ಹೋಗುವಂಥ ಪರಿಸ್ಥಿತಿಯಲ್ಲೂ ಇಲ್ಲ. ಅದಕ್ಕೋಸ್ಕರ ಸರ್ಕಾರದವರು ತಾಲ್ಲೂಕು ಮಟ್ಟ ಅಥವಾ ಜಿಲ್ಲಾ ಮಟ್ಟದಲ್ಲಿ ಗೋಶಾಲೆಗಳನ್ನು ತೆಗೆದು ಆ ಪ್ರಾಣಿಗಳಿಗೆ ಮೇವು ಹಾಗೂ ಇನ್ನಿತರ ಸೌಕರ್ಯಗಳನ್ನು ಒದಗಿಸುವಂಥ ಕಾರ್ಯವನ್ನು ಮಾಡಬೇಕು. ಜೊತೆಗೆ ರೈತರ ಸಾಲದ ಬಡ್ಡಿ ಮನ್ನಾ ಮಾಡಬೇಕು ಹಾಗೆಯೇ ರೈತರಿಗೆ ಮತ್ತು ಕೂಲಿ ಕಾರ್ಮಿಕರಿಗೆ ಅನುಕೂಲವಾಗುವ ಹಾಗೆ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಸರ್ಕಾರದವರು ಸಣ್ಣ ನೀರಾವರಿ ಇಲಾಖೆ ಮುಖಾಂತರ ಕೆರೆಗಳಿಂದ ಹೂಳೆತ್ತುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಬಹುಶಃ ಆ ಕೆಲಸವನ್ನು ರೈತರು ಅಥವಾ ಅಲ್ಲಿದ್ದ ಜನರ ಪಾಲ್ಗೊಳ್ಳುವಿಕೆಯ ಮುಖಾಂತರ ಮಾಡಿಸಿದರೆ ಬರಗಾಲದ ಪ್ರದೇಶದಲ್ಲಿನ ಆ ಜನರು ಸಹ ಬದುಕುತ್ತಾರೆ. ನಮ್ಮ ನೀರಿನ ಜಲದ ಮಟ್ಟವನ್ನು ಹೆಚ್ಚಿಗೆ ಮಾಡಿದ ಹಾಗೆ ಆಗುತ್ತದೆ, ಕೂಡಲೇ ಆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ಅನೇಕ ಸದಸ್ಯರು ಮಾತನಾಡುವವರಿವುದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೆ ರೈತರ ಮೇಲೆ ವಿಧಿಸಿರುವ ಬಡ್ಡಿಯನ್ನು ಮನ್ನಾ ಮಾಡಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮಾಡಿ ಅದಕ್ಕೆ ಬೇಕಾಗುವ ಎಲ್ಲಾ ಯೋಜನೆಗಳನ್ನು ಕೂಡಲೇ ಪ್ರಾರಂಭ ಮಾಡಬೇಕು, ಮತ್ತು ಪ್ರಾಣಿಗಳ ಸಲುವಾಗಿ ಒಂದು ಗೋಶಾಲೆಯನ್ನು ಪ್ರಾರಂಭ ಮಾಡಬೇಕು. ಸರ್ಕಾರದವರು ಈ ಒಂದು ಬರಗಾಲದ ಪರಿಸ್ಥಿತಿಯನ್ನು ಎದುರಿಸಲು ಶೀಘ್ರ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತಾ, ಇವತ್ತಿನ ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ.ಪಾಪಣ್ಣ(ಹುಣಸೂರು): ಮಾನ್ಯ ಛೇರ್ಮನ್‌ರವರೆ, ಇವತ್ತು ಇಡೀ ರಾಜ್ಯದಲ್ಲಿ ಬರಗಾಲ ಬಂದಿರುವ ವಿಷಯದಲ್ಲಿ ಒಂದೂವರೆ ದಿವಸಗಳಿಂದ ಇದರ ಬಗ್ಗೆ ಚರ್ಚೆಯು ನಡೆಯುತ್ತಿದೆ. ನಾನು ಸನ್ಮಾನ್ಯ ಛೇರ್ಮನ್‌ರವರ ಮುಖಾಂತರ

ಮಾನ್ಯ ಕಂದಾಯ ಮಂತ್ರಿಗಳಲ್ಲಿ ಹಾಗೂ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ, ಸರ್ಕಾರವು ಏನು ಚರ್ಚೆ ನಡೆಯುತ್ತಿರುವ ವಿಷಯದಲ್ಲಿ ನಿರ್ಲಕ್ಷ್ಯ ಹಾಗೂ ತಾತ್ಸಾರ ಮನೋಭಾವದಿಂದ ಸರ್ಕಾರ ನೋಡುತ್ತಿದೆ ಎನ್ನುವಂತಹದ್ದು ನನಗನ್ನಿಸುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ, ಇಡೀ ಒಂದು ವರ್ಷದ ಅವಧಿಯಲ್ಲಿ ಮಳೆಗಾಲ ಎಷ್ಟು ತಿಂಗಳು, ಬೇಸಿಗೆ ಎಷ್ಟು ತಿಂಗಳು, ಚಳಿಗಾಲ ಎಷ್ಟು ತಿಂಗಳು ಎನ್ನುವಂತಹದ್ದು ವಿಂಗಡಿಸಿದಾಗ ಚಳಿಗಾಲ ಮತ್ತು ಬೇಸಿಗೆಗಾಲ 5 ತಿಂಗಳು ಕಳೆದರೆ ಇನ್ನು 7 ತಿಂಗಳು ಮಾತ್ರ ಮಳೆಗಾಲಕ್ಕೆ ಉಳಿದುಕೊಳ್ಳುತ್ತದೆ. 7 ತಿಂಗಳುಗಳಲ್ಲಿ ಈಗಾಗಲೇ 8 ಮಳೆಗಳು ರೇವತಿ, ಅಶ್ವಿನಿ ಮಳೆಯಿಂದ ಹಿಡಿದು, ಪುನರ್‌ವಸು, ಪುಷ್ಯ ಹೀಗೆ 8 ಮಳೆಗಳನ್ನು ಕಳೆದಿದ್ದೇವೆ. 15 ದಿವಸಗಳು ಒಂದೊಂದು ಮಳೆಗಳಿಗೆ ಹೋದರೆ 120 ದಿವಸಗಳು ಈಗಾಗಲೇ ಕಳೆದುಹೋಗಿದೆ. ಇನ್ನು 4 ತಿಂಗಳುಗಳು ಕಳೆದರೆ ಇನ್ನು ಎರಡೂವರೆ ತಿಂಗಳುಗಳು ಮಾತ್ರ ಮಳೆಗಾಲ : ಹಿಂಗಾರು ಮಳೆ ಇರುವಂತಾದ್ದು, ಈ ಮುಖಾಂತರ ನಾನು ಅವರನ್ನು ಕೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ರೇವತಿ ಮಳೆ ಬೀಳುವಂತಹ ಸಂದರ್ಭದಲ್ಲಿ ಎಳ್ಳು ಮತ್ತು ಜೋಳವನ್ನು ಬಿತ್ತನೆ ಮಾಡುತ್ತೇವೆ. ನಮ್ಮ ಕಡೆ ಮೈಸೂರು ಜಿಲ್ಲೆಯಲ್ಲಿ ಎಳ್ಳು ಮತ್ತು ಜೋಳವನ್ನು ರೇವತಿ ಮಳೆಯಲ್ಲಿ ಬಿತ್ತುತ್ತೇವೆ. ಸುಮಾರು 10 ರಿಂದ 15 ಪರ್ಸೆಂಟ್ ನಮ್ಮ ಮೈಸೂರು ಜಿಲ್ಲೆಯಲ್ಲಿ ಬಿತ್ತನೆ ಮಾಡಿರುವುದು, ಈಗ ಅವೆಲ್ಲಾ ಸರ್ವನಾಶವಾಗಿದೆ. ಆನಂತರ ನೆಲಗಡಲೆ ಹಾಕಬೇಕು, ಎಲ್ಲೋ ಒಂದು ಕಡೆ 50 ಪರ್ಸೆಂಟ್ ಮಳೆಯಾದರೆ ನೆಲಗಡಲೆಯನ್ನು ಹಾಕುತ್ತೇವೆ ಅದು ಹೋಯಿತು. ಸುಮಾರು 4 ತಿಂಗಳುಗಳು ಮುಂಗಾರು ಮಳೆಯನ್ನು ಕಳೆದ ಮೇಲೆ ಎಳ್ಳು, ಜೋಳ, ನೆಲಗಡಲೆ, ಮುಸುಕಿನಜೋಳ, ಈ ಪದಾರ್ಥಗಳನ್ನು ಕಳೆದಿದ್ದೇವೆ. ಇನ್ನು ಈ ಎರಡೂವರೆ ತಿಂಗಳುಗಳಲ್ಲಿ ಯಾವುದಾದರೂ ಬೆಳೆಯನ್ನು ಬೆಳೆಯಬೇಕಾದರೆ ನಮ್ಮ ಭಾಗದಲ್ಲಿ ರಾಗಿ ಮತ್ತು ಹುರುಳಿ ಮಾತ್ರ. ಆ ರಾಗಿಗೆ ಕನಿಷ್ಟ 4-5 ತಿಂಗಳುಗಳು ಬೆಳೆಯಾಗಿದೆ. ಬೇಡವೆಂದರೆ 3 ತಿಂಗಳು ಇಬ್ಬನಿ ರಾಗಿಯನ್ನು ಬೆಳೆದರೆ ಒಂದು ತಿಂಗಳು ಒಟ್ಟಿಲುಪಾತಿಯನ್ನು ಹಾಕಿಕೊಳ್ಳಬೇಕು, 21 ದಿವಸದಿಂದ 28 ದಿವಸದವರೆಗೆ ರಾಗಿ ಒಟ್ಟಿಲು ಪಾತಿಯನ್ನು ಹಾಕಿಕೊಳ್ಳುತ್ತಾರೆ. ಈಗ ಮಳೆ ಬಂದರೂ ಸಹ ಒಟ್ಟಿಲು ಪಾತಿ ಹಾಕುವುದು, ನಾಟಿಯನ್ನು ಮಾಡಿ ರಾಗಿಯನ್ನು ತೆಗೆಯುತ್ತೇನೆಂದು ಗ್ಯಾರಂಟಿ ಇರುವುದಿಲ್ಲ. ಸರ್ಕಾರವು ಏತಕ್ಕಾಗಿ ತಾತ್ಸಾರವನ್ನು ಮಾಡುತ್ತಿದೆ ಎಂಬುದು ನಮಗೆ ಅರಿವಾಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ತೀರ ಬರಗಾಲ ಬಂದಂಥದ್ದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಸುಮಾರು ಒಂದೂವರೆ ತಿಂಗಳಿಗಿಂತಲೂ ಮುಂಚೆಯೇ ಒಂದು ಪತ್ರವನ್ನು ಕೊಟ್ಟಿದ್ದೇನೆ. ರೇವತಿ, ಅಶ್ವಿನಿ, ಭರಣಿ, ಕೃತಿಕಾ, ರೋಹಿಣಿ, ಮೃಗಶಿರಾ, ಆರಿದ್ರಾ ಮಳೆಯೂ ಕೂಡ ಬೀಳಲಿಲ್ಲ. ಈ ಎಲ್ಲಾ ಮಳೆಗಳು ಕೂಡ ವಿಫಲವಾಗಿದೆ ಎನ್ನುವಂತಹದನ್ನು ನಾನು ವಿಚಾರ ಮಾಡಿ ಅವರಿಗೆ ಒಂದೂವರೆ

ತಿಂಗಳಿಗಿಂತ ಮುಂಚೆಯೇ ಈಗ ಬರಗಾಲವು ಬರುತ್ತಿದೆ, ನೀವು ತಕ್ಷಣದಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು ಪತ್ರವನ್ನು ಕೊಟ್ಟಿದ್ದೇನೆ. ಈ ಸರ್ಕಾರವು ಯಾವ ರೀತಿಯಾಗಿದೆ ಎಂದರೆ ಮನೆಯು ಸುಟ್ಟು ಹೋಗುವಾಗ ಬಾವಿಯನ್ನು ತೋಡಬೇಕು ಎಂದು ಶುರು ಮಾಡುತ್ತಾರೆ. ಈಗ ನಾವು ಜುಲೈ ತಿಂಗಳ ಅಂತ್ಯವನ್ನು ಮುಟ್ಟುತ್ತಿದ್ದೇವೆ, ಈಗ ಇದರ ಬಗ್ಗೆ ಸದನದಲ್ಲಿ ಮಾನ್ಯ ಹಿರಿಯ ಸದಸ್ಯರುಗಳು ಕೂಡ ಮಾತನಾಡಿದರು. ಮುಂಗಾರು ಮಳೆ ನಮಗೆ ಮುಖ್ಯವಲ್ಲ, ಹಿಂಗಾರು ಮಳೆ ಮುಖ್ಯವೆಂದು ಏತಕ್ಕಾಗಿ ಆ ರೀತಿ ಮಾತನಾಡುತ್ತಾರೋ ಸಮರ್ಥನೆ ಮಾಡಿಕೊಳ್ಳುತ್ತಾರೋ ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಕೃಷಿ ಸಚಿವರು ಸದನದಲ್ಲಿ ಇದ್ದಾರೆ ಅವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಡಿಸಿಸಿ ಬ್ಯಾಂಕ್ ಸೊಸೈಟಿಗಳಲ್ಲಿ ಸಾಲ ಇರುವಂತಹದ್ದನ್ನು ನಾವು ಮಾರ್ಚಿ-31ರೊಳಗಾಗಿ ಕಟ್ಟಬೇಕು. ಮಾರ್ಚಿ 31ರೊಳಗಾಗಿ ನಾವು ಹಣವನ್ನು ಕಟ್ಟದಿದ್ದರೆ ನಾವೆಲ್ಲಾ ಡಿಫಾಲ್ಟರ್ ಆಗುತ್ತೇವೆ. ಎಲ್ಲಾ ಸೊಸೈಟಿಗಳು ಡಿಫಾಲ್ಟರ್ ಆಗುತ್ತಾರೆಂತ, ಅವರು ಏನು ಮಾಡುತ್ತಿದ್ದಾರೆಂದರೆ ರಿನ್ಯೂವಲ್ ಮಾಡದೆ ಹೋದರೆ ಆ ಸೊಸೈಟಿಗಳು ಎಲಿಜಿಬಿಲಿಟಿ ಬರುವುದಿಲ್ಲ, ಅಲ್ಲಿಂದ ಡಿಸಿಸಿ ಬ್ಯಾಂಕ್ ಎಲಿಜಿಬಿಲಿಟಿ ಬರುವುದಿಲ್ಲ, ಆಮೇಲೆ ಅಪೇಕ್ಸ್ ಬ್ಯಾಂಕ್ ಒಂದನ್ನು ಬಿಟ್ಟು ಎಲ್ಲಾ ಹಣವನ್ನು ಕಟ್ಟದೆ ಹೋದರೂ ಅವೆಲ್ಲವನ್ನು ರಿನ್ಯೂವಲ್ ಮಾಡಿದ್ದಾರೆ. ಕ್ರಾಪ್‌ಲೋನ್ ಎಂದು ಕೊಟ್ಟಿದ್ದಾರೆ, ಇದರ ಬಗ್ಗೆ ನಿಜವನ್ನು ಹೇಳಬೇಕಾದರೆ ನಾನು ಈ ವರ್ಷ ಹಣವನ್ನು ಕಟ್ಟುವುದಕ್ಕೆ ಆಗಲಿಲ್ಲ ಸೊಸೈಟಿಗೆ ಎಂದು ಸತ್ಯವಾಗಿ ಹೇಳುತ್ತಿದ್ದೇನೆ. ನನ್ನದನ್ನು ಅದೇ ರೀತಿಯಾಗಿ ರಿನ್ಯೂವಲ್ ಮಾಡಿದ್ದಾರೆ, ನಿಮಗೆ ಈ ಬಗ್ಗೆ ಮಾಹಿತಿ ಏನು ಸಿಗುತ್ತದೆಂದರೆ, ಸಾಲ ರಿನ್ಯೂವಲ್ ಮಾಡಿದ ಪಟ್ಟಿ ಬಂದಾಗ ಎಲ್ಲಾ ಕ್ರಾಪ್ ಲೋನ್ ತೆಗೆದುಕೊಂಡಿದ್ದಾರೆ ನಿಮಗೆ ಜಿಲ್ಲಾಧಿಕಾರಿಗಳು ಪಟ್ಟಿಯನ್ನು ಒದಗಿಸುತ್ತಾರೆ. ಆಗ ನೀವು ಅಂಕಿಅಂಶಗಳನ್ನು ತೆಗೆದುಕೊಳ್ಳುತ್ತೀರಿ. ನನ್ನದೇನೆ ರಿನ್ಯೂವಲ್ ಮಾಡಿದ್ದಾರೆ, ನನ್ನ ಪರಿಸ್ಥಿತಿ ಏನೆಂದರೆ, ಮಾವು ಗಿಡದ ಮೇಲೆ ಹಣ್ಣಾಯಿತು, ಎಲ್ಲಾ ಉದುರಿಹೋಯಿತು ಈ ವರ್ಷ ನಮಗೆ ಹಣ ಬರಲಿಲ್ಲ. ನನ್ನ ಹತ್ತಿರ 4 ಫಸಲುಗಳಿವೆ, ಅದೇನೆಂದರೆ ಮಾವು, ಅಡಿಕೆ, ತೆಂಗು ಕೋಕೋ. ಮಾವು ಗಿಡದ ಮೇಲೆ ಹಣ್ಣಾಯಿತು ಯಾರೂ ಸದ್ಯಕ್ಕೆ ಕೇಳುವವರಿಲ್ಲ, ಎರಡನೆಯದಾಗಿ ತೆಂಗಿಗೆ ನುಸಿರೋಗ ಬಂದು ಅದರ ಕಥೆಯೂ ಮುಗಿಯಿತು, ಅಡಿಕೆಗೆ ಧಾರಣೆಯು ಕಡಿಮೆ ಬಂತು, ನಮ್ಮಂತವರದೇ ಬಹಳ ಇರುವಾಗ ಇನ್ನು ಬೇರೆ ಸಣ್ಣ ರೈತರ ಗತಿ ಹೇಗಿರಬೇಕು. ಅವರು ಅದರಲ್ಲೇ ಜೀವನವನ್ನು ಮಾಡಿ, ಮನೆ ಮಂದಿ ಎಲ್ಲಾ ವ್ಯವಸಾಯವನ್ನು ಮಾಡುತ್ತಾರೆ, ರೈತನಿಗೆ ಎಂತಹ ದೌರ್ಭಾಗ್ಯವೆಂದರೆ, ಅವನ ಮನೆಯಲ್ಲಿ ನೋಡಿ ಹೆಂಡತಿ, ತಾನು, ತನ್ನ ಮಗ, ಅವನ ಮನೆಯ ನಾಯಿ, ಬೆಕ್ಕು, ಹೀಗೆ ಮನೆ ಮಂದಿಯೆಲ್ಲಾ ವ್ಯವಸಾಯವನ್ನು ಮಾಡುತ್ತಾರೆ.

ಮನೆ ಮಂದಿಯೆಲ್ಲರೂ ಇದಕ್ಕಾಗಿ ಸಾಯುತ್ತಾರೆ, ಆದರೆ ಅದೇ ಒಬ್ಬ ಸರ್ಕಾರಿ ನೌಕರಿ ಇದ್ದರೆ ಸಾಕು ಅವನ ಮಕ್ಕಳನ್ನು ತೆಗೆದುಕೊಂಡು ಬೇಕಾದಷ್ಟು ಡಿಗ್ರಿ ಹೋಲ್ಡರ್ಸ್‌ನ್ನಾಗಿ ಓದಿಸುತ್ತಾರೆ. ಒಬ್ಬನೇ ಒಬ್ಬ ಜವಾನನ ಕೆಲಸದಲ್ಲಿದ್ದರೆ ಸಾಕು ಚೆನ್ನಾಗಿ ಓದಿಸುತ್ತಾರೆ. ಆದರೆ ರೈತರು ಮನೆ ಮಂದಿಯೆಲ್ಲಾ ಕಷ್ಟಪಟ್ಟು ಕೆಲಸವನ್ನು ಮಾಡಿದರೂ ಸಹ ಒಂದು ತುತ್ತಿಗೆ ಆಗುವುದಿಲ್ಲ. ದಯಮಾಡಿ ಡಿಸಿಸಿ ಬ್ಯಾಂಕ್, ವ್ಯವಸಾಯ ಸಹಕಾರ ಸಂಘಗಳಲ್ಲಿ ರಿನ್ಯೂವಲ್ ಮಾಡಿದ್ದಾರೆ ಸ್ವಾಮಿ, ಆ ಲೆಕ್ಕವನ್ನು ತಾವು ತೆಗೆದುಕೊಳ್ಳುವುದಕ್ಕೆ ಹೋಗಬೇಡಿ ಈ ಬಗ್ಗೆ ನಾನು ಕೈಮುಗಿದು ಹೇಳುತ್ತೇನೆ. ಅವು ಆ ಬ್ಯಾಂಕಿನ ಅಡ್ಜಸ್ಟ್‌ಮೆಂಟ್‌ಗೋಸ್ಕರ ಬುಕ್‌ಬ್ಯಾಲೆನ್ಸ್ ಮಾಡುವುದಕ್ಕೋಸ್ಕರ ಮಾಡಿದ್ದಾರೆ. ಕೃಷಿ ಮಂತ್ರಿಗಳು ಬಂದಾಗ ಅವರನ್ನೂ ಸಹ ಕರೆಸುತ್ತಾರೆ, ಅವರು ಬರೆದಿರುತ್ತಾರೆ, ತಾವು ಎಷ್ಟು ಕ್ರಾಪ್ ಲೋನ್‌ನ್ನು ಕೊಟ್ಟಿದ್ದೀರಿ ಎಂದು ಕೇಳಿದರೆ ಆಗ ಅವರು ನಮ್ಮ ಬ್ಯಾಂಕಿನಿಂದ 32 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಹಾಗಿದ್ದರೆ ಕ್ರಾಪ್‌ಲೋನ್ ಕೊಟ್ಟಮೇಲೆ ಆಯಿತಲ್ಲಾ, ಹಾಕಿದ್ದೀರಾ ಎಂದು ಕೇಳಿದರೆ ಹಾಕಿದ್ದೇವೆಂದು ಹೇಳುತ್ತಾರೆ. ಅದೇ ಕೃಷಿ ಅಧಿಕಾರಿಗಳು ಪಕ್ಕದಲ್ಲಿ ಕುಳಿತುಕೊಂಡರೆ ಅವರವರು ಸ್ವಲ್ಪ ಮಾತನಾಡಿ, ಸ್ವಲ್ಪ ಏರುಪೇರು ಕೊಡುತ್ತಾರೆ. ಈ ಬಗ್ಗೆ ಸರ್ಕಾರ ಸೂಚನೆಯನ್ನು ಕೊಟ್ಟಿಗೆಯೋ ಏನೋ ಗೊತ್ತಿಲ್ಲ. ಮೊನ್ನೆ ದಿವಸ ನೋಡಲು ಆಫೀಸರ್‌ನ್ನು ಸರ್ಕಾರದಿಂದ ಕಳುಹಿಸಿದ್ದರು, ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ಎಲ್ಲವನ್ನೂ ತೋರಿಸಿದೆ. ಅಲ್ಲಿ ಪರಿಸ್ಥಿತಿಯನ್ನು ನೋಡಿದಾಗ ಅವರು ವರದಿಯನ್ನು ಕೊಡುತ್ತೇವೆಂದಿದ್ದರು, ನಮ್ಮ ಜಿಲ್ಲೆಯಲ್ಲಿ ಈ ಬರಗಾಲ ಬಂದಿರುವುದಕ್ಕೆ ಏನೇ ಕಾರ್ಯಕ್ರಮವನ್ನು ಇದುವರೆವಿಗೂ ಹಾಕಿಕೊಂಡಿರುವುದಿಲ್ಲ. ಯಾವುದೇ ಒಂದು ಸಭೆ ತಾಲ್ಲೂಕಿನಲ್ಲಾಗಲಿ, ಜಿಲ್ಲೆಯಲ್ಲಾಗಲಿ, ಮಾಡಿರುವುದಿಲ್ಲ. ಏನು ನಿಮ್ಮ ಕಷ್ಟ ಸುಖವೆಂದು ವಿಚಾರವನ್ನು ಮಾಡಿರುವುದಿಲ್ಲ. ಯಾವುದೇ ಶಾಸಕರನ್ನು ಕರೆದು ಹೇಗೆ ಮಾಡುವುದು ಎಂದು, ನಾವೂ ಕೂಡ ಈ ಬಗ್ಗೆ ಒತ್ತಡವನ್ನು ತಂದಿದ್ದೇವೆ, ಆದರೂ ಕೂಡ ಅವರು ಏನೂ ಮಾಡಿರುವುದಿಲ್ಲ.

ಛೇರ್ಮನ್: ಮಾನ್ಯ ಪಾಪಣ್ಣನವರೆ, ತಮಗೆ ಮಾತನಾಡಲು ಇನ್ನು ಎಷ್ಟು ಕಾಲಾವಕಾಶ ಬೇಕು. ತಾವು ದಯಮಾಡಿ ನಾಳೆಗೆ ಮುಂದುವರಿಸಿ.

ಶ್ರೀ ವಿ.ಪಾಪಣ್ಣ: ನಾನು ಎರಡು ದಿವಸದಿಂದ ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ಸದನದಲ್ಲಿ ಕುಳಿತಿದ್ದೇನೆ. ನನಗೆ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದಕ್ಕೆ ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ಸಾಲವನ್ನು ವಸೂಲಿ ಮಾಡುತ್ತಿಲ್ಲವೆಂದು ಹೇಳುತ್ತಾರೆ, ಮೊನ್ನೆ ಪಿಎಲ್‌ಡಿ ಬ್ಯಾಂಕಿನವರು

11-7-2001ರಲ್ಲಿ ಹರಾಜು ಮಾಡುವುದಕ್ಕೆ ಹೋಗಿದ್ದಾರೆ. ಸುಮಾರು 35 ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆಂದು ನನಗೆ ಬಂದಿರುವ ಅಂದಾಜಿನ ಪ್ರಕಾರ ಹೇಳುತ್ತಿದ್ದೇನೆ, ಇನ್ನೂ ಜಾಸ್ತಿ ಇದ್ದರೂ ಇರಬಹುದು. ನಾನು ಈ ಬಗ್ಗೆ ಒಂದೂವರೆ ತಿಂಗಳ ಹಿಂದೆಯೇ ಪತ್ರವನ್ನು ಕೊಟ್ಟಿದ್ದೇನೆ, ಅದಕ್ಕೇನೂ ಉತ್ತರವು ಇಲ್ಲಿಯವರೆವಿಗೂ ಬಂದಿರುವುದಿಲ್ಲ. ದಯಮಾಡಿ ಈ ಸರ್ಕಾರವು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಪ್ರಮಾಣವಚನವನ್ನು ಸ್ವೀಕರಿಸದ ತಹ ಸಂದರ್ಭದಲ್ಲಿ ಒಂದು ಹದಿನೈದು ದಿವಸಗಳು ಆದನಂತರ 7 ತಿಂಗಳು ಒಳ್ಳೆ ಮಳೆಯು ಬಂದಿತ್ತು.

ಪ್ಯೆಸ್ ಛೇರ್ಮನ್: ತಾವು ಬೆಳಿಗ್ಗೆ ಮುಂದುವರಿಸಿ. ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10-30 ಗಂಟೆ ಸೇರುವುದು.

(ಸದನವು ಸಂಜೆ 6 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 18ನೇ ಜುಲೈ ಮಾಹೆ 2001ರ ಬುಧವಾರದಂದು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು. ತುಮಕೂರು, ಕಾಸೂ. 142 - 350 ಪುಸ್ತಕಗಳು ದಿ: 21-09-2002